**ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಿಂದ ಪ್ರತಿ ತಿಂಗಳು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಸಲ್ಲಿಸಬೇಕಾದ ನಮೂನೆ**

| ಕ್ರ.ಸಂ. | ಅಂಶಗಳು | ಕಾರ್ಯದರ್ಶಿಗಳ ಷರಾ |
|---|---|---|
| 01 | ಜಿಲ್ಲೆಯ ಹೆಸರು | ಉಡುಪಿ ಜಿಲ್ಲೆ |
| 02 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ಹೆಸರು | ಎಂ.ಮಹೇಶ್ವರ್ ರಾವ್ |
| 03 | ಭೇಟಿಯಾದ/ ಪ್ರವಾಸದ ದಿನಾಂಕ | 21ನೇ ಸೆಪ್ಟೆಂಬರ್, 2019 |
| 04 | ಮುಖ್ಯವಾಗಿ ಗಮನಿಸಿದ ಅಂಶಗಳು | ಜಿಲ್ಲಾ ಪ್ರಗತಿ ಪರಿಶೀಲನೆ, ಬರಪರಿಸ್ಥಿತಿ ಹಾಗೂ ಇತ್ತೀಚೆಗೆ ಜಿಲ್ಲೆಯಲ್ಲಿ ಸುರಿದ ಮಳೆಯಿಂದ ಹಾನಿಗೊಳಗಾದ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸಲಾಯಿತು. ಸದರಿ ವಿಷಯದ ಬಗ್ಗೆ ನಡೆದ ಸಭೆಯ ಸಭಾ ನಡವಳಿಯನ್ನು ಸಹ ಇದರೊಡನೆ ಲಗತ್ತಿಸಿದೆ |

(ಎಂ.ಮಹೇಶ್ವರ್ ರಾವ್)
ಸರ್ಕಾರದ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ
(ಎಂಎಸ್‌ಎಂಇ ಮತ್ತು ಗಣಿ)
ಹಾಗೂ
ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

**ದಿನಾಂಕ:21.09.2019ರಂದು ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಮಳೆಯಿಂದ ಉಂಟಾದ ಹಾನಿಯ ಬಗ್ಗೆ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಡವಳಿ.**

ಈ ಕೆಳಕಂಡ ಇಲಾಖೆಯಿಂದ ಅಧಿಕಾರಿಗಳು ಭಾಗವಹಿಸಿದ್ದರು

- ಜಿಲ್ಲಾ ಪೊಲೀಸ್ ಅಧೀಕ್ಷಕರು ,ಉಡುಪಿ ಜಿಲ್ಲೆ, ಉಡುಪಿ
- ಸಹಾಯಕ ಕಮೀಷನರ್ ಕುಂದಾಪುರ
- ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ, ಮಣಿಪಾಲ ಉಡುಪಿ
- ಹಿರಿಯ ಭೂ ವಿಜ್ಞಾನಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಉಡುಪಿ ಜಿಲ್ಲೆ
- ಜಂಟಿ ಕೃಷಿ ನಿರ್ದೇಶಕರು ಕೃಷಿ ಇಲಾಖೆ ಉಡುಪಿ
- ಅಧೀಕ್ಷಕ ಇಂಜಿನಿಯರ್, ಮೆಸ್ಕಾಂ ಉಡುಪಿ
- ಉಪ ನಿರ್ದೇಶಕರು ತೋಟಗಾರಿಕೆ ಇಲಾಖೆ ಉಡುಪಿ
- ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ , ರಜತಾದ್ರಿ ಮಣಿಪಾಲ .
- ಉಪ ನಿರ್ದೇಶಕರು ಪದವಿಪೂರ್ವ ಶಿಕ್ಷಣ ಇಲಾಖೆ ರಜತಾದ್ರಿ ಮಣಿಪಾಲ
- ಪೌರಾಯುಕ್ತರು ನಗರ ಸಭೆ ಉಡುಪಿ
- ಕಾರ್ಯನಿರ್ವಾಹಕ ಇಂಜಿನಿಯರ್ ಪಂಚಾಯತ್ ಇಂಜಿನಿಯರಿಂಗ್ ವಿಭಾಗ ಉಡುಪಿ
- ಕಾರ್ಯನಿರ್ವಾಹಕ ಇಂಜಿನಿಯರ್ ಲೋಕೋಪಯೋಗಿ ಇಲಾಖೆ ಉಡುಪಿ
- ಕಾರ್ಯನಿರ್ವಾಹಕ ಇಂಜಿನಿಯರ್ ಬಂದರು ಮತ್ತು ಮೀನುಗಾರಿಕೆ ವಿಭಾಗ ಉಡುಪಿ
- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಉಡುಪಿ
- ಸಹಾಯಕ ನಿರ್ದೇಶಕರು, ಸಾರ್ವಜನಿಕ ಸಂಪರ್ಕ ಇಲಾಖೆ, ಉಡುಪಿ
- ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಸಣ್ಣ ನೀರಾವರಿ ಇಲಾಖೆ ಉಡುಪಿ
- ತಹಶೀಲ್ದಾರರು ಉಡುಪಿ, ಕುಂದಾಪುರ, ಕಾರ್ಕಳ, ಬೈಂದೂರು, ಬ್ರಹ್ಮಾವರ, ಕಾಪು, ಹೆಬ್ರಿ ತಾಲ್ಲೂಕುಗಳು ಹಾಗೂ ಇತರೆ ಅಧಿಕಾರಿಗಳು

***

ಉಡುಪಿ ಜಿಲ್ಲೆಯಲ್ಲಿ ಪ್ರಸಕ್ತ ಮುಂಗಾರು ಮಳೆಯು ಉತ್ತಮ ರೀತಿಯಲ್ಲಿ ಬಂದಿದ್ದು, ಇದುವರೆಗೆ 4397 ಮಿ.ಮೀ (ಶೇಕಡ +12%)ರಷ್ಟು ಮಳೆ ಹೆಚ್ಚುವರಿಯಾಗಿರುತ್ತದೆ. ಈ ವರ್ಷದಲ್ಲಿ (ಜನವರಿ 1 ರಿಂದ ಇಲ್ಲಿಯವರೆಗೆ 4426 ಮಿ.ಮೀ ಮಳೆಯಾಗಿದ್ದು ಹೆಚ್ಚುವರಿ 7% ಆಗಿರುತ್ತದೆ)

| MONTH | Normal Rainfall (mm) | ACTUAL Rainfall (mm) | Departure (mm) | 2018 Rainfall Status (mm) |
|---|---|---|---|---|
| March 2019 | 3.0 | 1.2 | - 1.8 | 5.1 |
| April 2019 | 28.0 | 15.9 | - 12.1 | 69.3 |
| May 2019 | 170.0 | 11.5 | - 158.5 | 357.4 |
| June 2019 | 1127.0 | 634.0 | -493.0 (-44% ಕೊರತೆ) | 1075.9 |
| July 2019 | 1457.0 | 1437.0 | -20.0 (-1% ಕೊರತೆ) | 1105.0 |
| August 2019 | 1048 | 1569 | +521 (+50% ಹೆಚ್ಚುವರಿ) | 1058 |
| September (1st to 20th ) | 307 | 757 | +450 (+147 % ಹೆಚ್ಚುವರಿ) | 37.6 |
| **Total** | **4140** | 4426 | + **286** | **3708** |

ಇದುವರೆಗೂ ಜಿಲ್ಲೆಯಲ್ಲಿ ಮಳೆಯಿಂದಾಗಿ ಹಾನಿಯಾಗಿರುವ ಬಗ್ಗೆ ಎಸ್‌ಡಿಆರ್‌ಎಫ್/ಎನ್‌ಡಿಆರ್‌ಎಫ್ ರಂತೆ ಪರಿಹಾರವನ್ನು ಸಂಬಂಧ ಪಟ್ಟ ತಾಲೂಕು ತಹಶೀಲ್ದಾರರ ಮೂಲಕ ಪರಿಹಾರವನ್ನು ಪಾವತಿಸಲಾಗಿರುತ್ತದೆ.

| ಕ್ರ. ಸಂ | ವಿವರ | ಹಾನಿಯಾದ ವಿವರ | | ಪರಿಹಾರ ನೀಡಿದ ವಿವರ | | ಪರಿಹಾರ ನೀಡಲು ಬಾಕಿ | |
|---|---|---|---|---|---|---|---|
| | | ಪ್ರಕರಣ | ಅಂದಾಜು ನಷ್ಟ | ಪ್ರಕರಣ | ಪರಿಹಾರ ಮೊತ್ತ | ಪ್ರಕರಣ | ಬಾಕಿ |
| 1 | ಮಾನವ ಜೀವ ಹಾನಿ | 6 | 3000000 | 6 | 3000000 | 0 | 0 |
| 2 | ಸಿಡಿಲಿನಿಂದ ಗಾಯಗೊಂಡವರು | 1 | 0 | 1 | 12700 | 0 | 0 |
| 3 | ಜಾನುವಾರು ಜೀವ ಹಾನಿ | 7 | 181000 | 7 | 166000 | 0 | 0 |
| 4 | ತೋಟಗಾರಿಕೆ ಬೆಳೆ ಹಾನಿ | 166 | 759013 | 155 | 390852 | 11 | 0 |
| 5 | ವಾಸ್ತವ್ಯದ ಪಕ್ಕಾ ಮನೆ ಪೂರ್ಣ ಹಾನಿ | 48 | 5016068 | 48 | 3471600 | 0 | 0 |
| 6 | ವಾಸ್ತವ್ಯದ ಪಕ್ಕಾ ಮನೆ ಭಾಗಶಃ ಹಾನಿ | 820 | 13062405 | 807 | 7732401 | 13 | 0 |
| 7 | ವಾಸ್ತವ್ಯದ ಕಚ್ಚಾ ಮನೆ ಪೂರ್ಣ ಹಾನಿ | 6 | 588300 | 6 | 570600 | 0 | 0 |
| 8 | ವಾಸ್ತವ್ಯದ ಕಚ್ಚಾ ಮನೆ ಭಾಗಶಃ ಹಾನಿ | 106 | 512100 | 106 | 460755 | 0 | 0 |

| | | | | | | | |
|---|---|---|---|---|---|---|---|
| 9 | ಇತರೆ (ಮನೆ ಕೊಟ್ಟಿಗೆ ಇತ್ಯಾದಿ) | 97 | 610900 | 97 | 203700 | 0 | 0 |
| 10 | ಬಟ್ಟೆ ಸಾಮಾಗ್ರಿ ಹಾನಿ | 20 | 40000 | 20 | 40000 | 0 | 0 |
| 11 | ಅಗತ್ಯವಸ್ತುಗಳ ಪೂರೈಕೆ | 4 | 40000 | 4 | 40000 | 0 | 0 |
| 12 | ಕೃಷಿ ಜಮೀನು (ಹೂಳು) | 86 | 521568 | 86 | 243442 | 0 | 0 |
| | ಒಟ್ಟು | 1367 | 24331354 | 1343 | 16332050 | 24 | 0 |

ಮಳೆಯಿಂದ ಹಾನಿಯಾಗಿರುವ ಕೃಷಿ ಮತ್ತು ತೋಟಗಾರಿಕಾ ಬೆಳೆಗಳು ಹಾನಿಯ ಬಗ್ಗೆ ವಿವರವನ್ನು ಪರಿಹಾರ ತಂತ್ರಾಂಶದ ಮೂಲಕ ಪಾವತಿಸುವ ಕುರಿತು ಪರಿಹಾರ ವೆಬ್ ಸೈಟ್ ನಲ್ಲಿ ಎಂಟ್ರಿಮಾಡುವ ಬಗ್ಗೆ ಸೂಕ್ತ ಕ್ರಮಕೈಗೊಳ್ಳುವಂತೆ ಜಂಟಿ ಕೃಷಿ ನಿರ್ದೇಶಕರು ಕೃಷಿ ಇಲಾಖೆ ಮತ್ತು ಉಪ ನಿರ್ದೇಶಕರು ತೋಟಗಾರಿಕೆ ಇಲಾಖೆ ಇವರಿಗೆ ಸೂಚಿಸಲಾಯಿತು. ಹಾಗೂ ಅಡಿಕೆ ಕೊಳೆರೋಗದ ಬಗ್ಗೆ ಪರಿಶೀಲನೆ ನಡೆಸಿ ವರದಿಯನ್ನು ಸಲ್ಲಿಸುವಂತೆ ಹಾಗೂ ಸಮುದಾಯ ನೀರಾವರಿ ಯೋಜನೆಯ ಅನುಷ್ಠಾನ ಕುರಿತಂತೆ ತೋಟಗಾರಿಕೆ ಇಲಾಖೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು,

ಜಿಲ್ಲೆಯಲ್ಲಿ ಬೆಳೆ ಸಮೀಕ್ಷೆ ಕಾರ್ಯಕ್ರಮದಡಿಯಲ್ಲಿ, ಪಿಎಂ ಕಿಸಾನ್ ಯೋಜನೆಯಲ್ಲಿ ರೈತರ ನೋಂದಣಿ ಮಾಡಲಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕರು ಕೃಷಿ ಇಲಾಖೆ ಉಡುಪಿ ಇವರು ತಿಳಿಸಿದರು

ಉಡುಪಿ ಜಿಲ್ಲೆಯಲ್ಲಿ ಮಳೆಯಿಂದಾಗಿ ಕೆಲವು ಭಾಗಗಳಲ್ಲಿ ಸಾರ್ವಜನಿಕ ರಸ್ತೆ ಮತ್ತು ಸೇತುವೆ, ಕಟ್ಟಡಗಳಿಗೆ ಹಾನಿ ಉಂಟಾಗಿರುತ್ತದೆ, ಈ ಕುರಿತು ಜಿಲ್ಲೆಯಲ್ಲಿ ಇದುವರೆಗೂ ಮಳೆಯಿಂದ ಹಾನಿಯಾಗಿರುವ ಬಗ್ಗೆ ಕಾರ್ಯನಿರ್ವಾಹಕ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಲೋಕೋಪಯೋಗಿ ಇಲಾಖೆ ಮತ್ತು ಮೆಸ್ಕಾಂ ಇವರಿಂದ ಪಡೆಯಲಾಗಿದ್ದು, ಹಾನಿಯಾಗಿರುವ ಸಾರ್ವಜನಿಕ ಸ್ವತ್ತು (ರಸ್ತೆ, ಸೇತುವೆ ಕಟ್ಟಡ) ಪುನರ್ ನಿರ್ಮಾಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಅಗತ್ಯವಿರುವ ಅಂದಾಜು ಮೊತ್ತ ರೂ.642.36ಕೋಟಿಗಳಾಗಿದ್ದು ಈ ಬಗ್ಗೆ ಸರಕಾರಕ್ಕೆ ವರದಿಯನ್ನು ಸಲ್ಲಿಸಿರುವ ಬಗ್ಗೆ ಜಿಲ್ಲಾಧಿಕಾರಿಯವರು ತಿಳಿಸಿದರು,

ಜಿಲ್ಲೆಯಲ್ಲಿ ಪ್ರಾಕೃತಿಕ ವಿಕೋಪದಿಂದ ರಸ್ತೆಗಳಲ್ಲಿ ಉಂಟಾಗಿರುವ ಗುಂಡಿಗಳನ್ನು ಮುಚ್ಚಲು ಕೂಡಲೇ ಕ್ರಮಕೈಗೊಳ್ಳುವಂತೆ ಸೂಚಿಸಿದರು ಜಿಲ್ಲಾ ಪಂಚಾಯತ್ ವ್ಯಾಪ್ತಿಯ ರಸ್ತೆಗಳಲ್ಲಿನ ಗುಂಡಿಗಳನ್ನು ಮುಚ್ಚುವಂತೆ ಕಾರ್ಯನಿರ್ವಾಹಕ ಇಂಜಿನಿಯರ್ ಪಂ.ರಾಜ್ ಇಂಜಿನಿಯರಿಂಗ್ ವಿಭಾಗ ಇವರಿಗೆ ಸೂಚಿಸಿದರು ಈ ಬಗ್ಗೆ ಕ್ರಿಯಾಯೋಜನೆಯನ್ನು ತಯಾರಿಸುವಂತೆ ತಿಳಿಸಿದರು, ಲೋಕೋಪಯೋಗಿ ಇಲಾಖೆಯ ರಸ್ತೆಗಳಿಗೆ ಸಂಬಂಧಿಸಿದಂತೆ ಈಗಾಗಲೇ ರೂ.10.85ಕೋಟಿ ಅನುದಾನ ಸರಕಾರದಿಂದ ನೇರವಾಗಿ ಲೋಕೋಪಯೋಗಿ ಇಲಾಖೆಗೆ ಬಿಡುಗಡೆಯಾಗಿದ್ದು ಈ ಬಗ್ಗೆ ಕ್ರಿಯಾಯೋಜನೆಯನ್ನು ತಯಾರಿಸಿ ಸದರಿ ಕಾಮಗಾರಿಗಳನ್ನು ಶೀಘ್ರದಲ್ಲಿ ನಡೆಸಲಾಗುವುದು ಎಂದು ಕಾರ್ಯನಿರ್ವಾಹಕ ಇಂಜಿನಿಯರ್ ಲೋಕೋಪಯೋಗಿ ಇಲಾಖೆ ಉಡುಪಿ ಇವರು ತಿಳಿಸಿದರು,

ಪ್ರಾಕೃತಿಕ ವಿಕೋಪ ನಿರ್ವಹಣೆಗೆ ಸಂಬಂಧಿಸಿದಂತೆ ಅಗತ್ಯವಿರುವ ರಕ್ಷಣಾ ಉಪಕರಣಗಳನ್ನು ಖರೀದಿಸಿ ಸಂಬಂಧಪಟ್ಟ ಇಲಾಖೆಗಳಿಗೆ ನೀಡುವಂತೆ ತಿಳಿಸಿದರು,

ನೆರೆ/ಪ್ರವಾಹದಿಂದ ಹಾನಿಯಾಗಿರುವ ಮನೆಗಳ ಮಾಹಿತಿಯನ್ನು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ತಂತ್ರಾಂಶದಲ್ಲಿ ದಾಖಲಿಸಲಾಗಿದ್ದು, ಜಿಪಿಎಸ್ ಮಾಡಿಸಿ ಸಂತ್ರಸ್ತರಿಗೆ ನಿಗಮದ ಮೂಲಕ ಮನೆ ನಿರ್ಮಾಣ ಮಾಡಲು ಅಗತ್ಯ ಕ್ರಮಕೈಗೊಳ್ಳುವಂತೆ ತಹಶೀಲ್ದಾರ್ ಗಳಿಗೆ ಸೂಚಿಸಿದರು.

ಜಿಲ್ಲೆಯಲ್ಲಿ ವಾಹನ ಸಂಚಾರ ದಟ್ಟಣೆ ನಿಯಂತ್ರಿಸಲು ಸುರಕ್ಷಿತ ಸ್ಕೈವಾಕ್ ಸ್ಟೇಷನ್ ನಿರ್ಮಾಣ ಮಾಡುವ ಬಗ್ಗೆ ಜಿಲ್ಲಾ ಪೊಲೀಸ್ ಅಧೀಕ್ಷಕರು, ಸಾರಿಗೆ ಅಧಿಕಾರಿ ಮತ್ತು ಸಂಬಂಧಪಟ್ಟ ಜಿಲ್ಲಾ ಅಧಿಕಾರಿಗಳು ಸಭೆ ನಡೆಸಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವಂತೆ ತಿಳಿಸಿದರು.

(ಎಂ. ಮಹೇಶ್ವರ್ ರಾವ್)
ಸರ್ಕಾರದ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಎಂಎಸ್ಎಂಇ & ಗಣಿ)
ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

**ದಿನಾಂಕ:21.09.2019ರಂದು ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಮಳೆಯಿಂದ ಉಂಟಾದ ಹಾನಿಯ ಬಗ್ಗೆ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಡವಳಿ.**

ಈ ಕೆಳಕಂಡ ಇಲಾಖೆಯಿಂದ ಅಧಿಕಾರಿಗಳು ಭಾಗವಹಿಸಿದ್ದರು

- ಜಿಲ್ಲಾ ಪೊಲೀಸ್ ಅಧೀಕ್ಷಕರು ,ಉಡುಪಿ ಜಿಲ್ಲೆ, ಉಡುಪಿ
- ಸಹಾಯಕ ಕಮೀಷನರ್ ಕುಂದಾಪುರ
- ಯೋಜನ ನಿರ್ದೇಶಕರು, ನಗರಾಭಿವೃದ್ಧಿ ಕೋಶ, ಮಣಿಪಾಲ ಉಡುಪಿ
- ಹಿರಿಯ ಭೂ ವಿಜ್ಞಾನಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಉಡುಪಿ ಜಿಲ್ಲೆ
- ಜಂಟಿ ಕೃಷಿ ನಿರ್ದೇಶಕರು ಕೃಷಿ ಇಲಾಖೆ ಉಡುಪಿ
- ಅಧೀಕ್ಷಕ ಇಂಜಿನಿಯರ್, ಮೆಸ್ಕಾಂ ಉಡುಪಿ
- ಉಪ ನಿರ್ದೇಶಕರು ತೋಟಗಾರಿಕೆ ಇಲಾಖೆ ಉಡುಪಿ
- ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ , ರಜತಾದ್ರಿ ಮಣಿಪಾಲ .
- ಉಪ ನಿರ್ದೇಶಕರು ಪದವಿಪೂರ್ವ ಶಿಕ್ಷಣ ಇಲಾಖೆ ರಜತಾದ್ರಿ ಮಣಿಪಾಲ
- ಪೌರಾಯುಕ್ತರು ನಗರ ಸಭೆ ಉಡುಪಿ
- ಕಾರ್ಯನಿರ್ವಾಹಕ ಇಂಜಿನಿಯರ್ ಪಂ.ರಾಜ್ ಇಂಜಿನಿಯರಿಂಗ್ ವಿಭಾಗ ಉಡುಪಿ
- ಕಾರ್ಯನಿರ್ವಾಹಕ ಇಂಜಿನಿಯರ್ ಲೋಕೋಪಯೋಗಿ ಇಲಾಖೆ ಉಡುಪಿ
- ಕಾರ್ಯನಿರ್ವಾಹಕ ಇಂಜಿನಿಯರ್ ಬಂದರು ಮತ್ತು ಮೀನುಗಾರಿಕೆ ವಿಭಾಗ ಉಡುಪಿ
- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಉಡುಪಿ
- ಸಹಾಯಕ ನಿರ್ದೇಶಕರು, ಸಾರ್ವಜನಿಕ ಸಂಪರ್ಕ ಇಲಾಖೆ, ಉಡುಪಿ
- ಸಹಾಯಕ [illegible] ಇಲಾಖೆ ಉಡುಪಿ
- ತಹಶೀಲ್ದಾರರು ಉಡುಪಿ, ಕುಂದಾಪುರ, ಕಾರ್ಕಳ, ಬೈಂದೂರು, ಬ್ರಹ್ಮಾವರ, ಕಾಪು, ಮತ್ತು ಹಾಜರಾತಿಯಂತೆ [illegible] ಅಧಿಕಾರಿಗಳು

***

[illegible] (ಶೇಕಡ +12%)ರಷ್ಟು ಮಳೆ ಹೆಚ್ಚುವರಿಯಾಗಿರುತ್ತದೆ. ಈ ವರ್ಷದಲ್ಲಿ (ಜನವರಿ 1 ರಿಂದ ಇಲ್ಲಿಯವರೆಗೆ 4426 ಮಿ.ಮೀ ಬಿದ್ದಿದ್ದು ಹೆಚ್ಚುವರಿ 7% ಆಗಿರುತ್ತದೆ)

| MONTH | Normal Rainfall (mm) | ACTUAL Rainfall (mm) | Departure (mm) | 2018 Rainfall Status (mm) |
|---|---|---|---|---|
| March 2019 | 3.0 | 1.2 | - 1.8 | 5.1 |
| April 2019 | 28.0 | 15.9 | - 12.1 | 69.3 |
| May 2019 | 170.0 | 11.5 | - 158.5 | 357.4 |
| June 2019 | 1127.0 | 634.0 | -493.0 (-44% ಕೊರತೆ) | 1075.9 |
| July 2019 | 1457.0 | 1437.0 | -20.0 (-1% ಕೊರತೆ) | 1105.0 |
| August 2019 | 1048 | 1569 | +521 (+50% ಹೆಚ್ಚುವರಿ) | 1058 |
| September (1st to 20th) | 307 | 757 | +450 (+147 % ಹೆಚ್ಚುವರಿ) | 37.6 |
| **Total** | **4140** | 4426 | **+ 286** | **3708** |

ಇದುವರೆಗೂ ಜಿಲ್ಲೆಯಲ್ಲಿ ಮಳೆಯಿಂದಾಗಿ ಹಾನಿಯಾಗಿರುವ ಬಗ್ಗೆ ಎಸ್‌ಡಿಆರ್‌ಎಫ್/ಎನ್‌ಡಿಆರ್‌ಎಫ್ ರಂತೆ ಪರಿಹಾರವನ್ನು ಸಂಬಂಧ ಪಟ್ಟ ತಾಲೂಕು ತಹಶೀಲ್ದಾರರ ಮೂಲಕ ಪರಿಹಾರವನ್ನು ಪಾವತಿಸಲಾಗಿರುತ್ತದೆ.

| ಕ್ರ. ಸಂ | ವಿವರ | ಹಾನಿಯಾದ ವಿವರ | | ಪರಿಹಾರ ನೀಡಿದ ವಿವರ | | ಪರಿಹಾರ ನೀಡಲು ಬಾಕಿ | |
|---|---|---|---|---|---|---|---|
| | | ಪ್ರಕರಣ | ಅಂದಾಜು ನಷ್ಟ | ಪ್ರಕರಣ | ಪರಿಹಾರ ಮೊತ್ತ | ಪ್ರಕರಣ | ಬಾಕಿ |
| 1 | ಮಾನವ ಜೀವ ಹಾನಿ | 6 | 3000000 | 6 | 3000000 | 0 | 0 |
| 2 | ಸಿಡಿಲಿನಿಂದ ಗಾಯಗೊಂಡವರು | 1 | 0 | 1 | 12700 | 0 | 0 |
| 3 | ಜಾನುವಾರು ಜೀವ ಹಾನಿ | 7 | 181000 | 7 | 166000 | 0 | 0 |
| 4 | ತೋಟಗಾರಿಕೆ ಬೆಳೆ ಹಾನಿ | 166 | 759013 | 155 | 390852 | 11 | 0 |
| 5 | ವಾಸ್ತವ್ಯದ ಪಕ್ಕಾ ಮನೆ ಪೂರ್ಣ ಹಾನಿ | 48 | 5016068 | 48 | 3471600 | 0 | 0 |
| 6 | ವಾಸ್ತವ್ಯದ ಪಕ್ಕಾ ಮನೆ ಭಾಗಶಃ ಹಾನಿ | 820 | 13062405 | 807 | 7732401 | 13 | 0 |
| 7 | ವಾಸ್ತವ್ಯದ ಕಚ್ಚಾ ಮನೆ ಪೂರ್ಣ ಹಾನಿ | 6 | 588300 | 6 | 570600 | 0 | 0 |
| 8 | ವಾಸ್ತವ್ಯದ ಕಚ್ಚಾ ಮನೆ ಭಾಗಶಃ ಹಾನಿ | 106 | 512100 | 106 | 460755 | 0 | 0 |

| | | | | | | | |
|---|---|---|---|---|---|---|---|
| 9 | ಇತರೆ (ದನದ ಕೊಟ್ಟಿಗೆ ಇತ್ಯಾದಿ) | 97 | 610900 | 97 | 203700 | 0 | 0 |
| 10 | ದಿನಸಿ ಸಾಮಾಗ್ರಿ ಹಾನಿ | 20 | 40000 | 20 | 40000 | 0 | 0 |
| 11 | ಅಗತ್ಯವಸ್ತುಗಳ ಪೂರೈಕೆ | 4 | 40000 | 4 | 40000 | 0 | 0 |
| 12 | ಕೃಷಿ ಬೆಳೆಹಾನಿ (ಭತ್ತ) | 86 | 521568 | 86 | 243442 | 0 | 0 |
| | ಒಟ್ಟು | 1367 | 24331354 | 1343 | 16332050 | 24 | 0 |

ಮಳೆಯಿಂದ ಹಾನಿಯಾಗಿರುವ ಕೃಷಿ ಮತ್ತು ತೋಟಗಾರಿಕಾ ಬೆಳೆಗಳ ಹಾನಿಯ ಬಗ್ಗೆ ವಿವರವನ್ನು ಪರಿಹಾರ ತಂತ್ರಾಂಶದ ಮೂಲಕ ಪಾವತಿಸುವ ಕುರಿತು ಪರಿಹಾರ ವೆಬ್ ಸೈಟ್ ನಲ್ಲಿ ಎಂಟ್ರಿ ಮಾಡುವ ಬಗ್ಗೆ ಸೂಕ್ತ ಕ್ರಮಕೈಗೊಳ್ಳುವಂತೆ ಜಂಟಿ ಕೃಷಿ ನಿರ್ದೇಶಕರು ಕೃಷಿ ಇಲಾಖೆ ಮತ್ತು ಉಪ ನಿರ್ದೇಶಕರು ತೋಟಗಾರಿಕೆ ಇಲಾಖೆ ಇವರಿಗೆ ಸೂಚಿಸಲಾಯಿತ್ತು, ಹಾಗೂ ಅಡಿಕೆ ಕೊಳೆರೋಗದ ಬಗ್ಗೆ ಪರಿಶೀಲನೆ ನಡೆಸಿ ವರದಿಯನ್ನು ಸಲ್ಲಿಸುವಂತೆ ಹಾಗೂ ಸಮುದಾಯ ನೀರಾವರಿ ಯೋಜನೆಯ ಅನುಷ್ಠಾನ ಕುರಿತಂತೆ ತೋಟಗಾರಿಕೆ ಇಲಾಖೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು,

ಜಿಲ್ಲೆಯಲ್ಲಿ ಬೆಳೆ ಸಮೀಕ್ಷೆ ಕಾರ್ಯಪ್ರಗತಿಯಲ್ಲಿದ್ದು, ಪಿಎಂ ಕಿಸಾನ್ ಯೋಜನೆಯಲ್ಲಿ ರೈತರ ನೋಂದಣಿ ಮಾಡಲಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕರು ಕೃಷಿ ಇಲಾಖೆ ಉಡುಪಿ ಇವರು ತಿಳಿಸಿದರು

ಉಡುಪಿ ಜಿಲ್ಲೆಯಲ್ಲಿ ಮಳೆಯಿಂದಾಗಿ ಕೆಲವು ಭಾಗಗಳಲ್ಲಿ ಸಾರ್ವಜನಿಕ ರಸ್ತೆ, ಮತ್ತು ಸೇತುವೆ, ಕಟ್ಟಡಗಳಿಗೆ ಹಾನಿ ಉಂಟಾಗಿರುತ್ತದೆ. ಈ ಕುರಿತು ಜಿಲ್ಲೆಯಲ್ಲಿ ಇದುವರೆಗು ಮಳೆಯಿಂದ ಹಾನಿಯಾಗಿರುವ ಬಗ್ಗೆ ಕಾರ್ಯನಿರ್ವಾಹಕ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಲೋಕೋಪಯೋಗಿ ಇಲಾಖೆ ಮತ್ತು ಮೆಸ್ಕಾಂ ಇವರಿಂದ ಪಡೆಯಲಾಗಿದ್ದು. ಹಾನಿಯಾಗಿರುವ ಸಾರ್ವಜನಿಕ ಸ್ವತ್ತು (ರಸ್ತೆ, ಸೇತುವೆ ಕಟ್ಟಡ) ಪುನರ್ ನಿರ್ಮಾಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಅಗತ್ಯವಿರುವ [illegible] ಬಗ್ಗೆ ಜಿಲ್ಲಾಧಿಕಾರಿಯವರು ತಿಳಿಸಿದರು,

[illegible] ಕೂಡಲೇ [illegible] ಕಾರ್ಯನಿರ್ವಾಹಕ ಇಂಜಿನಿಯರ್ ಪಂ.ರಾಜ್ ಇಂಜಿನಿಯರಿಂಗ್ ವಿಭಾಗ ಇವರಿಗೆ ಸೂಚಿಸಿದರು ಈ ಬಗ್ಗೆ ಕ್ರಿಯಾಯೋಜನೆಯನ್ನು ತಯಾರಿಸುವಂತೆ ತಿಳಿಸಿದರು, ಲೋಕೋಪಯೋಗಿ ಇಲಾಖೆಯ ರಸ್ತೆಗಳಿಗೆ ಸಂಬಂಧಿಸಿದಂತೆ ಈಗಾಗಲೇ ರೂ.10.85ಕೋಟಿ ಅನುದಾನ ಸರಕಾರದಿಂದ ನೇರವಾಗಿ ಲೋಕೋಪಯೋಗಿ ಇಲಾಖೆಗೆ ಬಿಡುಗಡೆಯಾಗಿದ್ದು ಈ ಬಗ್ಗೆ ಕ್ರಿಯಾಯೋಜನೆಯನ್ನು ತಯಾರಿಸಿ ದುರಸ್ತಿ ಕಾಮಗಾರಿಗಳನ್ನು ಶೀಘ್ರದಲ್ಲಿ ನಡೆಸಲಾಗುವುದು ಎಂದು ಕಾರ್ಯನಿರ್ವಾಹಕ ಇಂಜಿನಿಯರ್ ಲೋಕೋಪಯೋಗಿ ಇಲಾಖೆ ಉಡುಪಿ ಇವರು ತಿಳಿಸಿದರು,

ಪ್ರಾಕೃತಿಕ ವಿಕೋಪ ನಿರ್ವಹಣೆಗೆ ಸಂಬಂಧಿಸಿದಂತೆ ಅಗತ್ಯವಿರುವ ರಕ್ಷಣಾ ಉಪಕರಣಗಳನ್ನು ಖರೀದಿಸಿ ಸಂಬಂಧಪಟ್ಟ ಇಲಾಖೆಗಳಿಗೆ ನೀಡುವಂತೆ ತಿಳಿಸಿದರು,

ನೆರೆ/ಪ್ರವಾಹದಿಂದ ಹಾನಿಯಾಗಿರುವ ಮನೆಗಳ ಮಾಹಿತಿಯನ್ನು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ತಂತ್ರಾಂಶದಲ್ಲಿ ದಾಖಲಿಸಲಾಗಿದ್ದು, ಜಿಪಿಎಸ್ ಮಾಡಿ ಸಂತ್ರಸ್ತರಿಗೆ ನಿಗಮದ ಮೂಲಕ ಮನೆ ನಿರ್ಮಾಣ ಮಾಡಲು ಅಗತ್ಯ ಕ್ರಮಕೈಗೊಳ್ಳುವಂತೆ ತಹಶೀಲ್ದಾರ್ ರಿಗೆ ಸೂಚಿಸಿದರು,

ಜಿಲ್ಲೆಯಲ್ಲಿ ವಾಹನ ಸಂಚಾರ ದಟ್ಟಣೆ ನಿಯಂತ್ರಿಸಲು ಸುರಕ್ಷಿತ [illegible] ಬಗ್ಗೆ ಜಿಲ್ಲಾ ಪೊಲೀಸ್ ಅಧೀಕ್ಷಕರು, ಸಾರಿಗೆ ಅಧಿಕಾರಿ ಹಾಗೂ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳ ಸಭೆ ನಡೆಸಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವಂತೆ ತಿಳಿಸಿದರು.

(ಎಂ. ಮಹೇಶ್ವರ್ ರಾವ್)
ಸರ್ಕಾರದ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಎಂಎಸ್ಎಂಇ & ಗಣಿ)
ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಜಲಸಂಪನ್ಮೂಲ ಇಲಾಖೆ ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಇವರ ಅಧ್ಯಕ್ಷತೆಯಲ್ಲಿ ದಿನಾಂಕ:10.09.2019 ರಂದು ಮುಂಜಾನೆ 11.00 ಗಂಟೆಗೆ ಬರಗಾಲ ಪರಿಸ್ಥಿತಿಯ ಕುರಿತು ಪರಿಶೀಲನಾ ಸಭೆಯ ನಡುವಳಿಗಳು.

ಸಭೆಗೆ ಹಾಜರಿದ್ದ ಅಧಿಕಾರಿಗಳು:

1. ಜಿಲ್ಲಾಧಿಕಾರಿಗಳು ಬೆಳಗಾವಿ ಜಿಲ್ಲೆ
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ ಬೆಳಗಾವಿ.
3. ಅಪರ ಜಿಲ್ಲಾಧಿಕಾರಿಗಳು, ಬೆಳಗಾವಿ
4. ಆಯುಕ್ತರು, ಮಹಾನಗರ ಪಾಲಿಕೆ, ಬೆಳಗಾವಿ
5. ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಳಗಾವಿ.
6. ಉಪವಿಭಾಗಾಧಿಕಾರಿಗಳು, ಬೆಳಗಾವಿ, ಬೈಲಹೊಂಗಲ, ಚಿಕ್ಕೋಡಿ.
7. ಅಧೀಕ್ಷಕ ಅಭಿಯಂತರರು, ಹೆಸ್ಕಾಂ ಬೆಳಗಾವಿ,ಚಿಕ್ಕೋಡಿ.
8. ಜಂಟಿ ಕೃಷಿ ನಿರ್ದೇಶಕರು, ಬೆಳಗಾವಿ.
9. ಉಪ-ನಿರ್ದೇಶಕರು, ಪಶು ಪಾಲನೆ ಇಲಾಖೆ, ಬೆಳಗಾವಿ.
10. ಉಪ-ನಿರ್ದೇಶಕರು, ಆಹಾರ ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಳಗಾವಿ.
11. ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಅಧಿಕಾರಿಗಳು, ಬೆಳಗಾವಿ .
12. ಅಪರ ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಅಧಿಕಾರಿಗಳು, ಚಿಕ್ಕೋಡಿ
13. ಉಪ-ನಿರ್ದೇಶಕರು ತೋಟಗಾರಿಕೆ ಇಲಾಖೆಬೆಳಗಾವಿ.
14. ಉಪ-ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ ಬೆಳಗಾವಿ.
15. ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಬೆಳಗಾವಿ.
16. ಉಪ-ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಳಗಾವಿ, ಚಿಕ್ಕೋಡಿ.
17. ಉಪ-ನಿರ್ದೇಶಕರು ವಾರ್ತಾ ಮತ್ತು ಪ್ರಚಾರ ಇಲಾಖೆ ಬೆಳಗಾವಿ.
18. ಅಧೀಕ್ಷಕ ಅಭಿಯಂತರರು, ಕನೀನಿನಿ ಜಿಆರ್‌ಬಿಸಿಸಿ ವೃತ್ತ ಹಿಡಕಲ್ ಡ್ಯಾಂ.
19. ಅಧೀಕ್ಷಕ ಅಭಿಯಂತರರು, ಕನೀನಿನಿ ಜಿಆರ್‌ಬಿಸಿಸಿ ವೃತ್ತ ನವಿಲುತೀರ್ಥ .
20. ಕಾರ್ಯನಿರ್ವಾಹಕ ಅಭಿಯಂತರು, ಗ್ರಾಕುನೀ& ನೈರ್ಮಲ್ಯ ವಿಭಾಗ, ಬೆಳಗಾವಿ, ಚಿಕ್ಕೋಡಿ.
21. ತಹಶೀಲ್ದಾರರು, ಬೆಳಗಾವಿ, ಖಾನಾಪೂರ, ಹುಕ್ಕೇರಿ, ಬೈಲಹೊಂಗಲ, ಕಿತ್ತೂರು, ಸವದತ್ತಿ, ರಾಮದುರ್ಗ, ಗೋಕಾಕ, ಚಿಕ್ಕೋಡಿ, ರಾಯಬಾಗ, ಅಥಣಿ, ಮೂಡಲಗಿ, ಕಾಗವಾಡ, ನಿಪ್ಪಾಣಿ.

ಸಭೆಯ ಪ್ರಾರಂಭದಲ್ಲಿ ಹಾಜರಿದ್ದ ಎಲ್ಲ ಅಧಿಕಾರಿಗಳವರನ್ನು ಅಪರ ಜಿಲ್ಲಾಧಿಕಾರಿಗಳು ಬೆಳಗಾವಿ ಇವರು ಅಭಿನಂದಿಸಿ ಸಭೆಯನ್ನು ಪ್ರಾರಂಭಿಸಿದರು. ಬೆಳಗಾವಿ ಜಿಲ್ಲೆಯ ಕುರಿತು ಸಾಮಾನ್ಯ ಮಾಹಿತಿ ಹಾಗೂ ಋತುಮಾನ ಪರಿಸ್ಥಿತಿಯ ಬಗ್ಗೆ ಸಭೆಗೆ ಮಾಹಿತಿಯನ್ನು ನೀಡಿದರು.

ಜಿಲ್ಲೆಯಲ್ಲಿ ಆಗಿರುವ ಮಳೆಯ ವಿವರವನ್ನು ಜಂಟಿ ಕೃಷಿ ನಿರ್ದೇಶಕರು, ಬೆಳಗಾವಿ ಇವರು ಮಾರ್ಚ 2019 ರಿಂದ ಮೇ 2019ರವರೆಗೆ 106.0 ಮಿಮೀ ವಾಡಿಕೆ ಮಳೆಯಾಗಿದ್ದು, 31 ಮಿಮೀ ವಾಸ್ತವಿಕ ಮಳೆ ಆಗಿರುತ್ತದೆ. ಶೇ-71ರಷ್ಟು ಕೊರತೆಯಿರುತ್ತದೆ. ಜೂನ್ 2019ರಿಂದ ಸಪ್ಟೆಂಬರ 2019ವರೆಗೆ 518.00 ಮಿಮೀ ವಾಡಿಕೆ ಮಳೆಯಾಗಿದ್ದು, 842.00 ಮಿಮೀ ವಾಸ್ತವಿಕ ಮಳೆ ಆಗಿರುತ್ತದೆ. ಶೇ62 ರಷ್ಟು ಮಳೆ ಆಗಿದೆ.

2019ನೇ ಮುಂಗಾರು ಹಂಗಾಮಿನಲ್ಲಿ 718351 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಗುರಿ ಹೊಂದಿದ್ದು, ಇದರಲ್ಲಿ 666841 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದ್ದು, 92.8%ರಷ್ಟು ಬಿತ್ತನೆ ಆಗಿದೆ ಎಂದು ಸಭೆಗೆ ತಿಳಿಸಿದರು. ಅತಿವೃಷ್ಟಿ/ಪ್ರವಾಹದಿಂದ ಜಿಲ್ಲೆಯ ಒಟ್ಟು 277520.9 ಹೆಕ್ಟೇರ್ ಪ್ರದೇಶದಲ್ಲಿಯ ಬೆಳೆಗಳು ಭಾಧಿತವಾಗಿರುತ್ತವೆ ಎಂದು ಸಭೆಗೆ ವಿವರಿಸಿದರು.

ಜಿಲ್ಲಾಧಿಕಾರಿಗಳು ಮಾತನಾಡಿ, ಜಿಲ್ಲೆಯ ಎಲ್ಲ ತಾಲೂಕು, ಉಪವಿಭಾಗ ಮಟ್ಟದಲ್ಲಿ 24*7 ಗಂಟೆಗಳ ಕಾಲ ಕಾರ್ಯ ನಿರ್ವಹಿಸಲು ನಿಯಂತ್ರಣ ಕೊಠಡಿಗಳನ್ನು ತೆರೆದು, ಅಗತ್ಯವಾದ ಸಿಬ್ಬಂದಿಗಳನ್ನು ನಿಯೋಜಿಸತಕ್ಕದ್ದು. ನದಿ ಪಾತ್ರದಲ್ಲಿ ಬರುವಂತಹ ಗ್ರಾಮಗಳ ಜನರಿಗೆ ಬೇರೆಡೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳಬೇಕು. ಪೋಲಿಸ್ ಇಲಾಖೆಯವರು, ಅಗ್ನಿಶ್ಯಾಮಕ ಸಿಬ್ಬಂದಿಗಳನ್ನು, ರಾಜ್ಯ ವಿಪತ್ತು ಸ್ಪಂದನಾ ಪಡೆ "ಸಿ" ಕಂಪನಿ, ಸಮಾದೇಷ್ಟರು ಜಿಲ್ಲಾ ಗೃಹರಕ್ಷಕದ ದಳ ಬೆಳಗಾವಿ, ಪಂಚಾಯತ ರಾಜ ಇಂಜನೀಯರಿಂಗ ಹಾಗೂ ಲೋಕೋಪಯೋಗಿ ಇಲಾಖೆಯ ಅಭಿಯಂತರರು ಪ್ರವಾಹದ ಸಂದರ್ಭದಲ್ಲಿ ಬೇಕಾಗುವ ಅಗತ್ಯವಾದ ಬೋಟಗಳನ್ನು ಸೇರಿದಂತೆ ಇನ್ನೀತರ ರಕ್ಷಣಾ ಸಾಮಗ್ರಿಗಳನ್ನು ಹಾಗೂ ಸಿಬ್ಬಂದಿಗಳನ್ನು ಯಾವುದೇ ಸಮಯದಲ್ಲಿ ಉಪಯೋಗಿಸುವ ಸ್ಥಿತಿಯಲ್ಲಿ ಸಿದ್ಧವಾಗಿಟ್ಟುಕೊಳ್ಳಬೇಕು. ಹೆಸ್ಕಾಂ ಇಲಾಖೆಯವ್‌ರು ನದಿ ಪಾತ್ರದಲ್ಲಿ ಬರುವಂತಹ ವಿದ್ಯುತ್ ಕಂಬಗಳನ್ನು ಬೇರೆಡೆಗೆ ಸ್ಥಳಾಂತರಿಸಲು ಅಥವಾ ಅದಕ್ಕೆ ಬೇಕಾಗುವ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಅದೇ ರೀತಿಯಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಳಗಾವಿ, ಚಿಕ್ಕೋಡಿ ಇವರು ಅಗತ್ಯವಾದ ನುರಿತ ವೈದ್ಯರು, ಸಿಬ್ಬಂಧಿ ಹಾಗೂ ಔಷಧ್‌ಗಳೊಂದಿಗೆ ಪ್ರವಾಹಪೀಡಿತ ಸ್ಥಳಗಳಲ್ಲಿ ಸನ್ನದ್ದರಾಗಿರಬೇಕು. ಸಂಬಂಧಿಸಿದ ಉಪ ವಿಭಾಗಾಧಿಕಾರಿಗಳು ತಮ್ಮ ಉಪವಿಭಾಗ ವ್ಯಾಪ್ತಿಯಲ್ಲಿ ಅತಿವೃಷ್ಟಿ/ಪ್ರವಾಹದ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಕುರಿತು ಸಾರ್ವಜನಿಕರಿಗೆ ಅಗತ್ಯವಾದ ತಿಳುವಳಿಕೆಯನ್ನು ಹಾಗೂ ಜಿಲ್ಲಾ ಆಡಳಿತ ವತಿಯಿಂದ ಕೈಗೊಳ್ಳಲಾಗುತ್ತಿರುವ ಕ್ರಮಗಳ ಬಗ್ಗೆ ದಿನಪತ್ರಿಕೆ ಹಾಗೂ ಮಾಧ್ಯಮಗಳ ಮೂಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ವ್ಯಾಪಕವಾಗಿ ಪ್ರಚಾರ ಕಾರ್ಯವನ್ನು ಕೈಗೊಳ್ಳಬೇಕು. ಯಾವುದೇ ಇಲಾಖೆಯ ಜಿಲ್ಲಾ, ಉಪವಿಭಾಗ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ತಮ್ಮ ಕೇಂದ್ರಸ್ಥಾನವನ್ನು ಬಿಟ್ಟು ಹೋಗಬಾರದು. ಎಲ್ಲ ಮುಂಜಾಗ್ರತಾ ಕ್ರಮಗಳನ್ನು ಜರುಗಿಸಿ, ಜನ-ಜಾನುವಾರುಗಳಿಗೆ ಜೀವಹಾನಿ ಹಾಗೂ ಸಾರ್ವಜನಿಕ ಆಸ್ತಿಗಳಿಗೆ ಹಾನಿ ಸಂಭವಿಸದಂತೆ ಕ್ರಮ ಜರುಗಿಸಲು ಜಿಲ್ಲೆಯ ಎಲ್ಲ ಇಲಾಖೆಗಳಿಗೆ ಹಾಗೂ ಉಪವಿಭಾಗಾಧಿಕಾರಿಗಳಿಗೆ, ತಹಶೀಲ್ದಾರರಿಗೆ ಸೂಚನೆಗಳನ್ನು ನೀಡಲಾಗಿರುತ್ತದೆ.

ನಂತರ ಮಹಾರಾಷ್ಟ್ರ ರಾಜ್ಯದ ಜಲಾಶಯಗಳಿಂದ ಬಿಡಲಾಗುತ್ತಿರುವ ನೀರಿನಿಂದಾಗಿ ಹಾಗೂ ಜಿಲ್ಲೆಗೆ ಆಗಿರುವ ಅತಿವೃಷ್ಟಿಯಿಂದಾಗಿ ಜಿಲ್ಲೆಯಲ್ಲಿನ ಕೃಷ್ಣಾ, ವೇದಗಂಗಾ, ದೂಧಗಂಗಾ, ಘಟಪ್ರಭಾ, ಹಿರಣ್ಯಕೇಶಿ, ಮಾರ್ಕಂಡೇಯ, ಮಲಪ್ರಭಾ ನದಿಗಳಿಗೆ ಪ್ರವಾಹ ಬಂದು, ಚಿಕ್ಕೋಡಿ ತಾಲೂಕಿನ 08, ರಾಯಬಾಗ ತಾಲೂಕಿನ 02, ಅಥಣಿ ತಾಲೂಕಿನ 06 ಬ್ರಿಡ್ಜ್ ಕಂ ಬ್ಯಾರೇಜುಗಳ ಮೇಲೆ ನೀರು ಹರಿದಿರುತ್ತದೆ. ಅದೇ ರೀತಿ, ಖಾನಾಪೂರ ತಾಲೂಕಿನಲ್ಲಿ ಉಂಟಾದ ಅತಿವೃಷ್ಟಿಯಿಂದಾಗಿ ಮಲಪ್ರಭಾ ನದಿಗೆ ಪ್ರವಾಹ ಬಂದು 03 ಸೇತುವೆಗಳು ಹಾಗೂ ಘಟಪ್ರಭಾ, ಹಿರಣ್ಯಕೇಶಿ ನದಿಗಳಿಂದಾಗಿ ಗೋಕಾಕ, ಮೂಡಲಗಿ ತಾಲೂಕುಗಳ 06 ರಸ್ತೆ/ಸೇತುವೆಗಳು ನೀರಿನಲ್ಲಿ ಮುಳುಗಿರುತ್ತವೆ. ಜಿಲ್ಲೆಯ ಎಲ್ಲ 14 ತಾಲೂಕುಗಳು ಭಾಧಿತವಾಗಿವೆ. ಒಟ್ಟು 872 ಗ್ರಾಮಗಳು ಬಾಧಿತಗೊಂಡಿದ್ದು, ಈವರೆಗೆ 112702 ಕುಟುಂಬಗಳ 4,15,293 ಜನರನ್ನು ಹಾಗೂ 1,10,868 ಜಾನುವಾರುಗಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ. ಜಿಲ್ಲೆಯಲ್ಲಿ ಒಟ್ಟು 493 ಪರಿಹಾರ ಕೇಂದ್ರಗಳನ್ನು ತೆರೆಯಲಾಗಿತ್ತು. ಪ್ರಸ್ತುತ ಪ್ರವಾಹ ಇಳಿಮುಖವಾಗಿದ್ದರಿಂದ ಕೇವಲ 08 ಪರಿಹಾರ ಕೇಂದ್ರಗಳು ಮಾತ್ರ ಚಾಲ್ತಿಯಲ್ಲಿದ್ದು, ಈ ಕೇಂದ್ರಗಳಲ್ಲಿ 1372 ಜನರು ಆಶ್ರಯ ಪಡೆದಿರುತ್ತಾರೆ. ಜಾನುವಾರುಗಳಿಗೆ ಆಶ್ರಯ ಕಲ್ಪಿಸುವ ಹಿನ್ನೆಲೆಯಲ್ಲಿ ಒಟ್ಟು 230ಜಾನುವಾರು ಶಿಬಿರಗಳನ್ನು ತೆರೆಯಲಾಗಿತ್ತು.

ಸದ್ಯಕ್ಕೆ 12 ಜಾನುವಾರು ಶಿಬಿರಗಳು ಚಾಲ್ತಿಯಲ್ಲಿದ್ದು, 85 ಜಾನುವಾರುಗಳು ಆಶ್ರಯ ಪಡೆದಿರುತ್ತವೆ. ಪ್ರಕೃತಿ ವಿಕೋಪದಿಂದ ಒಟ್ಟು 25 ಜನರು ಮೃತಪಟ್ಟಿದ್ದು ಇವುಗಳಲ್ಲಿ 24 ಜನರ ಕುಟುಂಬಗಳ ವಾರಸುದಾರರಿಗೆ ರೂ.110.00ಲಕ್ಷಗಳನ್ನು ಪರಿಹಾರ ವಿತರಿಸಲಾಗಿದೆ. 03 ಜನರು ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿದ್ದು, ಸದರಿಯವರು ಪತ್ತೆಯಾಗಿರುವುದಿಲ್ಲ. 761 ಜಾನುವಾರುಗಳು ಮೃತಪಟ್ಟಿವೆ. 80253 ಮನೆಗಳು ಹಾನಿಗೊಳಗಾಗಿರುತ್ತವೆ. ಇವುಗಳ ಪೈಕಿ ರಾಜೀವ ಗಾಂಧಿ ವಸತಿ ನಿಗಮ ನಿಯಮಿತ ಇವರ ತಂತ್ರಾಂಶದಲ್ಲಿ 40754 ಮನೆಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಇಂಧಿಕರಿಸಲಾಗಿದೆ. 39499 ಮನೆಗಳ ದಾಖಲೆಗಳನ್ನು ಇಂಧೀಕರಿಸಬೇಕಾಗಿರುತ್ತದೆ. ಅತಿವೃಷ್ಟಿ/ಪ್ರವಾಹದಿಂದ ಹಾನಿಗೊಳಗಾದ 112702 ಕುಟುಂಬಗಳ ಪೈಕಿ 110773 ಕುಟುಂಬಗಳಿಗೆ ತಲಾ ರೂ.10,000/-ಗಳಂತೆ ಪರಿಹಾರವನ್ನು ಸಂದಾಯ ಮಾಡಲಾಗಿದೆ. ಇನೂ 1929 ಕುಟುಂಬಗಳಿಗೆ ಸಂದಾಯ ಮಾಡುವುದು ಶಿಲ್ಕು ಇರುತ್ತದೆ. ರೂ.4608.42 ಕೋಟಿಗಳ ಮೊತ್ತದ ಸಾರ್ವಜನಿಕ ಆಸ್ತಿಗಳು ಹಾನಿಯಾಗಿರುವುದಾಗಿ ವರದಿಯಾಗಿದೆ ಎಂದು ಸಭೆಗೆ ವಿವರಿಸಿದರು.

ಮುಂದುವರೆದು, ಜಿಲ್ಲಾಧಿಕಾರಿಗಳ ಪಿಡಿ ಖಾತೆಯಲ್ಲಿ ಬರಪರಿಹಾರ ಕಾರ್ಯಗಳಿಗಾಗಿ ಹಾಗೂ ಅತೀವೃಷ್ಟಿ/ಪ್ರವಾಹದ ಪರಿಹಾರಗಳಿಗಾಗಿ ಒಟ್ಟು ರೂ. 18924.07ಲಕ್ಷ ಲಭ್ಯವಿದ್ದು, ಇದರಲ್ಲಿ ರೂ.18090.47 ಲಕ್ಷ ಬಿಡುಗಡೆ ಮಾಡಿದ್ದು, ಇನ್ನೂ ರೂ.833.60 ಲಕ್ಷ ಶಿಲ್ಕು ಇರುತ್ತದೆ. ಈಗಾಗಲೇ ಜಿಲ್ಲೆಯ ಎಲ್ಲ ತಹಶೀಲ್ದಾರರಿಗೆ ಜಿಲ್ಲೆಯಲ್ಲಿ ತೆರೆಯಲಾದ ಪರಿಹಾರ ಕೇಂದ್ರಗಳ ನಿರ್ವಹಣೆ, ಜನ-ಜಾನುವಾರುಗಳ ರಕ್ಷಣೆಗಾಗಿ ಕೈಗೊಂಡ ರಕ್ಷಣಾ ಕಾರ್ಯಗಳಿಗೆ ತಗುಲಿದ ವೆಚ್ಚಗಳನ್ನು ಭರಿಸಲು ಹಾಗೂ ಅತೀವೃಷ್ಟಿ/ಪ್ರವಾಹದಿಂದ ಉಂಟಾಗಬಹುದಾದ ಮಾನವ, ಜೀವ ಹಾನಿ, ಜಾನುವಾರು, ಮನೆಗಳ ಹಾನಿಗಳಿಗೆ ಸರ್ಕಾರದ ಮಾರ್ಗಸೂಚಿಯ ಅನ್ವಯ ಪರಿಹಾರದ ಮೊತ್ತವನ್ನು ವಿತರಿಸಲು ಒಟ್ಟು ರೂ.16573.38ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ಬಂದು ಬಿದ್ದಿರುವ ಗಿಡಗಂಟಿಗಳು, ಮಣ್ಣಿನ ಕೆಸರನ್ನು, ಕಸಕಡ್ಡಿ (Debris), ಪ್ರವಾಹದ ನೀರನ್ನು (Draining off flood water in affected area) ತೆರವುಗೊಳಿಸುವುದು ಹಾಗೂ ಮೃತ ದೇಹಗಳನ್ನು/ಶವಗಳನ್ನು ವಿಲೇವಾರಿ (Disposal of dead bodies/Carcases) ಮಾಡುವ ಕ್ರಮಗಳನ್ನು ಸಂಬಂಧಿಸಿದ ಆಯಾ ಗ್ರಾಮ ಪಂಚಾಯತಗಳ ಮೂಲಕ ಕೈಗೊಳ್ಳಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ ಬೆಳಗಾವಿ ಇವರಿಗೆ ರೂ.200.00ಲಕ್ಷ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳಿಗೆ ರೂ.36.00ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಪಿಡಿ ಖಾತೆಯಲ್ಲಿ ಲಭ್ಯವಿರುವ ಮೊತ್ತವನ್ನು ಅತೀವೃಷ್ಟಿ/ಪ್ರವಾಹದ ಪರಿಹಾರಗಳಿಗಾಗಿ ಬಳಸಿಕೊಳ್ಳಲಾಗುವುದು. ಪಿಡಿ ಖಾತೆಯಲ್ಲಿನ ಮೊತ್ತವನ್ನು ಹೊರತುಪಡಿಸಿ ತಹಶೀಲ್ದಾರರಲ್ಲಿ ರೂ.736.69 ಲಕ್ಷ ಅನುದಾನ ಲಭ್ಯವಿರುತ್ತದೆ. ಸದರಿ ಅನುದಾನವನ್ನು ಅವಶ್ಯಕತೆಗೆ ಅನುಸಾರವಾಗಿ ಬಳಸಿಕೊಳ್ಳಲಾಗುವುದು ಎಂದು ಸಭೆಗೆ ವಿವರಿಸಿದರು.

ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಜಲಸಂಪನ್ಮೂಲ ಇಲಾಖೆ ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಇವರು ಮಾತನಾಡಿ ಮುಂಜಾಗೃತಾ ಕ್ರಮ ಹಾಗೂ ಅನಾವೃಷ್ಠಿಯ ಕುರಿತು ಈ ಕೆಳಕಂಡ ಕ್ರಮಗಳನ್ನು ಕೈಕೊಳ್ಳುವಂತೆ ಸಭೆಗೆ ಹಾಜರಿದ್ದ ಎಲ್ಲ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡಿದರು.

1. ಯಾವುದೇ ಇಲಾಖೆಯ ಜಿಲ್ಲಾ, ಉಪವಿಭಾಗ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ತಮ್ಮ ಕೇಂದ್ರಸ್ಥಾನವನ್ನು ಬಿಟ್ಟು ಹೋಗಬಾರದು.
2. ಸಂಬಂಧಿಸಿದ ತಹಶೀಲ್ದಾರರು ಎನ್‌ಡಿಆರ್‌ಎಫ್/ಎಸ್‌ಡಿಆರ್‌ಎಫ್ ಮಾರ್ಗಸೂಚಿಯನ್ವಯ ಅರ್ಹ ಸಂತ್ರಸ್ತ ಕುಟುಂಬವನ್ನು ಆಯ್ಕೆ ಮಾಡಿ, ಪರಿಹಾರ ಧನವನ್ನು ವಿತರಿಸಲು ನಿಯಮಾನುಸಾರ ಕ್ರಮ ಜರುಗಿಸಿ, ಪರಿಹಾರವನ್ನು ವಿತರಣೆ ಮಾಡಿದ ಬಗ್ಗೆ ದೃಢೀಕೃತ

ಫೋಟೋಗಳ ದಾಖಲೆಗಳನ್ನು ನಿರ್ವಹಿಸತಕ್ಕದ್ದು. ಬಿಡುಗಡೆ ಮಾಡಿದ ಅನುದಾನವನ್ನು ಸರ್ಕಾರವು ಕಾಲ-ಕಾಲಕ್ಕೆ ಹೊರಡಿಸಿದ ಮಾರ್ಗಸೂಚಿಗಳನ್ವಯ ಅರ್ಹ ಸಂತ್ರಸ್ತರಿಗೆ ಪರಿಹಾರ ಧನವನ್ನು ವಿತರಣೆ ಮಾಡತಕ್ಕದ್ದು. ಒಂದು ವೇಳೆ ಅರ್ಹ ಸಂತ್ರಸ್ತ ಕುಟುಂಬವನ್ನು ಆಯ್ಕೆ ಮಾಡುವಲ್ಲಿ ಹಾಗೂ ಪರಿಹಾರ ಧನ ವಿತರಣೆ ಮಾಡಲು ಯಾವುದೇ ಲೋಪದೋಷಗಳು ಉಂಟಾದಲ್ಲಿ ಸಂಬಂಧಿಸಿದ ತಹಶೀಲ್ದಾರರನ್ನು ನೇರವಾಗಿ ಜವಾಬ್ದಾರರನ್ನಾಗಿ ಮಾಡಲಾಗುವದು. ಜಿಲ್ಲೆಯ ಎಲ್ಲ ಉಪವಿಭಾಗಾಧಿಕಾರಿಗಳು ಅರ್ಹ ಸಂತ್ರಸ್ತ ಕುಟುಂಬಗಳಿಗೆ ಪರಿಹಾರ ಸಂದಾಯವಾಗುತ್ತಿರುವ ಬಗ್ಗೆ, ಸರ್ಕಾರದ ನಿರ್ದೇಶನಗಳು  ಪಾಲನೆಯಾಗುತ್ತಿರುವ ಬಗ್ಗೆ ಮೇಲ್ವಿಚಾರಣೆಯನ್ನು ಕೈಗೊಳ್ಳತಕ್ಕದ್ದು.

3. ಅತಿವೃಷ್ಟಿ/ಪ್ರವಾಹದಿಂದಾಗಿ ಉಂಟಾದ ಹಾನಿಗಳಿಗೆ ಸಂಬಂಧಿಸಿದಂತೆ, ಪರಿಹಾರ ಧನ ವಿತರಿಸಲು ಬಾಕಿಯಿರುವ ಎಲ್ಲ ಪ್ರಕರಣಗಳನ್ನು ನಿಯಮಾನುಸಾರ ಇತ್ಯರ್ಥಪಡಿಸಿ, ಸೂಕ್ತ ಪರಿಹಾರ ಧನವನ್ನು ವಿತರಿಸಲು ಜಿಲ್ಲೆಯ ಎಲ್ಲ ಉಪವಿಭಾಗಾಧಿಕಾರಿಗಳು/ತಹಶೀಲ್ದಾರರು ಕ್ರಮ ಜರುಗಿಸತಕ್ಕದ್ದು.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಜಲಸಂಪನ್ಮೂಲ ಇಲಾಖೆ ಹಾಗೂ ಬೆಳಗಾವಿ
ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು
ವಿಭಾಗ,ಬೆಳಗಾವಿ

ದಿನಾಂಕ 27-09-2019 ರಂದು ರಾಯಚೂರು ಜಿಲ್ಲಾಧಿಕಾರಿಗಳ ಕಾರ್ಯಾಲಯದ ಸಭಾಂಗಣದಲ್ಲಿ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ರಾಯಚೂರು ಜಿಲ್ಲೆ. ಇವರ ಅಧ್ಯಕ್ಷತೆಯಲ್ಲಿ ಜರುಗಿದ "ರಾಯಚೂರು ಜಿಲ್ಲೆಯ ಪ್ರಗತಿ ಪರಿಶೀಲನೆ" ಕುರಿತು ಜಿಲ್ಲಾಧಿಕಾರಿಗಳು ಹಾಗೂ ಸಂಬಂಧಪಟ್ಟ ಇತರೆ ಇಲಾಖೆಗಳ ಎಲ್ಲಾ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಡುವಳಿ.

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು :- ಹಾಜರಿ ಪುಸ್ತಕದಲ್ಲಿದ್ದಂತೆ.

ಪ್ರಾರಂಭದಲ್ಲಿ ಸಹಾಯಕ ಆಯುಕ್ತರು ರಾಯಚೂರು ಸಭೆಗೆ ಆಗಮಿಸಿದ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ರಾಯಚೂರು ಜಿಲ್ಲೆ, ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿ.ಪಂ ರಾಯಚೂರು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸ್ವಾಗತಿಸಿದರು. ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡು ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ರಾಯಚೂರು ಜಿಲ್ಲೆ ಇವರನ್ನು ಕೋರಿದರು.

ಸಭೆಯನ್ನುದ್ದೇಶಿಸಿ, ಸರ್ಕಾರವು 2019-20 ನೇ ಸಾಲಿನಲ್ಲಿ ಉಂಟಾದ ಪ್ರವಾಹ ಹಾಗೂ ಮುಂಗಾರು ಮಳೆ ಕೊರತೆಯಿಂದ ಬರಗಾಲ ಪರಿಸ್ಥಿತಿಯನ್ನು ನಿಭಾಯಿಸಲು ಜಿಲ್ಲೆಯಲ್ಲಿ ಜಾನುವಾರುಗಳಿಗೆ ಮೇವಿನ ಸಂಗ್ರಹಣೆ, ಜನ-ಸಾಮಾನ್ಯರಿಗೆ ಕುಡಿಯುವ ನೀರು ಪೂರೈಕೆ, ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅನುಷ್ಠಾನ ಹಾಗೂ ರೈತರ ಯೋಜನೆಗಳ ಪ್ರಗತಿ ಕುರಿತು ಚರ್ಚಿಸಲು ಈ ಸಭೆಯನ್ನು ಆಯೋಜಿಸಲಾಗಿದೆಯೆಂದು ತಿಳಿಸಲಾಯಿತು.

ವಿಷಯ:-1. ಮಳೆ ಪ್ರಮಾಣ ವರದಿ:-

ಜಂಟಿ ಕೃಷಿ ನಿದೇಶಕರು ಸಭೆಯಲ್ಲಿ ಮಳೆಯ ಪ್ರಮಾಣ ವಿವರಿಸುತ್ತಾ, 2019-20 ನೇ ಸಾಲಿನ ಜಿಲ್ಲೆಯ ಮುಂಗಾರು ಹಂಗಾಮಿನ ಅವಧಿಯಲ್ಲಿ ಶೇ.18 ರಷ್ಟು ಮಳೆಯ ಕೊರತೆಯಾಗಿದ್ದು, ಅಗಷ್ಟನಲ್ಲಿ ಶೇ.57 ರಷ್ಟು ಮಳೆ ಕೊರತೆಯಿಂದ ಬೆಳೆಗಳು ಒಣಗುವ ಹಂತದಲ್ಲಿದ್ದವು ಆದರೆ ಸೆಪ್ಟಂಬರನಲ್ಲಿ ಸುರಿದ ಮಳೆಯು ಬೆಳೆಗಳ ಚೇತರಿಕೆಗೊಂಡಿವೆ. ಮಾನವಿ ತಾಲೂಕಿನಲ್ಲಿ ಹೆಚ್ಚಾಗಿ ಮಳೆ ಬಂದಿರುವುದರಿಂದ , ಬೆಳೆಗಳು ಕೊಳೆಯುವ ಹಂತದಲ್ಲಿವೆ ಎಂದು ವಿವರಿಸಿದರು.

ವಿಷಯ:-2. ಬೆಳೆ ಪರಿಸ್ಥಿತಿ ವರದಿ:-

ಜಂಟಿ ಕೃಷಿ ನಿದೇಶಕರು ಸಭೆಯಲ್ಲಿ ಕೃಷಿ ಕ್ಷೇತ್ರದ ಬಗ್ಗೆ ವಿವರಣೆ ನಿಡುತ್ತಾ, ಮುಂಗಾರು ಹಂಗಾಮಿನಲ್ಲಿ 3,49,615 ಹೆಕ್ಟರ್ ಬಿತ್ತನೆ ಗುರಿ ಹೊಂದಿದ್ದು, 2,54,824 ಹೆಕ್ಟರ್ ಬಿತ್ತನೆಯಾಗಿರುತ್ತದೆ. ಹಿಂಗಾರು ಹಂಗಾಮಿನಲ್ಲಿ ಬಿತ್ತನೆ ಮಾಡಲು ಬೀಜದ ಕೊರತೆಯಾಗದಂತೆ ಕ್ರಮ ಕೈಗೊಳ್ಳಲಾಗಿದೆ ಎಂದು ವಿವರಿಸಿದರು.

ವಿಷಯ:3 ಬೆಳೆ ವಿಮೆ ಯೋಜನೆ ಕುರಿತು:

ಪ್ರಧಾನ ಮಂತ್ರಿ ಫಸಲ ಭೀಮಾ ಯೋಜನೆ ಕುರಿತು ಜಂಟಿ ಕೃಷಿನಿರ್ದೇಶಕರು, ರಾಯಚೂರು ಇವರು ಸಭೆಯಲ್ಲಿ ತಿಳಿಸುತ್ತಾ, 2019-20 ನೇ ಸಾಲಿನ ಜಿಲ್ಲೆಯಲ್ಲಿ 1,10,764,ರೈತರು ಬೆಳೆ ವಿಮೆಗೆ ಒಳಪಟ್ಟಿರುತ್ತಾರೆ. ಹೆಚ್ಚಾಗಿ ರೈತರನ್ನು ಬೆಳೆ ವಿಮೆಗೆ ಒಲಪಡಲು ಜಿಲ್ಲಾಧಿಕಾರಿಗಳ ಹಾಗೂ ಸಿಬ್ಬಂಧಿಗಳ ಶ್ರಮವಹಿಸಿ ಕೆಲಸ ಮಾಡಿರುವುದರಿಂದ ಜಿಲ್ಲೆಯಲ್ಲಿ ಪ್ರಸ್ತುತ ಸಾಲಿನಲ್ಲಿ ಹೆಚ್ಚಾಗಿ ರೈತರು ಬೆಳೆ ವಿಮೆಗೆ ಒಳಪಟ್ಟಿರುತ್ತಾರೆ. ಹಾಗೂ 2018-19 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ 86,229 ರೈತರು ಬೆಳೆ ವಿಮೆ ಯೋಜನೆಗೆ ಒಳಪಟ್ಟಿದ್ದು, ಇದರಲ್ಲಿ 51,960,ರೈತರಿಗೆ ರೂ.13195.41 ಲಕ್ಷಗಳು ಕ್ಲೈಮು ಮಾಡಿರುತ್ತಾರೆ. ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತಾ, 2018-19 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ 51,960 ರೈತರಿಗೆ ರೂ.13195.41 ಲಕ್ಷಗಳು ಪ್ರದಾನ ಮಂತ್ರಿ ಫಸಲ್ ಭೀಮಾ ಯೋಜನೆ ಮೂಲಕ ಪಡೆದುಕೊಂಡಿರುತ್ತಾರೆ. ಇದು ಜಿಲ್ಲೆಯ ಉತ್ತಮ ಸಾಧನೆ. ಇದೇ ಮಾದರಿಯಾಗಿಟ್ಟುಕಂಡು , ಜಿಲ್ಲೆಯ ಎಲ್ಲಾ ಅಧಿಕಾರಿಗಳು ರೈತರಿಗೆ ಮನವರಿಕೆ ಮಾಡಿ, ಹೆಚ್ಚು ಹೆಚ್ಚಾಗಿ ರೈತರನ್ನು ಸದರಿ ಯೋಜನೆ ಉಪಯೋಗ

ಪಡೆಕೊಳ್ಳುವಂತೆ ಸಲಹೆಯನ್ನು ನೀಡಲಾಯಿತು. ನಂತರ ಬೆಳೆ ಪರಿಹಾರ ತಂತ್ರಾಂಶದ ಕುರಿತು ವಿವರಿಸುತ್ತಾ, 2018-19 ನೇ ಸಾಲಿನಲ್ಲಿ ಸುಮಾರು 1.50 ಲಕ್ಷ ಬೆಳೆಹಾನಿಯಾಗಿದ್ದು ಈಗಾಗಲೇ 82,480 ರೈತರು ರೂ 75.83 ಕೋಟಿಯಷ್ಟು ಇನ್ ಪುಟ್ ಸಬ್ಸಿಡಿಯನ್ನು ರೈತರು ಪಡೆದುಕೊಂಡಿರುತ್ತಾರೆ. 2018-19 ನೇ ಸಾಲಿನ ರೈತರ ಮಾಹಿತಿಯು ಭೂಮಿ ಪರಿಹಾರ ತಂತ್ರಾಂಶದಲ್ಲಿ ಡಾಟ ಎಂಟ್ರಿ ಮಾಡುವ ಪ್ರಗತಿ ಹಂತದಲ್ಲಿದೆ. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತಾ, 2018-19 ನೇ ಸಾಲಿನ ಹಿಂಗಾರು ಹಂಗಾಮಿನಲ್ಲಿ ಮಳೆ ಕೊರತೆಯಿಂದ ರಾಯಚೂರು ಜಿಲ್ಲೆಯನ್ನು ತೀವ್ರತರವಾದ ಬರಗಾಲದಿಂದ ರೈತರಿಗೆ ತುಂಬಾ ಸಂಕಷ್ಟದಲ್ಲಿದ್ದಾರೆ, ಅವರಿಗೆ ಸರಿಯಾದ ರೀತಿಯಿಂದ ಬೆಳೆ ಪರಿಹಾರವನ್ನು ತಲುಪಿಸಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

**ವಿಷಯ: 4. ರೈತರ ಆತ್ಮಹತ್ಯೆ ಪ್ರಕರಣಗಳ ವರದಿ:**

ಜಂಟಿ ಕೃಷಿನಿರ್ದೇಶಕರು, ರಾಯಚೂರು ಇವರು 2019-20ನೇ ಸಾಲಿನಲ್ಲಿ ರಾಯಚೂರು ಜಿಲ್ಲೆಯಲ್ಲಿ ಸಾಲಬಾದೆಯಿಂದ ರೈತರು ಆತ್ಮ ಹತ್ಯೆ ಮಾಡಿಕೊಂಡ 8 ಜನ ರೈತರ ಪ್ರಕರಣಗಳು ದಾಖಲಾಗಿರುತ್ತವೆ. ಇನ್ನೂ 4ಪ್ರಕರಣಗಲು ಇತ್ಯಾರ್ಥ ಮಾಡುವುದು ಬಾಕಿಯಿರುತ್ತದೆ ಎಂದು ತಿಳಿಸಿದರು. ನಂತರ ಉಸ್ತುವಾರಿ ಕಾರ್ಯದರ್ಶಿಗಳು ರಾಯಚೂರು ಜಿಲ್ಲೆ ಇವರು ಮಾತನಾಡುತ್ತಾ, ಕಳೆದ ಬಾರಿ ನಡೆದ ಸಭೆಯಲ್ಲಿ ನೀರಾವರಿ ಪ್ರದೇಶಗಳಾದ ಸಿಂಧನೂರು ಮತ್ತು ಮಾನವಿ ತಾಲೂಕಿನಲ್ಲಿ ಹೆಚ್ಚಾಗಿ ರೈತರು ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ, ಇದರ ಬಗ್ಗೆ ಅಧ್ಯಯನ ಮಾಡಿ ವರದಿ ಸಲ್ಲಿಸಿವಂತೆ ಜಂಟಿ ಕೃಷಿ ನಿರ್ದೇಶಕರಿಗೆ ಸೂಚಿಸಲಗಿತ್ತು. ಆದರೆ ಇದರ ಬಗ್ಗೆ ಇನ್ನೂ ಗಮನ ಹರಿಸಿರುವುದಿಲ್ಲಾ ಸದರಿ ವಿಷಯವನ್ನು ಗಂಭೀರವಾಗಿ ತೆಗೆದುಕೊಂಡು ಮುಂದಿನ ಸಭೆಯಲ್ಲಿ ತಿಳಿಸಲು ಸೂಚಿಸಲಾಯಿತು.

**ವಿಷಯ:-5 ಕುಡಿಯುವ ನೀರು ಸರಬರಾಜು ಯೋಜನೆ:**

ಕಾರ್ಯಪಾಲಕ ಅಭಿಯಂತರರು ಗ್ರಾ.ನೀ.ಸ.ಮಂ. ಇವರು ಸಭೆಯಲ್ಲಿ ಮಾತನಾಡುತ್ತಾ, ರಾಯಚೂರು ಜಿಲ್ಲೆಯಲ್ಲಿ ಪ್ರಸ್ತುತ ಗ್ರಾಮೀಣ ಪ್ರದೇಶದಲ್ಲಿ 5 ಗ್ರಾಮದಲ್ಲಿ 8 ಟ್ಯಾಂಕರ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದ್ದು, 112 ಗ್ರಾಮಗಳಲ್ಲಿ 132 ಖಾಸಗಿ ಕೊಳವೆ ಬಾವಿಗಳನ್ನು ಬಾಡಿಗೆ ಪಡೆದುಕೊಂಡು ನೀರು ಸರಬರಾಜು ಮಾಡಲಾಗುತ್ತಿದೆ. ಹಾಗೂ ಜಿಲ್ಲೆಯಲ್ಲಿ ಬರಗಾಲ ಪರಿಸ್ಥಿತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಿಸಲು ಪ್ರತಿ ವಿಧಾನ ಸಭಾ ಸದಸ್ಯರ ಅಧ್ಯಕ್ಷತೆಯಲ್ಲಿ 4 ತಾಲೂಕು ಟಾಸ್ಕ ಫೋರ್ಸ್ ನಿಂದ 426 ಕಾಮಗಾರಿಗಳಿಗೆ ಒಟ್ಟು ರೂ.942.00 ಲಕ್ಷಗಳನ್ನು ಮಾನ್ಯ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಅದರಲ್ಲಿ ರೂ.776.33 ಲಕ್ಷ ಬಿಡುಗಡೆ ಮಾಡಲಾಗಿರುತ್ತದೆಯೆಂದು ಮತ್ತು ಮುಂದಿನ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸದಂತೆ, ಸರ್ಕಾರಕ್ಕೆ ಯೋಜನೆಗಳನ್ನು ರೂಪಿಸಿ, ವರದಿಯನ್ನು ಸಲ್ಲಿಸಲಾಗಿದೆಯೆಂದು ಸಭೆಗೆ ತಿಳಿಸಿದರು. ನಂತರ ಯೋಜನಾಧಿಕಾರಿಗಳು ಜಿಲ್ಲಾ ನಗರಾಭಿವೃದ್ದಿ ಕೋಶ ಇವರು ಸ್ಥಳೀಯ ಸಂಸ್ಥೆಗಳಲ್ಲಿ ಕುಡಿಯುವ ನೀರಿನ ಬಗ್ಗೆ ವಿವರಿಸುತ್ತಾ, ಹಟ್ಟಿ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ 13 ವಾರ್ಡುಗಳಲ್ಲಿ ಟ್ಯಾಂಕರ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ ಎಂದು ತಿಳಿಸಿದರು. ರಾಯಚೂರು ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ಸಂಬಂಧಿಸಿದಂತೆ ಹೋಸದಾಗಿ ಕೊರೆಸಲಾದ ಬೋರವೆಲ್ ಗಳು ಜಿಲ್ಲೆಯ 214 ಬೋರವೆಲ್ ಪೈಕಿ ಅರ್ಧದಷ್ಟು ದೇವದುರ್ಗ ತಾಲೂಕಿನಲ್ಲಿ ಅಂದರೆ, 123 ಕೈ ಪಂಪುಗಳನ್ನು ಬಳಸಿಕೊಂಡು ನೀರು ಸರಬರಾಜು ಮಾಡಲಾಗುತ್ತಿದೆ. ಉಳಿದ ತಾಲೂಕಿನಲ್ಲಿ ಕಡಿಮೆ ಇರುತ್ತದೆ. ಇದರ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ಇವರು ಸದರಿ ಸಮಸ್ಯೆ ಕುರಿತು ಗಮನಹರಿಸಿ, ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕೆಂದು ಸಲಹೆಯನ್ನು ನೀಡಲಾಯಿತು. ಹಾಗೂ ಜಿಲ್ಲೆಯಲ್ಲಿ 112 ಗ್ರಾಮಗಲಲ್ಲಿ 132 ಖಾಸಗಿ ಕೊಳವೆ ಬಾವಿಗಳ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗಿತ್ತಿದ್ದು, ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಸಂಬಂಧಿಸಿದ ಅಧಿಕಾರಿಗಳು ಗಂಭೀರತೆಯನ್ನು ತಿಳಿದುಕೊಳ್ಳಲು ಖುದ್ದು ಗ್ರಾಮಗಳಿಗೆ ಭೇಟಿ ಸಮಸ್ಯೆ

ಕುರಿತು ವಾಸ್ತವತೆಯನ್ನು ಅಧ್ಯಯನ ಮಾಡಿಕೊಂಡು ಸಾರ್ವಜನಿಕರಿಗೆ ಕುಡಿಯುವ ನೀರನ್ನು ಸರಬರಾಜು ಮಾಡಬೇಕೆಂದು ಸಲಹೆಯನ್ನು ನೀಲಾಯಿತು.

**ವಿಷಯ:6 ಮೇವಿನ ಪರಿಸ್ಥಿತಿ :-**

ಉಪ ನಿರ್ದೇಶಕರು ಪಶು ಸಂಗೋಪನಾ ಇಲಾಖೆ ರಾಯಚೂರು ಇವರು ಮಾತನಾಡುತ್ತಾ ಪ್ರಸ್ತುತ ಜಿಲ್ಲೆಯಲ್ಲಿ ಒಟ್ಟು 214533 ಮೆ.ಟನ್ ಮೇವು ಲಭ್ಯವಿದ್ದು ಮುಂದಿನ 12 ವಾರಗಳಿಗೆ ಸಕಾಗುವಷ್ಟು ಇರುತ್ತದೆ ಹಾಗೂ ಜಿಲ್ಲೆಯಲ್ಲಿ 42314 ಮೇವಿನ ಮಿನಿ ಕಿಟ್ ಗಳನ್ನು ಪೂರೈಕೆ ಮಾಡಲಾಗಿರುತ್ತದೆ ಎಂದು ಸಭೆಗೆ ತಿಳಿಸಿದರು. ಹಾಗೂ ಮುಂದಿನ ದಿನಗಳಲ್ಲಿ ಮೇವಿನ ಕೊರತೆ ಆಗದಂತೆ ಜಿಲ್ಲಾಡಳಿತದಿಂದ ಮುಂದಿನ ದಿನಗಳಲ್ಲಿ ಜಿಲ್ಲೆಯಲ್ಲಿ ಜಾನುವಾರುಗಳಿಗೆ ಮೇವಿನ ಅವಶ್ಯಕತೆ ಅನುಗುಣವಾಗಿ 300 ಮೆಟ್ರಿಕ್ ಟನ್ ಬೇಲ್ ಮಾಡಿರುವ ಒಣ ಭತ್ತದ ಮೇವನ್ನು ರಾಷ್ಟ್ರೀಯ ಬೀಜ ನಿಗಮ,ಕೇಂದ್ರೀಯ ರಾಜ್ಯ ಫಾರ್ಮನ ಜವಳಗೇರಾ, ತಾ: ಸಿಂಧನೂರುನಲ್ಲಿ ಕಾಯ್ದಿರಿಸಲು ಯೋಜನೆ ರೂಪಿಸಲಾಗಿದೆ, ಪ್ರಸ್ತುತ 5 ಮೇವಿನ ಬ್ಯಾಂಕ ಮತ್ತು ಹೈಕೋರ್ಟ ನಿರ್ದೇಶನದಂತೆ 5 ಗೋಶಾಲೆಗಳನ್ನು ತಗೆಲಾಗಿದೆ. ಸದರಿ ವಿಷಯಕ್ಕೆ ಸಂಬಂದಿಸಿದಂತೆ, ಕೋಲಾರ ಮಂಡ್ಯ ಮತ್ತು ಹಾಸನ ಇತರೆ ಜಿಲ್ಲೆಗಳಲ್ಲಿ ಹೈನುಗಾರಿಕೆಯಿಂದ ಹಾಲು ಉತ್ಪಾದನೆ ಹೆಚ್ಚಿಸಿಕೊಂಡು ರೈತರ ಆದಾಯವನ್ನು ಮೂಲಕ ಆರ್ಥಿಕವಾಗಿ ಅಭಿವೃದ್ಧಿ ಹೊಂದುತ್ತಿದ್ದು, ಅದೇ ಮಾದರಿಯಾಗಿ ಹಾಲು ಉತ್ಪಾದನೆ ಹೆಚ್ಚಿಸಲು ಪಶು ಸಂಗೋಪನೆ ಇಲಾಖೆಯಿಂದ ಗುರಿ ನಿಗದಿಪಡಿಸಿಕೊಳ್ಳಬೇಕು, ಹಾಲಿಗೆ ಸರ್ಕಾರ ನಿಗದಿ ಪಡಿಸಿದ ಸಬ್ಸಡಿಯೊಂದಿಗೆ , ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆ ಮೂಲಕ ದನದ ಕೊಟ್ಟಿಗೆ ನಿರ್ಮಾಣದ ಉಪಯೋಗ ಪಡೆದುಕೊಂಡು ಸೂಕ್ತ ಚಟುವಟಿಕೆಗಳನ್ನು ಹಮ್ಮಿಕೊಳ್ಳವುದು, ಹೈನುಗಾರಿಕೆಗೆ ಉತ್ತೇಜನ ನೀಡಲು ಜಿಲ್ಲೆಯಲ್ಲಿ ಪ್ರಯೋಗಿಕವಾಗಿ ಪ್ರತಿ ತಾಲೂಕಿನಲ್ಲಿ 5 ಮಾದರಿ ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು ಹೈನುಗಾರಿಕೆ ಮೂಲಕ ರೈತರ ಆದಾಯವನ್ನು ಹೆಚ್ಚಿಸುವ ಯೋಜನೆಯನ್ನು ರೂಪಿಸಬೇಕೆಂದು ಉಪ ನಿರ್ದೇಶಕರು ಪಶು ಸಂಗೋಪನಾ ಅಧಿಕಾರಿಗಳು ಜಿಲ್ಲಾಧಿಕಾರಿಗಳು ಹಾಗು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳೊಂದಿಗೆ ಚರ್ಚಿಸಿ, ಕ್ರಮಕೈಗೊಳ್ಳಬೇಕೆಂದು ಸಲಹೆಯನ್ನು ನೀಡಲಾಯಿತು.

**ವಿಷಯ:7 ಮಹತ್ಮಾಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ.**

ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಜಿಲ್ಲಾ.ಪಂ ರಾಯಚೂರು ರವರು ಮಾತನಾಡುತ್ತಾ, ಜಿಲ್ಲೆಯಲ್ಲಿ 2018-19 ನೇ ಸಾಲಿನ ನರೇಗಾ ಯೋಜನೆಯಡಿಯಲ್ಲಿ ಮಾನವ ದಿನಗಳ ಗುರಿಯು 92.58 ಲಕ್ಷವಿದ್ದು ಶೇ.114 ರಷ್ಟು ಗುರಿ ಸಾಧನೆಗೆ ರೂ.268.65 ಕೋಟಿ ಖರ್ಚು ಮಾಡಲಾಗಿರುತ್ತದೆ ಹಾಗೂ ಪ್ರಸ್ತುತ 2019-20 ನೇ ಸಾಲಿನ ಯೋಜನೆಯಡಿಯಲ್ಲಿ ಮಾನವ ದಿನಗಳ ಗುರಿಯು 110.00 ಲಕ್ಷವಿದ್ದು ಶೇ.79 ರಷ್ಟು ಗುರಿ ಸಾಧನೆಗೆ ರೂ.206.97 ಕೋಟಿ ಖರ್ಚು ಮಾಡಲಾಗಿರುತ್ತದೆ. ಹಾಗೂ ಮಹತ್ಮಾಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಬರಗಾಲ ನಿರ್ವಹಣೆ ಕಾಮಗಾರಿಗಳು ಪ್ರಗತಿಯಲ್ಲಿರುವ 607 ಕಾಮಗಾರಿಗಳಾಗಿವೆ ಹಾಗೂ 1875 ಕಾಮಗಾರಿಗಳು ಪೂರ್ಣಗೊಂಡಿರುತ್ತವೆಯೆಂದು ಸಭೆಯಲ್ಲಿ ಮಂಡಿಸಿದರು. ನಂತರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತಾ, ದೇವದುರ್ಗ ತಾಲೂಕಿನಲ್ಲಿ ಪ್ರಗತಿ ಪ್ರತಿಶತ ಕಡಿಮೆ ಇದ್ದು ಇದರ ಬಗ್ಗೆ ಸೂಕ್ತ ಗಮನ ಹರಿಸಿ ಪ್ರಗತಿ ಸಾದಿಸಬೇಕು ಹಾಗೂ ಜಿಲ್ಲೆಯಲ್ಲಿ ತೀವ್ರತರವಾದ ಬರಗಾಲವಿದ್ದುದರಿಂದ ಜನರು ಗೂಳೆ ಹೋಗುವುದನ್ನು ತಡೆಯಲು ಸದರಿ ಯೋಜನೆಯನ್ನು ಪರಿಣಾಮಕಾರಿಯಾಗಿ ಹಾಗೂ ಕಾರ್ಮಿಕ ಕೇಂದ್ರಿತ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಮತ್ತು ಹೆಚ್ಚಿನ ಉದ್ಯೋಗ ಸೃಜನೆ ಒಳಪಡುವ ಕಾಮಗಾರಿಗಳನ್ನು ಕೈಗೊತ್ತಿಕೊಂಡು ಹೆಚ್ಚಿನ ಸಾಧನೆ ಮಾಡಲು ಸೂಚಿಸಿದರು.

**ವಿಷಯ:8 ಪ್ರವಾಹ ಪರಿಸ್ಥಿತಿ:**

ಸಹಾಯಕ ಆಯುಕ್ತರು, ರಾಯಚೂರು ಇವರು 2019-20 ನೇ ಸಾಲಿನ ಅಗಷ್ಟ ತಿಂಗಳಿನಲ್ಲಿ ಉದ್ಭವಿಸಿರುವ ಪ್ರವಾಹ ಪರಿಸ್ಥಿಯನ್ನು ಈ ಕೆಳಗಿನಂತೆ ವಿವರಿಸಿದರು.

- ಜಿಲ್ಲೆಯ ಎಲ್ಲಾ 3792 ಸಂತ್ರಸ್ಥರಿಗೆ ಆಹಾರ ಕಿಟ್‌ಗಳನ್ನು ವಿತರಿಸಲಾಗಿರುತ್ತದೆ.
- ಜಿಲ್ಲೆಯ ಒಟ್ಟು ಎಲ್ಲಾ 543 ಸಂತ್ರಸ್ಥ ಕುಟುಂಬಗಳಿಗೆ ಪ್ರತಿ ಕುಟುಂಬಕ್ಕೆ ರೂ.10,000-00 ರಂತೆ ಒಟ್ಟು ರೂ. 54.30 ಲಕ್ಷಗಳನ್ನು ತುರ್ತು ಪರಿಹಾರಕ್ಕಾಗಿ ಬಟ್ಟೆ ಮತ್ತು ಅಡುಗೆ ಪಾತ್ರೆಗಳ ಖರೀದಿಗೆ ನೆರೆ ಸಂತ್ರಸ್ಥರಿಗೆ ನೇರವಾಗಿ ಬ್ಯಾಂಕ ಖಾತೆಗೆ ಜಮೆ ಮಾಡಲಾಗಿದೆ.
- ಪ್ರವಾಹದಿಂದ ದೇವದುರ್ಗ ತಾಲೂಕಿನಲ್ಲಿ ಒಂದು ಜೀವಹಾನಿಯಾಗಿದ್ದು,ರೂ.5.00 ಲಕ್ಷವನ್ನು ವಾರುಸುದಾರರಿಗೆ ಬಿಡುಗಡೆ ಮಾಡಲಾಗಿದೆ.
- ಪ್ರವಾಹದಿಂದ ಜಿಲ್ಲೆಯಲ್ಲಿ 2 ಜಾನುವಾರು ಮೃತಪಟ್ಟಿದ್ದು, ರೂ.60.00 ಸಾವಿರಗಳನ್ನು ವಾರುಸುದಾರರಿಗೆ ಬಿಡುಗಡೆ ಮಾಡಲಾಗಿದೆ.
- ಮನೆಗಳ ಹಾನಿ ವರದಿ :
- ಶೇಕಡ 75% ರಿಂದ 100% ಪೂರ್ತಿ ಹಾನಿಯಾದ ಮನೆಗಳು ಹಾನಿಯಾದ ಮನೆಗಳು-8
- ಶೇಕಡ 25% ರಿಂದ 75% ಭಾಗಶಃ ಹಾನಿಯಾದ ಮನೆಗಳು-15
- ಶೇಕಡ 15% ರಿಂದ 25% ಅಲ್ಪ ಸ್ವಲ್ಪ ಹಾನಿಯಾದ ಮನೆಗಳು-50 ಒಟ್ಟು-73
- 73 ಮನೆಗಳಿಗೆ ರೂ.25,000 ಗಳಂತೆ, ಒಟ್ಟು ರೂ.18.25 ಲಕ್ಷಗಳನ್ನು ನೆರೆ ಸಂತ್ರಸ್ಥರಿಗೆ ನೇರವಾಗಿ ಬ್ಯಾಂಕ ಖಾತೆಗೆ ಜಮೆ ಮಾಡಲಾಗಿದೆ ಹಾಗೂ ಪೂರ್ತಿ ಹಾನಿಯಾದ ಮನೆಗಳನ್ನು ರಾಜೀವಗಾಂಧಿ ವಸತಿ ನಿಗಮ ನಿಯಮಿತ ವತಿಯಿಂದ ಪರಿಹಾರಕ್ಕಾಗಿ ಪ್ರಕ್ರಿಯೆ ಚಾಲ್ತಿಯಲ್ಲಿದೆ.
- ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಬೆಳೆಗಳ ಒಟ್ಟು 13,925 ಹೇಕ್ಟೆರ್ ಪ್ರದೇಶ ಪ್ರವಾಹದಿಂದ ಹಾನಿಯಾಗಿದ್ದು, ಎನ್.ಡಿ.ಆರ್.ಎಫ್ ಮಾರ್ಗಸೂಚಿಯಂತೆ ರೂ. 18.34 ಕೋಟಿ ಪರಿಹಾರದ ಮೊತ್ತವನ್ನು ಬಿಡುಗಡೆ ಮಾಡಲು ಮಾನ್ಯ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಈಗಾಗಲೇ ಭೂಮಿ ಪರಿಹಾರ ತಂತ್ರಾಂಶದ ಮೂಲಕ 7 ಸಾವಿರ ರೈತರ ಮಾಹಿತಿ ದಾಖಲು ಮಾಡಲಾಗಿದ್ದು, ಆಧಾರ ಸಂಖ್ಯೆ ಮೂಲಕ ಪರಿಹಾರ ನೀಡುವುದು ಪ್ರಗತಿ ಹಂತದಲ್ಲಿದೆ.
- ಪ್ರವಾಹದಿಂದ ಹಾನಿಯಾಗಿರುವ ರಸ್ತೆ & ಸೇತುವೆಗಳ ತಾತ್ಕಲಿಕ ಮರು ನಿರ್ಮಾಣ ಕಾರ್ಯ ಪ್ರಗತಿಯಲ್ಲಿರುತ್ತದೆ. ಜಲದುರ್ಗ ಸೇತುವೆ, ಹೂವಿನಹೆಡಗಿ ಸೇತುವೆ ಮತ್ತು ಗೂಗಲ್ ಬ್ರಿಡ್ಜ್ ಕಂ ಬ್ಯಾರೇಜ್‌ಗಳ ದುರಸ್ಥಿ ಕಾರ್ಯ ಮುಗಿದಿದ್ದು ರಸ್ತೆ ಸಂಪರ್ಕ ಆರಂಭಗೊಂಡಿದೆ.
- ಪ್ರವಾಹದಿಂದ ಒಟ್ಟು 787 ಟ್ರಾನ್ಸ್ ಫಾರಂಗಳು ಹಾನಿಯಾಗಿದ್ದು ಇದರಲ್ಲಿ 650 ದುರಸ್ಥಿಗೊಂಡಿವೆ. ಉಳಿದ ಟ್ರಾನ್ಸ್‌ಫಾರಂ ದುರಸ್ಥಿ ಮತ್ತು ಬದಲಾವಣೆ ಕಾರ್ಯ ಚಾಲ್ತಿಯಲ್ಲಿದೆ.
- ಪ್ರವಾಹ ಪೀಡಿತ ಗ್ರಾಮಗಳಲ್ಲಿ ಜನರ ಆರೋಗ್ಯದ ಹಿತದೃಷ್ಠಿಯಿಂದ ಕೈಗೊಳ್ಳಬೇಕಾದ ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ಆರೋಗ್ಯ ಇಲಾಖೆಯಿಂದ ಕೈಗೊಳ್ಳಲಾಗಿದೆ.
- ಜಿಲ್ಲೆಯಲ್ಲಿ ಒಟ್ಟಾರೆ ರೂ.242.62 ಕೋಟಿ ಅಂದಾಜು ಹಾನಿಯನ್ನು ಲೆಕ್ಕಿಸಲಾಗಿದೆ.
- ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ಮಾರ್ಗಸೂಚಿಯನ್ವಯ ಒಟ್ಟು ರೂ.39.00 ಕೋಟಿ ಬೇಡಿಕೆಯನ್ನು ಸಲ್ಲಿಸಲಾಗಿದೆ.
- ಜಿಲ್ಲಾಧಿಕಾರಿಗಳ ಪಿಡಿ ಖಾತೆಯಲ್ಲಿ ಪ್ರಸ್ತುತ ರೂ.12.87 ಕೋಟಿ ಹಣ ಲಭ್ಯವಿರುತ್ತದೆ.

ನಂತರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತಾ, 2019-20 ನೇ ಸಾಲಿನ ಅಗಷ್ಟ ತಿಂಗಳಿನಲ್ಲಿ ಉದ್ಭವಿಸಿರುವ ಪ್ರವಾಹ ಪರಿಸ್ಥಿಯನ್ನುಸೂಕ್ತ ರೀತಿಯಾಗಿ ಸ್ಪಂದಿಸುವಂತೆ ಹಾಗೂ ಸೂಕ್ತ ಪರಿಹಾರವಬ್ಬು ನೆರೆ ಸಂತ್ರಸ್ಥರಿಗೆ ತಲುಪಿಸುವಂತೆ ಸೂಕ್ತ ಸಲಹೆಯನ್ನು ನೀಡಲಾಯಿತು.

ವಂದನಾರ್ಪಣೆಯೊಂದಿಗೆ ಸಭೆಯನ್ನು ಹಾಗೂ ಕ್ಷೇತ್ರ ಭೇಟಿಯನ್ನು ಮುಕ್ತಾಯಗೊಳಿಸಲಾಯಿತು.

(ಜಿ. ಕುಮಾರ ನಾಯಕ)
ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ರಾಯಚೂರು ಜಿಲ್ಲೆ
ಮತ್ತು ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ

ಪ್ರತಿಯನ್ನು:

1. ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ವಿಧಾನ ಸೌಧ ಬೆಂಗಳೂರು ರವರಿಗೆ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ಬಹುಮಹಡಿಗಳ ಕಟ್ಟಡ ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ ರವರಿಗೆ ಸೂಕ್ತ ಕ್ರಮಕ್ಕಾಗಿ.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ ರಾಯಚೂರು ಜಿಲ್ಲೆ ರವರಿಗೆ ಸೂಕ್ತ ಕ್ರಮಕ್ಕಾಗಿ.
6. ಜಿಲ್ಲಾಮಟ್ಟದ ಎಲ್ಲಾ ಅನುಷ್ಠಾನಾಧಿಕಾರಿಯವರಿಗೆ ಸೂಕ್ತ ಕ್ರಮಕ್ಕಾಗಿ. (ಜಿಲ್ಲಾಧಿಕಾರಿಗಳು, ರಾಯಚೂರು ಮೂಲಕ).

# ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಿಂದ ಸೆಪ್ಟಂಬರ-2019 ತಿಂಗಳ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಸಲ್ಲಿಸಬೇಕಾದ ನಮೂನೆ.

| ಕ್ರಸಂ | ಅಂಶಗಳು | ಕಾರ್ಯದರ್ಶಿಗಳ ಷರಾ | |
|---|---|---|---|
| 1 | ಜಿಲ್ಲೆಯ ಹೆಸರು | ರಾಯಚೂರು | |
| 2 | ಉಸ್ತುವಾರಿ ಕಾರ್ಯದರ್ಶಿಯ ಹೆಸರು | ಜಿ. ಕುಮಾರ ನಾಯಕ ಭಾ.ಆ.ಸೇ | |
| 3 | ಭೇಟಿಯಾದ/ಪ್ರವಾಸದ ದಿನಾಂಕ | **27-09-2019** | |
| | | ಗಮನಿಸಿದ ಅಂಶಗಳು | ಸಲಹೆಗಳು |
| 4 | ಮುಖ್ಯವಾಗಿ ಗಮನಿಸಿದ ಅಂಶಗಳು ಹಾಗೂ ಸಲಹೆಗಳು | 1) ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ ಕುರಿತು. | 1) 2018-19 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ 51,960 ರೈತರಿಗೆ ರೂ.13195.41 ಲಕ್ಷಗಳು ಪ್ರದಾನ ಮಂತ್ರಿ ಫಸಲ್ ಭೀಮಾ ಯೋಜನೆ ಮೂಲಕ ಪಡೆದುಕೊಂಡಿರುತ್ತಾರೆ. ಇದು ಜಿಲ್ಲೆಯ ಉತ್ತಮ ಸಾಧನೆ. ಇದೇ ಮಾದರಿಯಾಗಿಟ್ಟುಕಂಡು , ಜಿಲ್ಲೆಯ ಎಲ್ಲಾ ಅಧಿಕಾರಿಗಳು ರೈತರಿಗೆ ಮನವರಿಕೆ ಮಾಡಿ, ಹೆಚ್ಚು ಹೆಚ್ಚಾಗಿ ರೈತರನ್ನು ಸದರಿ ಯೊಜನೆ ಉಪಯೋಗ ಪಡೆದುಕೊಳ್ಳುವಂತೆ ಸಲಹೆಯನ್ನು ನೀಡಲಾಯಿತು. |
| | | 2) ಕುಡಿಯುವ ನೀರು ಸರಬರಾಜು ಯೋಜನೆ ಕುರಿತು. | 2) ರಾಯಚೂರು ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ಸಂಬಂಧಿಸಿದಂತೆ ಹೊಸದಾಗಿ ಕೊರೆಸಲಾದ ಬೋರ್‌ವೆಲ್ ಗಳು ಜಿಲ್ಲೆಯ 214 ಬೋರ್‌ವೆಲ್ ಪೈಕಿ ಅರ್ಧದಷ್ಟು ದೇವದುರ್ಗ ತಾಲೂಕಿನಲ್ಲಿ ಅಂದರೆ, 123 ಕೈ ಪಂಪುಗಳನ್ನು ಬಳಸಿಕೊಂಡು ನೀರು ಸರಬರಾಜು ಮಾಡಲಾಗುತ್ತಿದೆ. ಉಳಿದ ತಾಲೂಕಿನಲ್ಲಿ ಕಡಿಮೆ ಇರುತ್ತದೆ. ಇದರ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ಇವರು ಸದರಿ ಸಮಸ್ಯೆ ಕುರಿತು ಗಮನಹರಿಸಿ, ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕೆಂದು ಸಲಹೆಯನ್ನು ನೀಡಲಾಯಿತು. ಹಾಗೂ ಜಿಲ್ಲೆಯಲ್ಲಿ 112 ಗ್ರಾಮಗಲಲ್ಲಿ 132 ಖಾಸಗಿ ಕೊಳವೆ ಬಾವಿಗಳ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗಿತ್ತಿದ್ದು, ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಸಂಬಂಧಿಸಿದ ಅಧಿಕಾರಿಗಳು ಗಂಭೀರತೆಯನ್ನು ತಿಳಿದುಕೊಳ್ಳಲು ಖುದ್ದು ಗ್ರಾಮಗಳಿಗೆ ಭೇಟಿ ಸಮಸ್ಯೆ ಕುರಿತು ವಾಸ್ತವತೆಯನ್ನು ಅಧ್ಯಯನ ಮಾಡಿಕೊಂಡು ಸಾರ್ವಜನಿಕರಿಗೆ ಕುಡಿಯುವ ನೀರನ್ನು ಸರಬರಾಜು ಮಾಡಬೇಕೆಂದು ಸಲಹೆಯನ್ನು ನೀಡಲಾಯಿತು. |

| | | | |
|---|---|---|---|
| | | 3) ಹಾಲು ಉತ್ಪಾದನೆ ಮೂಲಕ ಹೈನುಗಾರಿಕೆ ಉತ್ತೇಜನೆ ಮಾಡುವ ಕುರಿತು. | 3) ಕೋಲಾರ ಮಂಡ್ಯ ಮತ್ತು ಹಾಸನ ಇತರೆ ಜಿಲ್ಲೆಗಳಲ್ಲಿ ಹೈನುಗಾರಿಕೆಯಿಂದ ಹಾಲು ಉತ್ಪಾದನೆ ಹೆಚ್ಚಿಸಿಕೊಂಡು ರೈತರ ಆದಾಯವನ್ನು ಮೂಲಕ ಆರ್ಥಿಕವಾಗಿ ಅಭಿವೃದ್ಧಿ ಹೊಂದುತ್ತಿದ್ದು, ಅದೇ ಮಾದರಿಯಾಗಿ ಹಾಲು ಉತ್ಪಾದನೆ ಹೆಚ್ಚಿಸಲು ಪಶು ಸಂಗೋಪನೆ ಇಲಾಖೆಯಿಂದ ಗುರಿ ನಿಗದಿಪಡಿಸಿಕೊಳ್ಳಬೇಕು. ಹಾಲಿಗೆ ಸರ್ಕಾರ ನಿಗದಿ ಪಡಿಸಿದ ಸಬ್ಸಿಡಿಯೊಂದಿಗೆ , ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆ ಮೂಲಕ ದನದ ಕೊಟ್ಟಿಗೆ ನಿರ್ಮಾಣದ ಉಪಯೋಗ ಪಡೆದುಕೊಂಡು ಸೂಕ್ತ ಚಟುವಟಿಕೆಗಳನ್ನು ಹಮ್ಮಿಕೊಳ್ಳವುದು. ಹೈನುಗಾರಿಕೆಗೆ ಉತ್ತೇಜನ ನೀಡಲು ಜಿಲ್ಲೆಯಲ್ಲಿ ಪ್ರಯೋಗಿಕವಾಗಿ ಪ್ರತಿ ತಾಲೂಕಿನಲ್ಲಿ 5 ಮಾದರಿ ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು ಹೈನುಗಾರಿಕೆ ಮೂಲಕ ರೈತರ ಆದಾಯವನ್ನು ಹೆಚ್ಚಿಸುವ ಯೋಜನೆಯನ್ನು ರೂಪಿಸಬೇಕೆಂದು ಉಪ ನಿರ್ದೇಶಕರು ಪಶು ಸಂಗೋಪನಾ ಅಧಿಕಾರಿಗಳು ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳೊಂದಿಗೆ ಚರ್ಚಿಸಿ, ಕ್ರಮಕೈಗೊಳ್ಳಬೇಕೆಂದು ಸಲಹೆಯನ್ನು ನೀಡಲಾಯಿತು. |

(ಜಿ. ಕುಮಾರ ನಾಯಕ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ
ಹಾಗೂ ಉಸ್ತುವಾರಿ ಕಾರ್ಯದರ್ಶಿ ರಾಯಚೂರು ಜಿಲ್ಲೆ.

**ದಿನಾಂಕ: 26-09-2019 ರಂದು ಶ್ರೀ ರಾಜೇಂದ್ರ ಕುಮಾರ್ ಕಠಾರಿಯಾ, ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಹಾಗೂ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು. ಚಾಮರಾಜನಗರ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ಸಭಾ ನಡವಳಿ.**

ಹಾಜರಿದ್ದವರು:

1. ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ; ಹಾಗೂ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು. ಚಾಮರಾಜನಗರ
2. ಜಿಲ್ಲಾಧಿಕಾರಿಗಳು, ಚಾಮರಾಜನಗರ ಜಿಲ್ಲೆ, ಚಾಮರಾಜನಗರ
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಾಮರಾಜನಗರ
4. ಉಪವಿಭಾಗಾಧಿಕಾರಿ, ಕೊಳ್ಳೇಗಾಲ ಉಪವಿಭಾಗ, ಕೊಳ್ಳೇಗಾಲ
5. ಜಿಲ್ಲಾ ಮಟ್ಟದ ಅಧಿಕಾರಿಗಳು, ಚಾಮರಾಜನಗರ ಜಿಲ್ಲೆ

ಮಾನ್ಯ ಜಿಲ್ಲಾಧಿಕಾರಿಗಳು ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಹಾಗೂ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು. ಚಾಮರಾಜನಗರ ರವರಿಗೆ ಹಾಗೂ ಸಭೆಗೆ ಹಾಜರಿದ್ದ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸ್ವಾಗತವನ್ನು ಕೋರಿದರು.

ಮಳೆ ವರದಿ :

ಚಾಮರಾಜನಗರ ಜಿಲ್ಲೆಯಲ್ಲಿ ಜಿಲ್ಲಾದ್ಯಂತ ಆಗಸ್ಟ್ ಮಾಹೆಯಲ್ಲಿ 108.5 ಮತ್ತು ಸೆಪ್ಟಂಬರ್ ಮಾಹೆಯಲ್ಲಿ ಶೇ. 26% ರಷ್ಟು ಮಳೆಯಾಗಿದ್ದು ವಾಡಿಕೆ ಮಳೆಗಿಂತ ಶೇ 5% ರಷ್ಟು ಹೆಚ್ಚು ಮಳೆಯಾಗಿರುತ್ತದೆ ಎಂದು ಮಾನ್ಯ ಜಿಲ್ಲಾಧಿಕಾರಿಗಳು ತಿಳಿಸಿದರು.

ಕೃಷಿ ಇಲಾಖೆ :

ಕೃಷಿ ಇಲಾಖೆಯ ಪ್ರಗತಿ ಬಗ್ಗೆ ಮಾಹಿತಿ ನೀಡುವಂತೆ ಕಾರ್ಯದರ್ಶಿಗಳು ಕೃಷಿ ಇಲಾಖೆಯ ಜಂಟಿ ನಿರ್ದೇಶಕರಿಗೆ ತಿಳಿಸಿದಾಗ, ಜಂಟಿ ನಿರ್ದೇಶಕರು, ಜಿಲ್ಲೆಯಲ್ಲಿ ಭತ್ತ, ಜೋಳ, ಹೆಸರು, ಉದ್ದು, ಅಲಸಂದೆ, ರಾಗಿ, ಸೂರ್ಯಕಾಂತಿ, ನೆಲಗಡಲೆ, ಮುಸುಕಿನ ಜೋಳ ಬಿತ್ತನೆ ಬೀಜಗಳು ವಿತರಿಸಲಾಗಿದ್ದು, ಬಿತ್ತನೆ ಬೀಜಗಳ ಕೊರತೆ ಇರುವುದಿಲ್ಲ. ಹಾಗೂ ಯೂರಿಯಾ, ಡಿ.ಎ.ಪಿ, ಎಂ.ಒ.ಪಿ, ಎಸ್.ಎಸ್.ಪಿ, ಕಾಂಪ್ಲೆಕ್ಸ್ ರಸಗೊಬ್ಬರಗಳ ದಾಸ್ತಾನು ಸಾಕಷ್ಟಿದ್ದು, ರಸಗೊಬ್ಬರಗಳ ಕೊರತೆ ಇರುವುದಿಲ್ಲ ಎಂದು ತಿಳಿಸಿದರು.

ಮಾನ್ಯ ಕಾರ್ಯದರ್ಶಿಗಳು, ಜಂಟಿ ನಿರ್ದೇಶಕರಿಗೆ ಚಾಮರಾಜನಗರ ಜಿಲ್ಲೆಯಲ್ಲಿ ವಾಡಿಕೆ ಮಳೆಗಿಂತ ಹೆಚ್ಚಾಗಿ ಮಳೆಯಾಗಿರುವುದರಿಂದ ವ್ಯವಸಾಯ ಮಾಡಲು ಹೆಚ್ಚಿನ ಬಿತ್ತನೆ ಬೀಜ, ರಸಗೊಬ್ಬರದ ಅವಶ್ಯಕತೆ ಹೆಚ್ಚಾಗಿರುತ್ತದೆ. ಆದ್ದರಿಂದ ಬಿತ್ತನೆ ಬೀಜ, ರಸಗೊಬ್ಬರದ ದಾಸ್ತಾನಿನ ಕೊರತೆ ಉಂಟಾಗದಂತೆ ಕ್ರಮವಹಿಸಲು ಸೂಚಿಸಿದರು.

**(ಕ್ರಮ: ಜಂಟಿ ಕೃಷಿ ನಿರ್ದೇಶಕರು, ಚಾಮರಾಜನಗರ)**

ಬೆಳೆ ವಿಮೆ :

ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಬೆಳೆ ವಿಮೆಯನ್ನು ರೈತರಿಗೆ ನೀಡಿರುವುದರ ಕುರಿತು ತಿಳಿಸಲು ಸೂಚಿಸಿದ ಮೇರೆಗೆ 2016-17ನೇ ಸಾಲಿನ ಹಿಂಗಾರು ಹಂಗಾಮಿನಲ್ಲಿ 50328 ರೈತರು ಬೆಳೆ ವಿಮೆಗೆ ನೊಂದಾಯಿಸಿ ಕೊಂಡಿರುತ್ತಾರೆ. ಅದರಲ್ಲಿ 49132 ರೈತರಿಗೆ 25.48 ಕೋಟಿ ಮೊತ್ತವು ಕ್ಲೈಂ ಇನೀಷಿಯೇಟ್ ಆಗಿರುತ್ತದೆ. ಈಗಾಗಲೇ 17013 ರೈತರಿಗೆ 11.94 ಕೋಟಿ ಮೊತ್ತ ರೈತ ಫಲಾನುಭವಿಗಳಿಗೆ ಬೆಳೆ ವಿಮೆ ಹಣ

ನೀಡಲಾಗಿರುತ್ತದೆ. ಉಳಿಕೆ 13.54 ಕೋಟಿ ಮೊತ್ತವು ರೈತರಿಗೆ ಸಂದಾಯವಾಗ ಬೇಕಾಗಿದ್ದು ಇದಕ್ಕಾಗಿ ಕೃಷಿ ಆಯುಕ್ತರ ಹೆಸರಿನಲ್ಲಿ ಇಖಅಖಔಫ ಚಿಛಿಛಿಂಣಟಣ ತೆರೆಯಲಾಗಿದ್ದು, ರೈತರಿಂದ ಅಗತ್ಯ ದಾಖಲಾತಿಗಳನ್ನು ಸಂಗ್ರಹಿಸಿದ ನಂತರ ಬೆಳೆ ವಿಮೆಯ ಮೊತ್ತವನ್ನು ರೈತರ ಖಾತೆಗೆ ನೇರವಾಗಿ ವರ್ಗಾವಣೆ ಮಾಡಲಾಗುವುದು ಎಂದು ಮಾನ್ಯ ಜಿಲ್ಲಾಧಿಕಾರಿಗಳು ಸಭೆಯಲ್ಲಿ ತಿಳಿಸಿದರು.

**(ಕ್ರಮ: ಜಂಟಿ ಕೃಷಿ ನಿರ್ದೇಶಕರು, ಚಾಮರಾಜನಗರ ಹಾಗೂ ವ್ಯವಸ್ಥಾಪಕರು, ಲೀಡ್ ಬ್ಯಾಂಕ್, ಚಾಮರಾಜನಗರ)**

**<u>ಪ್ರವಾಹ ಪೀಡಿತ ಗ್ರಾಮಗಳಲ್ಲಿ ಉಂಟಾಗಿರುವ ಮನೆ ಹಾನಿಗಳ ವಿವರ :</u>**

ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಶೇ. 100% ರಷ್ಟು ಸಂಪೂರ್ಣ ಹಾನಿಯಾಗಿರುವ 27 ಮನೆಗಳು, ಶೇ 25% ರಿಂದ 75% ಹಾನಿಯಾಗಿರುವ 27 ಮನೆಗಳು, ಶೇ 15% ರಿಂದ 25% ಹಾನಿಯಾಗಿರುವ 65 ಮನೆಗಳಿಗೆ ಒಂದರಂತೆ ರೂ. 25000/- ಒಟ್ಟು 1,62,5000 ಹಾಗೂ 06 ಗುಡಿಸಲುಗಳಿಗೆ ಒಂದರಂತೆ 4100 ರಂತೆ ರೂ ಒಟ್ಟು 24,600/- ಒಟ್ಟು ಸೇರಿ ಒಟ್ಟು 125 ಮನೆಗಳು ಪ್ರವಾಹದಿಂದಾಗಿ ಹಾನಿಗೊಳಗಾಗಿದ್ದು, ಇದರಲ್ಲಿ 27 ಮನೆಗಳಿಗೆ 13.5 ಲಕ್ಷ ರೂಪಾಯಿಗಳ ಪರಿಹಾರವನ್ನು ಆನ್ ಲೈನ್ ಮೂಲಕ ನೀಡಲಾಗಿರುತ್ತದೆ ಹಾಗೂ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಪ್ರವಾಹ ಪೀಡಿತ ಗ್ರಾಮಗಳಿಗೆ 1000 ಆಹಾರ ಕಿಟ್ ನೀಡಲು ಮಂಜೂರಾಗಿದ್ದು, 940 ಕುಟುಂಬಗಳಿಗೆ ಆಹಾರ ಕಿಟ್ ವಿತರಿಸಲಾಗಿರುತ್ತದೆ ಎಂದು ಮಾನ್ಯ ಜಿಲ್ಲಾಧಿಕಾರಿಗಳು ತಿಳಿಸಿದರು.

**(ಕ್ರಮ: ಉಪವಿಬಾಗಾಧಿಕಾರಿಗಳು, ಕೊಳ್ಳೇಗಾಲ ಉಪವಿಭಾಗ, ಕೊಳ್ಳೇಗಾಲ, ಉಪನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಚಾಮರಾಜನಗರ ಹಾಗೂ ಎಲ್ಲಾ ತಹಶೀಲ್ದಾರ್ ಗಳು ಚಾಮರಾಜನಗರ)**

**<u>ಪಶು ಸಂಗೋಪನಾ ಇಲಾಖೆ :</u>**

ಚಾಮರಾಜನಗರ ಜಿಲ್ಲೆಯಲ್ಲಿ ಉತ್ತಮವಾಗಿ ಮಳೆಯಾಗಿರುವ ಕಾರಣ ಮೇವಿನ ಕೊರತೆ ಉಂಟಾಗಿರುವುದಿಲ್ಲ. ರಾಜ್ಯದಲ್ಲಿ 154 ಗೋಶಾಲೆಗಳಿದ್ದು, ಅದರ್ಲಲಿ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ 01 ಗೋ ಶಾಲೆ, ಚಾಮರಾಜನಗರ ತಾಲ್ಲೂಕಿನಲ್ಲಿ 01, ಯಳಂದೂರು ತಾಲ್ಲೂಕಿನಲ್ಲಿ 01 ರಲ್ಲಿ ಹಾಗೂ ಕೊಳ್ಳೇಗಾಲ ತಾಲ್ಲೂಕಿನಲ್ಲಿ 01 ಗೋ ಶಾಲೆಗಳನ್ನು ತೆರೆಯಲಾಗಿರುತ್ತದೆ. ಆದ್ದರಿಂದ ಹೆಚ್ಚಿನ ಗೋಶಾಲೆಗಳನ್ನು ತೆರೆಯಲು ಅವಶ್ಯವಿರುವುದಿಲ್ಲವೆಂದು ಮಾನ್ಯ ಜಿಲ್ಲಾಧಿಕಾರಿಗಳು ತಿಳಿಸಿದರು.

ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು, ರೈತ ಸಂಪರ್ಕ ಕೇಂದ್ರದಲ್ಲಿ ರೈತರಿಗೆ ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಕೋ-ಆಪರೇಟಿವ್ ಸೊಸೈಟಿ, ಗ್ರಾಮೀಣಾಭಿವೃದ್ಧಿ ಇಲಾಖೆ, ಪಶು ಸಂಗೋಪನಾ ಇಲಾಖೆ, ಮೀನುಗಾರಿಕೆ ಇಲಾಖೆ, ರೇಷ್ಮೆ ಇಲಾಖೆ, ಸಾಮಾಜಿಕ ಅರಣ್ಯ, ಕೃಷಿ ವಿಜ್ಞಾನ ಕೇಂದ್ರ ಹಾಗೂ ಇತರ ಇಲಾಖೆಗಳಿಂದ ನೀಡಲಾಗುವ ಸರ್ಕಾರ ಸೌಲಭ್ಯ, ಯೋಜನೆಗಳ ಬಗ್ಗೆ ಹಾಗೂ ರೈತರಿಗೆ ಅವಶ್ಯಕವಿರುವ ತಾಂತ್ರಿಕ ಮಾಹಿತಿ ಹಾಗೂ ಇಲಾಖೆಗಳಲ್ಲಿ ಸಿಗುವ ಸರ್ಕಾರಿ ಸೌಲಭ್ಯಗಳನ್ನು ರೈತರು ಸದುಪಯೋಗ ಪಡಿಸಿಕೊಳ್ಳುವ ನಿಟ್ಟಿನಲ್ಲಿ ಸಂಬಂಧಪಟ್ಟ ಇಲಾಖೆಯ ಹೋಬಳಿ ಮಟ್ಟದ ಅಧಿಕಾರಿಗಳು ಪ್ರತಿ ಮಾಹೆ 02 ದಿನ ರೈತ ಸಂಪರ್ಕ ಕೇಂದ್ರಕ್ಕೆ ಖುದ್ದಾಗಿ ಹಾಜರಿದ್ದು ರೈತರಿಗೆ ಮಾಹಿತಿ ನೀಡಲು ಸೂಕ್ತ ಕ್ರಮವಹಿಸಿ ಹಾಗೂ ಚಾಮರಾಜನಗರ ಜಿಲ್ಲೆಯಲ್ಲಿ ಹಸುಗಳು ಕಡಿಮೆ ಪ್ರಮಾಣದಲ್ಲಿ ಹಾಲನ್ನು ನೀಡುತ್ತಿರುವುದರಿಂದ, ಇಲ್ಲಿನ ಹಸುಗಳು ಹೆಚ್ಚಿನ ಹಾಲು ಉತ್ಪಾದಿಸಲು ಹಾಗೂ ಹಾಲಿನಲ್ಲಿ ಇರಬೇಕಾದ ಕೊಬ್ಬಿನಾಂಶವನ್ನು ಹೆಚ್ಚಿಸುವುದಕ್ಕಾಗಿ ಹಸುಗಳಿಗೆ ನೀಡಬೇಕಾದ ಪೌಷ್ಟಿಕ ಆಹಾರದ ಕುರಿತು ಮಾಹಿತಿ ನೀಡಿ, ರೈತರಿಗೆ ಹೆಚ್ಚಿನ ಲಾಭಾಂಶ ಬರುವಂತೆ ಕ್ರಮವಹಿಸಲು ಸೂಚಿಸಿದರು.

**(ಕ್ರಮ: ಜಂಟಿ ಕೃಷಿ ನಿರ್ದೇಶಕರು, ಚಾಮರಾಜನಗರ, ಉಪನರ್ದೇಶಕರು ತೋಟಗಾರಿಕೆ ಇಲಾಖೆ, ಉಪನಿದೇಶಕರು;ರೇಷ್ಮೆ ಇಲಾಖೆ, ಸಹಾಯಕ ನಿರ್ದೇಶಕರು, ಮೀನುಗಾರಿಕೆ ಇಲಾಖೆ, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಸಾಮಾಜಿಕ ಅರಣ್ಯ, ಯೋಜನಾ ಸಂಯೋಜನಾ ಅಧಿಕಾರಿ, ಕೃಷಿ ವಿಜ್ಞಾನ ಕೇಂದ್ರ , ಉಪನಿರ್ದೇಶಕರು, ಪಶುಸಂಗೋಪನಾ ಇಲಾಖೆ, ಎಲ್ಲಾ ತಹಶೀಲ್ದಾರ್ ಗಳು, ಸಹಕಾರ ಸಂಘಗಳ ಉಪನಿಬಂಧಕರು ವ್ಯವಸ್ಥಾಪಕರು, ಲೀಡ್ ಬ್ಯಾಂಕ್, ಚಾಮರಾಜನಗರ ಹಾಗೂ ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ)**

**ಲೀಡ್ ಬ್ಯಾಂಕ್ :**

ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು, ಚಾಮರಾಜನಗರ ಜಿಲ್ಲೆಯಲ್ಲಿ 1 ಲಕ್ಷ 10 ಸಾವಿರ ರೈತ ಕುಟುಂಬವಿದ್ದು, ಅದರಲ್ಲಿ 20,000 ರೈತರನ್ನು ಪಿ.ಎಂ ಕಿಸಾನ್ ಯೋಜನೆಗೆ ಒಳಪಡಿಸಿದ್ದು, ಉಳಿದ ರೈತರ ಡಾಟಾವನ್ನು ತಮ್ಮ ಅಧೀನದಲ್ಲಿ ಬರುವ ಎಲ್ಲಾ ಬ್ಯಾಂಕ್‌ನ ಖಾತಾವಾರು ನೀಡಿ ಪಿ.ಎಂ ಕಿಸಾನ್ ಯೋಜನೆಯ ಫಲಾನುಭವಿಗಳನ್ನು ಗುರುತಿಸಿ, ಅವರ ಖಾತೆಗೆ ಹಣ ಜಮಾ ಮಾಡುವ ಕುರಿತು ಸೂಕ್ತ ಕ್ರಮವಹಿಸಿ, ಪಿ.ಎಂ. ಕಿಸಾನ್ ಯೋಜನೆಯ ಫಲಾನುಭವಿಗಳ ಪಟ್ಟಿಯನ್ನು ರೈತ ಸಂಪರ್ಕ ಕೇಂದ್ರಗಳಲ್ಲಿ ಪ್ರದರ್ಶಿಸ ಬೇಕೆಂದು ವ್ಯವಸ್ಥಾಪಕರು, ಲೀಡ್ ಬ್ಯಾಂಕ್, ಚಾಮರಾಜನಗರ ರವರಿಗೆ ಸೂಚಿಸಿದರು. ಅಲ್ಲದೆ ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ನೀಡಲಾಗುವ ಮುಖ್ಯವಾದ 05 ಯೋಜನೆಗಳ ಕುರಿತು ಮುಂದಿನ ಸಭೆಯಲ್ಲಿ ಚರ್ಚೆಯಾಗಬೇಕೆಂದು ಸಭೆಯಲ್ಲಿ ಸೂಚಿಸಿದರು.

ಕೃಷಿ ವಿಜ್ಞಾನ ಕೇಂದ್ರದ ಅಧಿಕಾರಿಗಳನ್ನು ಮುಂದಿನ ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳ ಸಭೆಗೆ ಹಾಜರಿರುವಂತೆ ಸೂಚಿಸಬೇಕೆಂದು ಮಾನ್ಯ ಜಿಲ್ಲಾಧಿಕಾರಿಗಳು ಸೂಚಿಸಿದರು.

**(ಕ್ರಮ: ಜಂಟಿ ಕೃಷಿ ನಿರ್ದೇಶಕರು, ಚಾಮರಾಜನಗರ, ಉಪನರ್ದೇಶಕರು ತೋಟಗಾರಿಕೆ ಇಲಾಖೆ, ವ್ಯವಸ್ಥಾಪಕರು, ಲೀಡ್ ಬ್ಯಾಂಕ್, ಎಲ್ಲಾ ತಹಶೀಲ್ದಾರ್‌ಗಳು)**

**ಮೀನುಗಾರಿಕೆ ಇಲಾಖೆ :**

ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು, ನರೇಗಾ ಯೋಜನೆಯಡಿ ಮೀನುಗಾರಿಕೆ ಇಲಾಖೆಗೆ ಮಾನವ ದಿನಗಳ ಸೃಜನೆಯ ಗುರಿಯನ್ನು ನಿಗದಿಪಡಿಸಿ ಅದರಂತೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ ಮಾನವ ದಿನಗಳನ್ನು ಸೃಜನೆ ಮಾಡಲು ಸೂಚನೆ ನೀಡಲಾಗಿತ್ತು. ಅದರಂತೆ ಸದರಿ ಇಲಾಖೆಗೆ ಸಂಬಂಧಿಸಿದಂತೆ ಸೆಪ್ಟಂಬರ್ ಮಾಹೆಯ ಅಂತ್ಯದವರೆಗೆ 19160 ಮಾನವ ದಿನಗಳ ಗುರಿಯನ್ನು ನೀಡಲಾಗಿರುತ್ತದೆ. ಆದರೆ ಇದುವರೆವಿಗೂ ಮೀನುಗಾರಿಕೆ ಇಲಾಖೆಗೆ ನೀಡಿರುವ ಗುರಿಗೆ ಶೂನ್ಯ ಪ್ರಗತಿ ಸಾಧನೆಯಾಗಿದ್ದು, ನರೇಗಾ ಯೋಜನೆಯಡಿ ಪ್ರಗತಿ ಕುಂಠಿತವಾಗಿರುತ್ತದೆ. ಆದ್ದರಿಂದ ಸಹಾಯಕ ನಿರ್ದೇಶಕರು, ಮೀನುಗಾರಿಕೆ ಇಲಾಖೆಯವರಿಗೆ ಪ್ರಗತಿ ಕುಂಟಿತವಾಗಿರುವ ಕುರಿತು ಕಾರಣ ಕೇಳಿ ನೋಟಿಸ್ ನೀಡುವಂತೆ ಮುಖ್ಯ ಕಾರ್ಯನಿರ್ವಾಹಣ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಚಾಮರಾಜನಗರ ರವರಿಗೆ ಸೂಚಿಸಿದರು.

ನರೇಗಾ ಯೋಜನೆಯಡಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಸಂಬಂಧಿಸಿದಂತೆ ಮೀನು ಕೃಷಿ ಕೊಳ ನಿರ್ಮಾಣ ಮಾಡಲು ಫಲಾನುಭವಿ ಆಯ್ಕೆ, ತಾಂತ್ರಿಕ ಸಹಾಯ ಮಾತ್ರ ಮೀನುಗಾರಿಕೆ ಇಲಾಖೆಯಿಂದ ಮಾಡಲಾಗುವುದು ಆದರೆ ಕಾಮಗಾರಿಯ ಅನುಷ್ಠಾನವನ್ನು ಪಿ.ಆರ್.ಇ.ಡಿ ಅಥವಾ ಗ್ರಾಮ ಪಂಚಾಯಿತಿ ವತಿಯಿಂದ ನಿರ್ವಹಿಸಲಾಗುವುದು. ನರೇಗಾ ಯೋಜನೆಯ ಕುರಿತಂತೆ ಕ್ರಮವಹಿಸಲಾಗುತ್ತಿದ್ದು, ಈಗಾಗಲೇ 65 ಕ್ರಿಯಾ ಯೋಜನೆಗಳು ಅನುಮೋದನೆಗೊಂಡಿದ್ದು, 06 ಕಾಮಗಾರಿಗಳು ಪ್ರಗತಿಯಲ್ಲಿದ್ದು, 690 ಮಾನವ ದಿನಗಳ ಸೃಜನೆಯಾಗಿರುತ್ತದೆ. ಆದರೆ ಮೀನುಗಾರಿಕೆ ಇಲಾಖೆಗೆ ಸಂಬಂಧಿಸಿದ ಲಾಗಿನ್ ಐ.ಡಿ ಯಲ್ಲಿ ಅನುಷ್ಠಾನವಾಗದೆ ಗ್ರಾಮ ಪಂಚಾಯಿತಿ ಲಾಗಿನ್ ಐ.ಡಿ ಯಲ್ಲಿ ಮಾನವ ದಿನಗಳು ಸೃಜನೆಯಾಗಿರುತ್ತದೆ. ಮೀನುಗಾರಿಕೆ ಇಲಾಖೆಯಲ್ಲಿ ಅನುಷ್ಠಾನಗೊಳಿಸಲು ಲಾಗಿನ್ ಐ.ಡಿ ಇರದ ಕಾರಣ

ಪ್ರಗತಿ ವರದಿಯಲ್ಲಿ ಶೂನ್ಯ ಎಂದು ಸಹಾಯಕ ನಿರ್ದೇಶಕರು, ಮೀನುಗಾರಿಕೆ ಇಲಾಖೆ, ಚಾಮರಾಜನಗರ ರವರು ತಿಳಿಸಿದರು.

**(ಕ್ರಮ: ಸಹಾಯಕ ನಿರ್ದೇಶಕರು, ಮೀನುಗಾರಿಕೆ ಇಲಾಖೆ, )**

**ನೀರಿನ ಶುದ್ಧೀಕರಣ ಘಟಕಗಳ ವಿವರ :**

ಈಗಾಗಲೇ ನೀರಿನ ಶುದ್ದೀಕರಣ ಘಟಕಗಳ ಕಾಮಗಾರಿ ಮುಗಿದಿರುವ ಘಟಕಗಳು ಕೆ.ಆರ್.ಐ.ಡಿ.ಎಲ್ ರವರ ವತಿಯಿಂದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗೆ ವಹಿಸಿ ಕೊಡುವ ಬಗ್ಗೆ ಚರ್ಚೆಯಾಗಿದ್ದು, ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ರೂ. 36,000/- ಗಳ ಅಂದಾಜಿದ್ದು, 4 ಬಾರಿ ಟೆಂಡರ್ ಕರೆಯಲಾಗಿದ್ದು, ಯಾರೂ ಸದರಿ ಟೆಂಡರ್‌ಗಳಿಗೆ ಭಾಗವಹಿಸಿರುವುದಿಲ್ಲ ಎಂಬುದಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಾಮರಾಜನಗರ ರವರು ಸಭೆಗೆ ತಿಳಿಸಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ನರೇಗಾ ಯೋಜನೆಯಡಿಯಲ್ಲಿ ಇಂಗು ಗುಂಡಿ ಕಾಮಗಾರಿಗಳನ್ನು ಈಗಾಗಲೇ ಅನುಷ್ಠಾನಗೊಳಿಸಲಾಗುತ್ತಿದ್ದು, ಡಿಜಿಟಲ್ ಕೀ ಗಳನ್ನು ಸರಿಪಡಿಸಿ ಹಣ ಪಾವತಿಗಾಗಿ ಅಪ್ ಲೋಡ್ ಮಾಡಲು ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಿದರು.

**(ಕ್ರಮ: ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರಿನ ಮತ್ತು ನೈರ್ಮಲ್ಯ ವಿಭಾಗ)**

**ಜಿಲ್ಲಾ ಪಂಚಾಯತ್, ಚಾಮರಾಜನಗರ :**

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಗಂಗಾ ಕಲ್ಯಾಣ ಯೋಜನೆಯು ಯಾವ ಹಂತದಲ್ಲಿ ಇದೆ ಎಂಬ ಬಗ್ಗೆ ಜಿಲ್ಲಾ ವ್ಯವಸ್ಥಾಪಕರು, ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ರವರಿಗೆ ವರದಿ ನೀಡಲು ತಿಳಿಸಿ, 03 ಬಾರಿ ಟೆಂಡರ್ ಕರೆಯಲಾಗಿದೆ. ಆದರೆ ಯಾರೂ ಸಹ ಟೆಂಡರ್‌ದಾರರು ಟೆಂಡರ್‌ಗೆ ಬಾಗಿಯಾಗಿರುವುದಿಲ್ಲ ಎಂದು ಜಿಲ್ಲಾ ವ್ಯವಸ್ಥಾಪಕರು, ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ರವರು ಸಭೆಯಲ್ಲಿ ತಿಳಿಸಿದರು.

ಜಿಲ್ಲಾ ಪಂಚಾಯತ್ ವತಿಯಿಂದ ನಡೆಯುವ ನರೇಗಾ ಯೋಜನೆಯಡಿಯಲ್ಲಿ ಶೇ 53% ರಷ್ಟು ಮಾತ್ರ ಪ್ರಗತಿ ಕಡಿಮೆಯಾಗಿದ್ದು, ಕಳೆದ ಜೂನ್ ಮಾಹೆಯಲ್ಲಿ ತಿಳಿಸಿದಂತೆ ಹಳ್ಳಿಗಳನ್ನು ಗುರುತಿಸಿ, ಕಾಮಗಾರಿಗಳನ್ನು ಕೈಗೊಳ್ಳಲು ಹಾಗೂ ಪ್ರತ್ಯೇಕ ಸಭೆಗಳನ್ನು ಕರೆದು ಯೋಜನೆಗಳನ್ನು ನಿರ್ವಹಿಸಲು ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿಗಳಿಗೆ ತಿಳಿಸಿದರು ಹಾಗೂ ಕೃಷಿ ಇಲಾಖೆಯ ನರೇಗಾ ಯೋಜನೆಯಲ್ಲಿ ಕಾಮಗಾರಿಗಳನ್ನು ಚೆನ್ನಾಗಿ ನಿರ್ವಹಿಸಿದ್ದು, ತೋಟಗಾರಿಕೆ ಇಲಾಖೆ, ಶೇ. 30%, ಅರಣ್ಯ ಇಲಾಖಾ ವತಿಯಿಂದ ಶೇ 8%, ರೇಷ್ಮೆ ಇಲಾಖಾ ವತಿಯಿಂದ ಶೇ 13% ರಷ್ಟು ಮಾತ್ರ ಪ್ರಗತಿಯಾಗಿದ್ದು, ಸದರಿ ಪ್ರಗತಿಯ ಬಗ್ಗೆ ಅಸಮಾಧಾನ ವ್ಯಕ್ತ ಪಡಿಸಿ, ಈ ತಿಂಗಳು ಶೇ 70% ರಷ್ಟು ಪ್ರಗತಿ ಸಾಧಿಸಲು ಸೂಚಿಸಿದರು.

**(ಕ್ರಮ: ಮುಖ್ಯ ಕಾರ್ಯನಿರ್ವಾಹಣ ಅಧಿಕಾರಿ, ಜಿಲ್ಲಾ ಪಂಚಾಯತ್, ಚಾಮರಾಜನಗರ, ಉಪನರ್ದೇಶಕರು ತೋಟಗಾರಿಕೆ ಇಲಾಖೆ, ಉಪನಿದೇಶಕರು, ರೇಷ್ಮೆ ಇಲಾಖೆ, ಸಹಾಯಕ ನಿರ್ದೇಶಕರು, ಮೀನುಗಾರಿಕೆ ಇಲಾಖೆ, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಸಾಮಾಜಿಕ ಅರಣ್ಯ, ಉಪನಿರ್ದೇಶಕರು, ಪಶುಸಂಗೋಪನಾ ಇಲಾಖೆ, ಜಿಲ್ಲಾ ವ್ಯವಸ್ಥಾಪಕರು, ಹಿಂದುಳಿದ ವರ್ಗಗಳ ಅಭಿವೃದ್ಧಿ ಇಲಾಖೆ, ಹಾಗೂ ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ)**

**ಕಬಿನಿ ನೀರಾವರಿ ಇಲಾಖೆ, ಕೊಳ್ಳೇಗಾಲ:**

ಕೊಳ್ಳೇಗಾಲದ ಕೆರೆಗಳ ಅಭಿವೃದ್ಧಿ ಬಗ್ಗೆ ಕೈಗೊಂಡಿರುವ ಕ್ರಮಗಳ ವರದಿಯನ್ನು ನೀಡುವಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಬಿನಿ ನಾಲಾ ವಿಭಾಗ, ಕೊಳ್ಳೇಗಾಲ ರವರಿಗೆ ತಿಳಿಸಲಾಗಿ, ಕೆರೆಗಳ ಅಭಿವೃದ್ಧಿ ಬಗ್ಗೆ, ಕ್ರಮಕೈಗೊಂಡಿರುವುದಾಗಿ ವರದಿ ನೀಡಿದರು.

ಮಾನ್ಯ ಜಿಲ್ಲಾಧಿಕಾರಿಗಳು, ಕೊಳ್ಳೇಗಾಲದ ಕೊಂಗಳ್ಳಿ ಕೆರೆ, ಚಿಕ್ಕರಂಗನಾಥನ ಕೆರೆಗಳಿಗೆ ಮಣ್ಣಿನ ದಿಬ್ಬ ಹಾಕಿಸಿ, ಅವುಗಳನ್ನು ಅಭಿವೃದ್ಧಿಪಡಿಸಲು ಕ್ರಮವಹಿಸುವಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಬಿನಿ ನಾಲಾ ವಿಭಾಗ, ಕೊಳ್ಳೇಗಾಲ ರವರಿಗೆ ತಿಳಿಸಿದರು. ಹಾಗೂ ನಗರಸಭೆ ವತಿಯಿಂದ ಅಭಿವೃದ್ಧಿಪಡಿಸುವ ಬಗ್ಗೆ ಪರಿಶೀಲಿಸಲು ತಿಳಿಸಲಾಯಿತು.

**( ಕ್ರಮ: ಕಾರ್ಯಪಾಲಕ ಅಭಿಯಂತರರು, ಕಬಿನಿ ನಾಲಾ ವಿಭಾಗ, ಕೊಳ್ಳೇಗಾಲ)**

**ಆರೋಗ್ಯ ಇಲಾಖೆ :**

ಆರೋಗ್ಯ ಇಲಾಖೆಯಲ್ಲಿನ ಸಮಸ್ಯೆಗಳು ಮತ್ತು ಪ್ರಗತಿಯ ಬಗ್ಗೆ ತಿಳಿಸುವಂತೆ ಸೂಚಿಸಲಾಗಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಕೊಳ್ಳೇಗಾಲ ಮತ್ತು ಗುಂಡ್ಲುಪೇಟೆ ತಾಲ್ಲೂಕಿನ ಆಸ್ಪತ್ರೆಗಳಲ್ಲಿ ವೆಂಟಿಲೇಟರ್‌ಗಳನ್ನು ಅಳವಡಿಸಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ ಎಂದು ತಿಳಿಸಿದರು.

**(ಕ್ರಮ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಆರೋಗ್ಯ ಇಲಾಖೆ)**

**ಕಂದಾಯ ಇಲಾಖೆ:**

ಬೆಳೆ ಸರ್ವೆಯಲ್ಲಿ ಕಂದಾಯ ಇಲಾಖೆಯ ಪ್ರಗತಿ ಕಡಿಮೆಯಿದ್ದು, 4 ಬಾರಿ ವಿಡಿಯೋ ಕಾನ್ಫರೆನ್ಸ್ ನಡೆಸಿದ್ದರೂ ಸಹ ಶೇ 30%ರಷ್ಟು ಮಾತ್ರ ಪ್ರಗತಿಯಾಗಿದ್ದು ಈ ಬಗ್ಗೆ ಉಪವಿಭಾಗಾಧಿಕಾರಿಗಳು ಮತ್ತು ತಹಶೀಲ್ದಾರರು ನೇರ ಹೊಣೆಗಾರಿಕೆಯಾಗಿರುತ್ತಾರೆಂದು ಉಸ್ತುವಾರಿ ಕಾರ್ಯದರ್ಶಿಗಳು ಅಸಾಮಾಧಾನವನ್ನು ವ್ಯಕ್ತ ಪಡಿಸಿದರು ಹಾಗೂ ಎಲ್ಲಾ ತಾಲ್ಲೂಕು ತಹಶೀಲ್ದಾರ್ ಹಾಗೂ ಉಪವಿಭಾಗಾಧಿಕಾರಿಗಳಿಗೆ ಬೆಳೆ ಸರ್ವೆಯ ಬಗ್ಗೆ ಹೆಚ್ಚಿನ ಗಮನಹರಿಸಿ ಪ್ರಗತಿ ಸಾಧಿಸಲು ಸೂಚಿಸಿದರು. ಹಾಗೂ ಮುಂದಿನ ಸಭೆಯಲ್ಲಿ ಗ್ರಾಮ ಲೆಕ್ಕಿಗರು, ಪರಿಶೀಲಕರು, ಖುದ್ದು ಸಭೆಗೆ ಹಾಜರಿದ್ದು ವರದಿ ನೀಡುವಂತೆ ಸೂಚಿಸಿದರು.

**(ಕ್ರಮ: ಉಪವಿಭಾಗಾಧಿಕಾರಿ, ಕೊಳ್ಳೇಗಾಲ ಉಪವಿಭಾಗ, ಕೊಳ್ಳೇಗಾಲ, ಎಲ್ಲಾ ತಹಶೀಲ್ದಾರ್‌ಗಳು)**

**ಶಿಕ್ಷಣ ಇಲಾಖೆ :**

ಚಾಮರಾಜನಗರ ಜಿಲ್ಲೆಯಲ್ಲಿ ಒಟ್ಟು 1194 ಶಾಲೆಗಳಿದ್ದು, 01 ನೇ ತರಗತಿಯಿಂದ 10ನೇ ತಗತಿಯ ವರೆಗೆ ಒಟ್ಟು 23,353 ವಿದ್ಯಾಭ್ಯಾಸ ಮಾಡುತ್ತಿದ್ದು, ಮಕ್ಕಳಿಗೆ ಪಠ್ಯ ಪುಸ್ತಕ, ಸಮವಸ್ತ್ರ, ಸೈಕಲ್‌ಗಳನ್ನು ಈಗಾಗಲೇ ವಿತರಿಸಲಾಗಿರುತ್ತದೆ. ಶಾಲಾ ಮಕ್ಕಳಿಗೆ ಶೂ ಮತ್ತು ಸಾಕ್ಸ್‌ಗಳಿಗೆ ಹಣ ಬಿಡುಗಡೆಯಾಗಿದ್ದು ಕಾರ್ಯಾದೇಶ ನೀಡಲಾಗಿರುತ್ತದೆ. ಶಾಲಾ ಅಭಿವೃದ್ಧಿ ಸಮಿತಿಗಳು ಮತ್ತು ಶಾಲಾ ಮುಖ್ಯೋಪಾಧ್ಯಾಯರು ಕಾರ್ಯಾದೇಶದಂತೆ ವಿತರಿಸಲು ಕ್ರಮವಹಿಸುತ್ತಾರೆಂದೂ ಹಾಗೂ 342 ಶಾಲೆ ಬಿಟ್ಟ ಮಕ್ಕಳನ್ನು ಗುರುತಿಸಲಾಗಿರುತ್ತದೆ. ರಾಜ್ಯದಲ್ಲಿಯೇ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಚಾಮರಾಜನಗರವು 15 ನೇ ಸ್ಥಾನದಲ್ಲಿದೆ. ಮಕ್ಕಳ ಪರೀಕ್ಷೆ ಫಲಿತಾಂಶದ ಪ್ರಗತಿ ಬಗ್ಗೆ ಇಲಾಖಾ ವತಿಯಿಂದ ಪ್ರಶ್ನೆ ಪತ್ರಿಕೆ ಬ್ಯಾಂಕ್, 10 ಅಂಶಗಳ ಕಾರ್ಯಕ್ರಮ, ಪ್ರತಿದಿನದ ವಿಷಯಗಳ ಕುರಿತು ಗುಂಪುಗಳನ್ನಾಗಿ ಮಾಡಿ ಫಲಿತಾಂಶ ಹೆಚ್ಚಿಸಲು ಕ್ರಮವಹಿಸಲಾಗಿದೆ ಎಂದು ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಾಮರಾಜನಗರ ರವರು ಸಭೆಯಲ್ಲಿ ತಿಳಿಸಿದರು.

ಜಿಲ್ಲೆಯಲ್ಲಿ ಕಡಿಮೆ ಫಲಿತಾಂಶವಿರುವ ಶಾಲೆಗಳನ್ನು ಗುರುತಿಸಿ, ಆ ಮಕ್ಕಳ ಸಮಸ್ಯೆಗಳ ಕುರಿತು ಪರಿಶೀಲಿಸಿ, ಉತ್ತಮ ಫಲಿತಾಂಶ ಬರುವಂತೆ ಕ್ರಮವಹಿಸಲು ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಾಮರಾಜನಗರ ರವರಿಗೆ ಸೂಚಿಸಿದರು.

**(ಕ್ರಮ: ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ)**

**ಸಮಾಜ ಕಲ್ಯಾಣ ಇಲಾಖೆ :**

ಸಮಾಜ ಕಲ್ಯಾಣ ಇಲಾಖಾ ವತಿಯಿಂದ ಸುಮಾರು 1.80 ಲಕ್ಷ ಕಾಮಗಾರಿ ನಡೆಯುತ್ತಿದ್ದು, ಹೆಚ್ಚುವರಿ 01 ಕೋಟಿ ಅನುದಾನಕ್ಕೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ವಿದ್ಯಾರ್ಥಿ ವೇತನ ನೀಡಲು ಅನುದಾನ ಲಭ್ಯವಿದ್ದು, ದಿನಾಂಕ: 30-09-2019 ರಂದು ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಿದ್ದು, ಕಳೆದ ವಾರದಲ್ಲಿ ಹಾಸ್ಟೆಲ್ ವಾರ್ಡನ್‌ಗಳ ನೇಮಕಾತಿ ಪ್ರಕ್ರಿಯೆ ನಡೆದಿದ್ದು, ಇನ್ನೂ 10 ದಿನಗಳಲ್ಲಿ ನೇಮಕಾತಿ ಮಾಡಲು ಸರ್ಕಾರದಿಂದ ಆದೇಶ ನೀಡುವ ಪ್ರಕ್ರಿಯೆಯಲ್ಲಿರುತ್ತದೆ. ಹಾಸ್ಟೆಲ್‌ಗಳಲ್ಲಿ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳ ಜೊತೆ ಒ.ಬಿ.ಸಿ ವಿದ್ಯಾರ್ಥಿಗಳಿಗೂ ಸಹ ಶೇ. 25% ರಷ್ಟು ಪ್ರವೇಶಕ್ಕೆ ಅವಕಾಶವಿರುತ್ತದೆ ಎಂದು ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಚಾಮರಾಜನಗರ ರವರು ತಿಳಿಸಿದರು.

**(ಕ್ರಮ: ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ)**

**ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ :**

ಚಾಮರಾಜನಗರ ಜಿಲ್ಲೆಯಲ್ಲಿ ಕೊಳ್ಳೇಗಾಲ, ಚಾಮರಾಜನಗರ, ಯಳಂದೂರು, ಗುಂಡ್ಲುಪೇಟೆ ತಾಲ್ಲೂಕುಗಳಲ್ಲಿ ಒಟ್ಟು 36 ವಿದ್ಯಾರ್ಥಿ ನಿಲಯಗಳಿದ್ದು, ಹೆಚ್ಚುವರಿಯಾಗಿ ಇನ್ನೂ 5 ವಿದ್ಯಾರ್ಥಿ ನಿಲಯಗಳನ್ನು ಮಂಜೂರು ಮಾಡಿಸಿ ಕೊಡುವಂತೆ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಚಾಮರಾಜನಗರ ರವರು ಸಭೆಯಲ್ಲಿ ಕೋರಿದರು.

ಅರಣ್ಯದೊಳಗೆ ಇರುವ ಆಶ್ರಮ ಶಾಲೆಗಳಲ್ಲಿ ಮ್ಕಕಳು ಶಾಲೆ ಬಿಟ್ಟು ಹೋಗುತ್ತಿರುವ ಬಗ್ಗೆ, ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಅರಣ್ಯ ಇಲಾಖೆಯವರು ಈ ಕುರಿತು ಚರ್ಚಿಸಿ, 01ನೇ ತರಗತಿಯಿಂದ 07ನೇ ತರಗತಿಗೆ ಶಾಲೆಗಳನ್ನು ಮೇಲ್ದರ್ಜೆಗೆ ಏರಿಸಿ ಅಗತ್ಯ ಕ್ರಮವಹಿಸಿ, ಶಾಲೆಗಳಲ್ಲಿ ಮಕ್ಕಳು ವಿದ್ಯಾಭ್ಯಾಸ ಕಲಿಯಲು ಬರುವಂತೆ ಕ್ರಮವಹಿಸ ಬೇಕೆಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು.

**(ಕ್ರಮ: ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕ್ಷೇತ್ರ ನಿರ್ದೇಶಕರು, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ, ಬಂಡೀಪುರ, ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕ್ಷೇತ್ರ ನಿರ್ದೇಶಕರು, ಬಿ.ಆರ್.ಟಿ ಹುಲಿ ಸಂರಕ್ಷಿತ ಪ್ರದೇಶ, ಉಪ ಅರಣ್ಯ ಸಂರಕ್ಷಣಾಧಿಕಾರಿ, ಮ್ಮಲೈಮಹದೇಶ್ವರ ವನ್ಯ ಜೀವಿ ವಿಭಾಗ, ಹನೂರು, ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ, ಚಾಮರಾಜನಗರ ಹಾಗೂ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಾಮರಾಜನಗರ)**

**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:**

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಜನರು ಕೇರಳಾಕ್ಕೆ ಕೆಲಸದ ನಿಮಿತ್ತ ವಲಸೆ ಹೋಗುತ್ತಿರುತ್ತಾರೆ. ಆದ್ದರಿಂದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯಗಳ ಅವಶ್ಯಕವಿರುತ್ತದೆ. ಹಾಗೂ ಬಿ.ಎ ಬಿ.ಎಡ್ ಹಾಗೂ ಸ್ನಾತಕೋತ್ತರ ಪದವೀಧರರಿಂದ ಮೊರಾರ್ಜಿ ಶಾಲೆಯ ವಿದ್ಯಾರ್ಥಿಗಳಿಗೆ ಹೆಚ್ಚಿನ ತರಬೇತಿ ನೀಡುತ್ತಿರುವುದರಿಂದ ಉತ್ತಮ ಫಲಿತಾಂಶದಲ್ಲಿ ವಿದ್ಯಾರ್ಥಿಗಳು ಉತ್ತೀರ್ಣರಾಗುತ್ತಿದ್ದಾರೆ ಎಂದು ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ರವರು ಸಭೆಯಲ್ಲಿ ತಿಳಿಸಿದರು.

ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಯಾವ ರೀತಿಯಲ್ಲಿ ಬಿ.ಎ, ಬಿ.ಎಡ್ ಹಾಗೂ ಸ್ನಾತಕೋತ್ತರ ಪದವೀಧರರಿಂದ ವಿದ್ಯಾರ್ಥಿಗಳಿಗೆ ಹೆಚ್ಚಿನ ತರಬೇತಿ ನೀಡುತ್ತಿರುತ್ತಾರೋ ಅದೇ ಕ್ರಮವನ್ನು ಅನುಸರಿಸಿ ಸಾರ್ವಜನಿಕ ಶಿಕ್ಷಣ ಇಲಾಖೆಯವರು ಸಹ ಎಸ್.ಎಸ್.ಎಲ್.ಸಿ ಫಲಿತಾಂಶವನ್ನು ಮೇಲ್ದರ್ಜೆಗೆ ಏರಿಸಲು ಸ್ನಾತಕೋತ್ತರ ಪದವೀಧರರಿಂದ ವಿದ್ಯಾರ್ಥಿಗಳಿಗೆ ಹೆಚ್ಚಿನ ತರಬೇತಿ ನೀಡಲು ಸೂಕ್ತ ಕ್ರಮವಹಿಸಬೇಕೆಂದು ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಾಮರಾಜನಗರ ರವರಿಗೆ ಸೂಚಿಸಿದರು.

**(ಕ್ರಮ: ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಜಿಲ್ಲಾ ವ್ಯವಸ್ಥಾಪಕರು, ಹಿಂದುಳಿಗೆ ವರ್ಗಗಳ ಅಭಿವೃದ್ಧಿ ಇಲಾಖೆ)**

**ಮಲೈ ಮಹದೇಶ್ವರ ವನ್ಯ ಜೀವಿ ವಿಭಾಗ, ಹನೂರು ತಾಲ್ಲೂಕು:**

ದೊಡ್ಡಾಣೆ ಗ್ರಾಮಕ್ಕೆ ಮಾರ್ಟಳ್ಳಿ ಗ್ರಾಮದಿಂದ ರಸ್ತೆ ನಿರ್ಮಿಸಲಾಗಿದ್ದು, ದೊಡ್ಡಾಣೆ ಗ್ರಾಮದಲ್ಲಿನ ಗಿರಿಜನರಿಗೆ ಮಹದೇಶ್ವರ ಬೆಟ್ಟ ಮುಖ್ಯ ರಸ್ತೆಗೆ 45 ನಿಮಿಷದಲ್ಲಿ ತಲುಪುವಂತೆ ತೋಕೆರೆಯಿಂದ ದೊಡ್ಡಾಣೆ ಗ್ರಾಮದ ವರೆಗೆ ರಸ್ತೆಯನ್ನು ನಿರ್ಮಿಸಲಾಗಿರುತ್ತದೆ ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಲೈ ಮಹದೇಶ್ವರ ಬೆಟ್ಟ ರವರು ತಿಳಿಸಿದರು.

ದೊಡ್ಡಾಣೆ ಗ್ರಾಮದಿಂದ ಮಹದೇಶ್ವರ ಬೆಟ್ಟದ ಮುಖ್ಯ ರಸ್ತೆಗೆ ರಸ್ತೆ ಸಂಪರ್ಕ ಕಲ್ಪಿಸುವ ಬಗ್ಗೆ ಅರಣ್ಯ ಇಲಾಖೆಯ ಅನುದಾನದಲ್ಲಿ ಅಥವಾ ನರೇಗಾ ಯೋಜನೆಯಲ್ಲಿ ಪರಿಶೀಲಿಸಿ, ಅವಕಾಶವಿದ್ದರೆ ರಸ್ತೆ ನಿರ್ಮಾಣ ಮಾಡಲು ಕ್ರಮಕೈಗೊಳ್ಳುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಮುಖ್ಯ ಕಾರ್ಯನಿರ್ವಾಹಣ ಅಧಿಕಾರಿ ರವರಿಗೆ ಜಿಲ್ಲಾ ಪಂಚಾಯತ್, ಹಾಗೂ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಸಭೆಯಲ್ಲಿ ಸೂಚಿಸಿದರು. ದೊಡ್ಡಾಣೆ ಗ್ರಾಮದಲ್ಲಿ ಸಂಬಂಧಿಸಿದಂತೆ ಮೂಲಭೂತ ಸೌಕರ್ಯಗಳ ಕೊರತೆಯ ಕುರಿತು ಪಟ್ಟಿ ಮಾಡಿ ತಿಳಿಸುವಂತೆ ಸೂಚಿಸಿದರು.

**(ಕ್ರಮ: ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಲೈ ಮಹದೇಶ್ವರ ವನ್ಯ ಜೀವಿ ವಿಭಾಗ, ಹನೂರು)**

ಮುಂದುವರೆದು ಈ ಹಿಂದೆ ನಡೆದ ಸಭೆಗಳಲ್ಲಿ ಯಾಂತ್ರಿಕವಾಗಿ ಮಾಹಿತಿ ನೀಡಿರುವುದನ್ನು ಗಮನಿಸಿ, ಪ್ರಸ್ತುತ ಸಭೆಯಲ್ಲಿ ಸೂಚಿಸಿರುವಂತೆ, ಇಲಾಖೆಗಳಲ್ಲಿ ಅತಿ ಮುಖ್ಯವಾಗಿ ಆಗ ಬೇಕಾಗಿರುವ ಕೆಲಸಗಳು/ಸವಾಲುಗಳು ಮತ್ತು ಜನಸಾಮಾನ್ಯರಿಗೆ ತಲುಪಿಸಲು ಕೈಗೊಂಡಿರುವ ವಿಶೇಷ ಕ್ರಮಗಳನ್ನಾಧರಿಸಿ ಪ್ರಗತಿ ವರದಿಯನ್ನು ಜಿಲ್ಲಾ ಮಟ್ಟದ ಅಧಿಕಾರಿಗಳೇ ಖುದ್ದು ತಯಾರಿಸಿ ಮುಂದಿನ ಸಭೆಯಲ್ಲಿ ಕಡ್ಡಾಯವಾಗಿ ನೀಡುವಂತೆ ಸೂಚಿಸಿ, ಮಾನ್ಯ ಸರ್ಕಾರದ ಕಾರ್ಯದರ್ಶಿಗಳಿಗೆ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**(ರಾಜೇಂದರ್ ಕುಮಾರ್ ಕಟಾರಿಯಾ)**
ಸರ್ಕಾರದ ಕಾರ್ಯದರ್ಶಿ
ಕೃಷಿ ಇಲಾಖೆ ಹಾಗೂ ಚಾಮರಾಜನಗರ
ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,
ಚಾಮರಾಜನಗರ

**ದಿ:-30-09-2019 ರಂದು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕ ಇಲಾಖೆ ಮತ್ತು ಬಳ್ಳಾರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಇವರ ಅಧ್ಯಕ್ಷತೆಯಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಪ್ರವಾಹದ ಮತ್ತು ಬರ ಪರಿಸ್ಥಿತಿ ಕುರಿತು ನಡೆದ ಸಭೆಯ ನಡವಳಿಗಳು**

********

ಹಾಜರಿದ್ದ ಅಧಿಕಾರಿಗಳು:-

1) ಜಿಲ್ಲಾಧಿಕಾರಿಗಳು, ಬಳ್ಳಾರಿ.
2) ಮುಖ್ಯ ಕಾರ್ಯನಿರ್ವಹಕ ಅಧಿಕಾರಿಗಳು, ಬಳ್ಳಾರಿ.
3) ಅಪರ ಜಿಲ್ಲಾಧಿಕಾರಿಗಳು, ಬಳ್ಳಾರಿ.
4) ಸಹಾಯಕ ಆಯುಕ್ತರು, ಬಳ್ಳಾರಿ, ಹೊಸಪೇಟೆ ಮತ್ತು ಹರಪನಹಳ್ಳಿ.
5) ಜಂಟಿ ನಿದೇಶಕರು, ಕೃಷಿ ಇಲಾಖೆ, ಬಳ್ಳಾರಿ.
6) ಆಯುಕ್ತರು, ಮಹಾನಗರ ಪಾಲಿಕೆ, ಬಳ್ಳಾರಿ.
7) ಉಪ ನಿರ್ದೇಶಕರು, ತೋಟಗಾರಿಕೆ ಇಲಖೆ, ಬಳ್ಳಾರಿ.
8) ಉಪ ನಿರ್ದೇಶಕರು, ಪಶುಸಂಗೋಪನಾ ಇಲಾಖೆ, ಬಳ್ಳಾರಿ.
9) ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬಳ್ಳಾರಿ.
10) ಕಾರ್ಯನಿರ್ವಾಹಕ ಅಭಿಯಂತರರು, RDWS & D, ಬಳ್ಳಾರಿ.
11) ಕಾರ್ಯನಿರ್ವಾಹಕ ಅಭಿಯಂತರರು, ಕೆ.ಯು.ಡಬ್ಲ್ಯು.ಎಸ್.ಡಿ. ಬಳ್ಳಾರಿ.

******

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಹಾಜರಿದ್ದ ಜಿಲ್ಲಾಧಿಕಾರಿಗಳನ್ನು ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸುತ್ತ ಜಿಲ್ಲಾಧಿಕಾರಿಗಳಿಗೆ ಬಳ್ಳಾರಿ ಜಿಲ್ಲೆಯಲ್ಲಿನ ಬರ ಮತ್ತು ಪ್ರವಾಹ ಪರಿಸ್ಥಿತಿ ಕುರಿತು ವಿವರಣೆ ನೀಡಲು ಸೂಚಿಸಿದರು.

**ಜಿಲ್ಲಾಧಿಕಾರಿಗಳು ಪ್ರವಾಹದ ಕುರಿತು ಈ ಕೆಳಕಂಡ ಮಾಹಿತಿಯನ್ನು ಸಭೆಯ ಗಮನಕ್ಕೆ ತಂದರು,**

1) ಸರ್ಕಾರವು ಬಳ್ಳಾರಿ ಜಿಲ್ಲೆಯ ಹಡಗಲಿ ಮತ್ತು ಹರಪನಹಳ್ಳಿ ತಾಲ್ಲೂಕುಗಳನ್ನು ಮಾತ್ರ ಪ್ರವಾಹ ಪೀಡಿತ ತಾಲ್ಲೂಕುಗಳೆಂದು ಘೋಷಣೆ ಮಾಡಿದ್ದು, ಜಿಲ್ಲೆಯಲ್ಲಿ ಪ್ರಸ್ತುತ ಯಾವುದೇ ಗಂಜೀ ಕೇಂದ್ರಗಳು ಕಾರ್ಯನಿರ್ವಹಿಸುತ್ತಿಲ್ಲ ಎಂದು ತಿಳಿಸಿದರು.

2) ಆಗಸ್ಟ್ 2019 ರಲ್ಲಿ ಪ್ರವಾಹದಿಂದ ಜಿಲ್ಲೆಯಲ್ಲಿ ಸಂಭವಿಸಿದ್ದ ಬೆಳೆ ನಷ್ಟಕ್ಕೆ ಪರಿಹಾರ ತಂತ್ರಾಂಶದಲ್ಲಿ ಡೇಟಾ ಎಂಟ್ರಿ ಕಾರ್ಯ ಪೂರ್ಣಗೊಳಿಸಲಾಗಿದ್ದು, ಸರ್ಕಾರದಿಂದ ಪರಿಹಾರ ವಿತರಣೆ ಆಗಲು ಬಾಕಿ ಇದೆ ಎಂದು ತಿಳಿಸಿದರು.

3) ಆರ್.ಜಿ.ಆರ್.ಹೆಚ್.ಸಿ.ಎಲ್. ತಂತ್ರಾಂಶದಲ್ಲಿ ಪ್ರವಾಹದಿಂದ ಹಾನಿಯಾದ ಮನೆಗಳ ವಿವರಗಳನ್ನು ಡೇಟಾ ಎಂಟ್ರಿ ಮಾಡಲಾಗಿದೆ ಎಂದು ತಿಳಿಸಿದರು. ಹಡಗಲಿ ತಾಲ್ಲೂಕಿನಲ್ಲಿ ಒಟ್ಟು 630 ಮನೆಗಳ ಪೈಕಿ 590 ಮನೆಗಳ ಡೇಟಾ ಎಂಟ್ರಿ ಪೂರ್ಣಗೊಂಡಿದ್ದು ಇನ್ನು 40 ರೇಷನ್ ಕಾರ್ಡ್ ತಾಂತ್ರಿಕ ತೊಂದರೆ ಇದ್ದು ಈ ಕುರಿತು ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ಎಂದು ತಿಳಿಸಿದರು.

4) ಅದೇ ರೀತಿ ಹರಪನಹಳ್ಳಿ ತಾಲ್ಲೂಕಿನಲ್ಲಿ ಒಟ್ಟು 387 ಮನೆಗಳ ಪೈಕಿ 368 ಮನೆಗಳ ಡೇಟಾ ಎಂಟ್ರಿ ಪೂರ್ಣಗೊಂಡಿದ್ದು ಇನ್ನು 40 ರೇಷನ್ ಕಾರ್ಡ್ ತಾಂತ್ರಿಕ ತೊಂದರೆ ಇದ್ದು ಸರ್ಕಾರದ ಗಮನಕ್ಕೆ ತರಲಾಗಿದೆ ಎಂದು ತಿಳಿಸಿದರು.

5) ಎಲ್ಲಾ 1017 ಮನೆಗಳಿಗೆ ಸರ್ಕಾರದ ನಿರ್ದೇಶನದಂತೆ ಗರಿಷ್ಠ ರೂ.25000/- ಗಳನ್ನು ಈಗಾಗಲೇ ಆರ್.ಟಿ.ಜಿ.ಎಸ್. ಮಾಡಲಾಗಿದೆ ಎಂದು ತಿಳಿಸಿದರು.

6) ಜಿಲ್ಲೆಯಲ್ಲಿ ಡೇಟಾ ಎಂಟ್ರಿಯಾದ ಒಟ್ಟು 958 ಮನೆಗಳ ಪೈಕಿ 91 "B Category" ಗೆ ಸೇರಿದ್ದು ಮತ್ತು 867 ಮನೆಗಳು "C Category" ಸೇರಿರುತ್ತವೆ.

7) ದಿ:23-09-2019 ರಿಂದ ದಿ:28-09-2019 ರವರೆಗೆ ಬಳ್ಳಾರಿ ಜಿಲ್ಲೆಯಲ್ಲಿ ಸುರಿದ ಮಳೆಯಿಂದ ಈ ಕೆಳಕಂಡ ಹಾನಿಯಾಗಿರುತ್ತದೆ ಎಂದು ತಿಳಿಸಿದರು. ಈ ಹಾನಿಗಳಿಗೆ ನಿಯಮಾನುಸಾರ ಪರಿಹಾರ ನೀಡಲು ಕ್ರಮಕೈಗೊಳ್ಳಲಾಗಿದೆ ಎಂದು ತಿಳಿಸಿದರು.

| ಕ್ರ.ಸಂ | ತಾಲ್ಲೂಕು ಹೆಸರು | ಜೀವ ಹಾನಿ | ಪ್ರಾಣಿ ಹಾನಿ | ಮನೆಗಳ ಹಾನಿ | ಅಂದಾಜು ನಷ್ಟ (ಲಕ್ಷಗಳಲ್ಲಿ) | ಬೆಳೆಗಳ ಹಾನಿ (ಹೆಕ್ಟರ್) | ಅಂದಾಜು ಹಾನಿ (ಲಕ್ಷಗಳಲ್ಲಿ) | ಷರಾ |
|---|---|---|---|---|---|---|---|---|
| 1 | ಬಳ್ಳಾರಿ | 0 | 0 | 49 | 4.9 | 883.8 | 119.31 | ಭತ್ತ, ಹತ್ತಿ, ಮೆಣಸಿನಕಾಯಿ ಬೆಳೆ ನೀರಿನಲ್ಲಿ ಮುಳುಗಡೆಯಾಗಿದೆ. ನೀರು ನಿಂತಿರುವುದರಿಂದ ಜಂಟಿ ಸಮೀಕ್ಷೆ ಮಾಡಲು ಬಾಕಿ ಇದೆ. ಜಂಟಿ ಸಮೀಕ್ಷೆ ಮುಗಿದ ನಂತರ Actual Loss ವರದಿ ಮಾಡಲಾಗುವುದು. |
| 2 | ಸಿರುಗುಪ್ಪ | 0 | 0 | 155 | 9.2 | 1640.00 | 221.40 | ಭತ್ತದ ಬೆಳೆ ನೀರಿನಲ್ಲಿ ಮುಳುಗಡೆಯಾಗಿದೆ. ನೀರು ನಿಂತಿರುವುದರಿಂದ ಜಂಟಿ ಸಮೀಕ್ಷೆ ಮಾಡಲು ಬಾಕಿ ಇದೆ. ಜಂಟಿ ಸಮೀಕ್ಷೆ ಮುಗಿದ ನಂತರ Actual Loss ವರದಿ ಮಾಡಲಾಗುವುದು. |
| 3 | ಕುರುಗೋಡು | 0 | 0 | 71 | 13.30 | 503.64 | 67.99 | ಮೆಣಸಿನ ಕಾಯಿ, ಭತ್ತ, ಹತ್ತಿ ನೀರಿನಲ್ಲಿ ಮುಳುಗಡೆಯಾಗಿವೆ. ನೀರು ನಿಂತಿರುವುದರಿಂದ ಜಂಟಿ ಸಮೀಕ್ಷೆ ಮಾಡಲು ಬಾಕಿ ಇದೆ. ಜಂಟಿ ಸಮೀಕ್ಷೆ ಮುಗಿದ ನಂತರ Actual Loss ವರದಿ ಮಾಡಲಾಗುವುದು. |
| 4 | ಸಂಡೂರು | 0 | 10 | 24 | 2.4 | 0 | 0 | ಕುರಿಗಳು ಸಿಡಿಲಿನಿಂದ ಮೃತ ಪಟ್ಟಿರುತ್ತವೆ. |
| 5 | ಹೊಸಪೇಟೆ | 1 | 0 | 6 | 2.8 | 0 | 0 | - |
| 6 | ಕಂಪ್ಲಿ | 0 | 0 | 16 | 1.6 | 0 | 0 | - |
| 7 | ಹ.ಬೊ.ಹಳ್ಳಿ | 0 | 0 | 16 | 1.6 | 0 | 0 | - |
| 8 | ಕೂಡ್ಲಿಗಿ | 0 | 1 | 18 | 1.8 | 0 | 0 | ಎಮ್ಮೆ ಗೋಡೆ ಕುಸಿತದಿಂದ ಮೃತ ಪಟ್ಟಿರುತ್ತದೆ. |
| 9 | ಕೊಟ್ಟೂರು | 0 | 0 | 0 | 0 | 0 | 0 | - |
| 10 | ಹಡಗಲಿ | 0 | 0 | 12 | 1.2 | 0 | 0 | - |
| 11 | ಹರಪನಹಳ್ಳಿ | 0 | 0 | 9 | 0.90 | 0 | 0 | - |
| | ಒಟ್ಟು | 1 | 11 | 376 | 39.7 | 3027.44 | 408.7 | |

8) ಜಿಲ್ಲೆಯಲ್ಲಿ ಸದರಿ ಮಳೆಯಿಂದಾದ ಮೂಲಭೂತ ಸೌಕರ್ಯಗಳ ಹಾನಿಯ ವಿವರ ಈ ಕೆಳಕಂಡಂತೆ ಇದೆ ಎಂದು ತಿಳಿಸಿದರು.

| ಕ್ರ ಸಂ | ತಾಲ್ಲೂಕು ಹೆಸರು | ರಸ್ತೆ | | ಬ್ರಿಡ್ಜ್/ಕಲ್ವರ್ಟ್ | | ಎಲೆಕ್ಟ್ರಿಕಲ್ ಕಂಬಗಳು | | ಟ್ರಾನ್ಸ್ ಫಾರ್ಮರ್‌ಗಳು | | ಎಲೆಕ್ಟ್ರಿಕಲ್ ಕಂಡಕ್ಟರ್ | |
|---|---|---|---|---|---|---|---|---|---|---|---|
| | | ಉದ್ದ ಕಿ.ಮಿ. | ಅಂದಾಜು ನಷ್ಟ (ರೂ.ಲಕ್ಷಗಳಲ್ಲಿ) | ಉದ್ದ ಕಿ.ಮಿ. | ಅಂದಾಜು ನಷ್ಟ (ರೂ.ಲಕ್ಷಗಳಲ್ಲಿ) | ಸಂಖ್ಯೆ | ಅಂದಾಜು ನಷ್ಟ (ರೂ.ಲಕ್ಷಗಳಲ್ಲಿ) | ಸಂಖ್ಯೆ | ಅಂದಾಜು ನಷ್ಟ (ರೂ.ಲಕ್ಷಗಳಲ್ಲಿ) | ಉದ್ದ ಕಿ.ಮೀ. | ಅಂದಾಜು ನಷ್ಟ (ರೂ.ಲಕ್ಷಗಳಲ್ಲಿ) |
| 1 | ಬಳ್ಳಾರಿ (ಕುರುಗೋಡು ಸೇರಿರುತ್ತದೆ) | 29.95 | 136 | 19 | 91 | 46 | 2.76 | 8 | 12.0 | 0 | 0 |
| 2 | ಸಿರುಗುಪ್ಪ | 25.8 | 29.5 | 15 | 364 | 70 | 4.2 | 30 | 45 | 0 | 0 |
| 3 | ಸಂಡೂರು | 0 | 0 | 0 | 0 | 23 | 1.38 | 25 | 37.5 | 0 | 0 |
| 4 | ಹೊಸಪೇಟೆ | 0 | 0 | 0 | 0 | 15 | 0.9 | 6 | 7.6 | 1 | 0.36 |
| 5 | ಕಂಪ್ಲಿ | 0 | 0 | 0 | 0 | 15 | 0.9 | 6 | 7.6 | 1 | 0.36 |
| 6 | ಹ.ಬೊ.ಹಳ್ಳಿ | 0 | 0 | 0 | 0 | 10 | 0.6 | 5 | 6.3 | 0 | 0 |
| 7 | ಕೂಡ್ಲಿಗಿ | 0 | 0 | 0 | 0 | 10 | 0.6 | 3 | 3.8 | 1 | 0.36 |
| 8 | ಕೊಟ್ಟೂರು | 0 | 0 | 0 | 0 | 10 | 0.6 | 3 | 3.8 | 0 | 0 |
| 9 | ಹಡಗಲಿ | 0 | 0 | 0 | 0 | 10 | 0.6 | 5 | 6.3 | 1 | 0.36 |
| 10 | ಹರಪನಹಳ್ಳಿ | 0 | 0 | 0 | 0 | 0 | 0 | 0 | 0 | 0 | 0 |
| | ಒಟ್ಟು | 55.75 | 165.5 | 34 | 455 | 93 | 5.58 | 53 | 72.9 | 4 | 1.44 |

**ಜಿಲ್ಲಾಧಿಕಾರಿಗಳು ಬರ ಪರಿಸ್ಥಿತಿ ಕುರಿತು ಈ ಕೆಳಕಂಡ ಮಾಹಿತಿಯನ್ನು ಸಭೆಯ ಗಮನಕ್ಕೆ ತಂದರು,**

1) ಈ ಕಾರ್ಯಾಲಯದ ಪತ್ರ ದಿ: 07.09.2019 ರಲ್ಲಿ ಬರ ಪರಿಹಾರ ಕಾರ್ಯಗಳನ್ನು (ಕುಡಿಯುವ ನೀರು ಸರಬರಾಜು, ಗೋಶಾಲೆ ಮತ್ತು ಮೇವು ಬ್ಯಾಂಕ್) ಮುಂದುವರೆಸಲು ಸರ್ಕಾರಕ್ಕೆ ಕೋರಲಾಗಿತ್ತು. ಆದರೆ, ಸರ್ಕಾರದಿಂದ ಅನುಮತಿ ಬಾರದೆ ಇರುವುದರಿಂದ, ಈ ಕಾರ್ಯಾಲಯದ ಪತ್ರ ದಿ: 13.09.2019 ರಲ್ಲಿ ಕುಡಿಯುವ ನೀರು ಸರಬರಾಜು, ಗೋಶಾಲೆ ಮತ್ತು ಮೇವು ಬ್ಯಾಂಕ್‌ಗಳನ್ನು ಸ್ಥಗಿತಗೊಳಿಸಲು ಸೂಚಿಸುತ್ತಾ ಕುಡಿಯುವ ನೀರು ಸಮಸ್ಯೆ ಇರುವ ಗ್ರಾಮಗಳಲ್ಲಿ ಗ್ರಾಮ ಪಂಚಾಯಿತಿ ವತಿಯಿಂದ ಸಮಸ್ಯೆ ಬಗೆಹರಿಸಲು ಸೂಕ್ತ ಕ್ರಮ ಕೈಗೊಂಡು ಯಾವುದೇ ನೀರಿನ ಸಮಸ್ಯೆ ಬಾರದಂತೆ ನೋಡಿಕೊಳ್ಳಲು ಸೂಚನೆಗಳನ್ನು ನೀಡಲಾಗಿದೆ ಎಂದು ತಿಳಿಸಿದರು.

2) ಪ್ರಸ್ತುತ ಜಿಲ್ಲೆಯಲ್ಲಿ 56 ಟ್ಯಾಂಕರ್ ಬಳಸಿ 37 ಗ್ರಾಮಗಳಲ್ಲಿ ಕುಡಿಯುವ ನೀರನ್ನು ಮತ್ತು 174 ಗ್ರಾಮಗಳಲ್ಲಿ 226 ಖಾಸಗಿ ಬೋರ್‌ವೆಲ್‌ಗಳ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ ಎಂದು ತಿಳಿಸಿದರು.

3) ಪ್ರಸ್ತುತ ಜಿಲ್ಲೆಯಲ್ಲಿ ಎಲ್ಲಾ ಮೇವು ಬ್ಯಾಂಕ್ ಮತ್ತು ಗೋಶಾಲೆಗಳ ಕಾರ್ಯ ಸ್ಥಗಿತಗೊಳಿಸಲಾಗಿದೆ ಎಂದು ತಿಳಿಸಿದರು.

4) ನಗರ ಪ್ರದೇಶದಲ್ಲಿ ಹೆಚ್ಚಿನ ನೀರಿನ ಸಮಸ್ಯೆ ಇರುವುದಿಲ್ಲ ಎಂದು ತಿಳಿಸಿದರು.

5) 2018-19 ನೇ ಸಾಲಿನಲ್ಲಿ ಬರದಿಂದ ಹಿಂಗಾರು ಹಂಗಾಮಿನಲ್ಲಿ ಸಂಭವಿಸಿದ್ದ ವಿ.37261 ಹೆಕ್ಟರ್ ಬೆಳೆ ನಷ್ಟಕ್ಕೆ ಪರಿಹಾರ ತಂತ್ರಾಂಶದಲ್ಲಿ ಈವರೆಗೆ ವಿ.27994 ಹೆಕ್ಟರ್ (ಶೇ.75%) ಡೇಟಾ ಎಂಟ್ರಿ ಕರ್ಯ ಪೂರ್ಣಗೊಂಡಿರುತ್ತದೆ ಎಂದು ತಿಳಿಸಿದರು.

**ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತಾ ಈ ಕೆಳಕಂಡ ಸೂಚನೆಗಳನ್ನು ನೀಡಿದರು,**

1) ಸೆಪ್ಟಂಬರ್ ತಿಂಗಳಲ್ಲಿ ಸುರಿದ ಮಳೆಯಿಂದ ಸಂಭವಿಸಿದ ಮನೆ ಮತ್ತು ಪ್ರಾಣಿ ಹಾನಿಗಳಿಗೆ ಕೂಡಲೇ ಪರಿಹಾರ ನೀಡಲು ಕ್ರಮವಹಿಸಲು ಸೂಚಿಸಿದರು.

2) ಮಳೆಯಿಂದ ಸಂಭವಿಸಿದ ಕೃಷಿ ಮತ್ತು ತೋಟಗಾರಿಕೆ ಬೆಳೆ ನಷ್ಟದ ಕುರಿತು ಕೂಡಲೇ ಜಂಟಿ ಸಮೀಕ್ಷೆ ನಡೆಸಲು ಸೂಚಿಸಿದರು.

3) ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಾರದಂತೆ ಕ್ರಮವಹಿಸಲು ಕಾರ್ಯನಿರ್ವಾಹಕ ಅಭಿಯಂತರರು, ಗ್ರಾ.ಕು.ನೀ& ನೈ ವಿಭಾಗ, ಬಳ್ಳಾರಿ ಮತ್ತು ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬಳ್ಳಾರಿ ಇವರಿಗೆ ಸೂಚಿಸಿದರು.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ವಾಣಿಜ್ಯ ಮತು ಕೈಗಾರಿಕ ಇಲಾಖೆ,
ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,
ಬಳ್ಳಾರಿ ಜಿಲ್ಲೆ,
ಬಳ್ಳಾರಿ.

## ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಿಂದ ಪ್ರತಿ ತಿಂಗಳು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಸಲ್ಲಿಸಬೇಕಾದ ನಮೂನೆ

### ಬಾಗಲಕೋಟೆ ಜಿಲ್ಲೆ

| ಕ್ರ. ಸಂ. | ಅಂಶಗಳು | ಕಾರ್ಯದರ್ಶಿಗಳ ಷರಾ |
|---|---|---|
| 1. | ಜಿಲ್ಲೆಯ ಹೆಸರು | ಬಾಗಲಕೋಟೆ |
| 2. | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ಹೆಸರು | ಮನೋಜ್ ಕುಮಾರ್ ಮೀನಾ, ಭಾ.ಆ.ಸೇ. |
| 3. | ಭೇಟಿಯಾದ / ಪ್ರವಾಸದ ದಿನಾಂಕ: | 03-10-2019 ರಿಂದ 04-10-2019 |
| 4. | ಮುಖ್ಯವಾಗಿ ಗಮನಿಸಿದ ಅಂಶಗಳು ಹಾಗೂ ಸಲಹೆಗಳು | 1)ಬಾಗಲಕೋಟೆ ಜಿಲ್ಲೆಯಲ್ಲಿ ಪ್ರವಾಹದಿಂದ ಒಟ್ಟು 7383 ಮನೆಗಳು ಹಾನಿಗೊಳಗಾಗಿದ್ದು, ಇದರಲ್ಲಿ ಎ ಕೆಟಗರಿ 471, ಬಿ ಕೆಟಗರಿ 1801, ಸಿ ಕೆಟಗರಿ 5111 ಈ ರೀತಿ ಇದ್ದು, ಸ್ವಂತ ಮನೆ ಇಲ್ಲದೇ ಇದ್ದವರಿಗೆ ಶೆಡ್ ನಿರ್ಮಿಸಿಕೊಡಲು ತಿಳಿಸಿದರು. ಇಲ್ಲದೇ ಇದ್ದರೆ, ಬಾಡಿಗೆ ಮನೆಯಲ್ಲಿ ಇರಲು ಬಯಸಿದರೆ, ಅವರಿಗೆ ಪ್ರತಿ ತಿಂಗಳು ರೂ.5000-00 ರಂತೆ ಪರಿಹಾರ ವಿತರಿಸಲು ಸೂಚಿಸಲಾಯಿತು.<br>2) ಬೆಳೆಹಾನಿ ಕೃಷಿ, ತೋಟಗಾರಿಕೆ, ರೇಷ್ಮೆ ಈ ಎಲ್ಲ ಬೆಳೆಗಳು ಒಟ್ಟು ಅಂದಾಜು ಹಾನಿ-71750 ಹೆ. ಹಾನಿಯಾಗಿದ್ದು, ಇದರ ಅಂದಾಜು ಮೊತ್ತ ರೂ.1675.28 ಕೋಟಿ ಆಗಿದ್ದು, NDRF/SDRF ರ ಮಾರ್ಗಸೂಚಿ ಪ್ರಕಾರ ಅನುದಾನ ವಿತರಿಸಬೇಕಾಗಿದ್ದು, ಈ ಕುರಿತು ಬೆಳೆ ಹಾನಿಯಾದ ಬಗ್ಗೆ ಬೆಳೆ ಪರಿಹಾರ ತಂತ್ರಾಂಶದಲ್ಲಿ ಅಳವಡಿಸುವ ಕೆಲಸ ಪ್ರಗತಿಯಲ್ಲಿದ್ದು, ಇದನ್ನು ನೇರವಾಗಿ RTGS ಮುಖಾಂತರ ರೈತರ ಖಾತೆಗಳಿಗೆ ಜಮಾ ಆಗುತ್ತದೆ ಎಂದು ಕೃಷಿ ಅಧಿಕಾರಿಗಳು ತಿಳಿಸಿದರು.<br>3) ಬಾಗಲಕೋಟೆ ಜಿಲ್ಲೆಯಲ್ಲಿ ನೆರೆ ಪ್ರವಾಹದಿಂದ ಹೆಸ್ಕಾಂ ಇಲಾಖೆಗೆ ಸಂಬಂಧಿಸಿದಂತೆ, ಹಾನಿಯಾದ ವಿದ್ಯುತ್ ಕಂಬಗಳು, ಟಿಸಿಗಳು ಹಾಗೂ ಕಂಡಕ್ಟರ್‌ಗಳು ಇವುಗಳನ್ನು ತ್ವರಿತವಾಗಿ ದುರಸ್ತಿ ಮಾಡಲು ಸೂಚಿಸಲಾಯಿತು.<br>4) 45,997 ಸಂತ್ರಸ್ಥ ಕುಟುಂಬಗಳಿಗೆ ರೂ.10.000 ರಂತೆ ಪರಿಹಾರ ವಿತರಿಸಲಾಗಿದೆ. ಆದರೂ ಸಹಿತ ಅರ್ಹ ಕುಟುಂಬಗಳು ಬಿಟ್ಟು ಹೋಗಿದ್ದರೆ ಅಂತಹವುಗಳನ್ನು ಇನ್ನೊಮ್ಮೆ ಪರಿಶೀಲಿಸಿ ಅವರುಗಳಿಗೆ ಪರಿಹಾರ ವಿತರಿಸಲು ಕ್ರಮ ಕೈಗೊಳ್ಳಲು ಸೂಚಿಸಲಾಯಿತು.<br>5) ನೆರೆಯಿಂದ ಹಾವಳಿಗೊಳಗಾದ ಕೃಷಿ ಪ್ರದೇಶದಲ್ಲಿ ಹೊಸ ಬೆಳೆಯನ್ನು ಪರ್ಯಾಯ ಬೆಳೆಯಾಗಿ ತೆಗೆದುಕೊಳ್ಳಲು |

| | | |
|---|---|---|
| | | ರೈತರಿಗೆ ಅನುಕೂಲವಾಗುವಂತೆ ಬಿತ್ತನೆ ಬೀಜ ಹಾಗೂ ರಸಗೊಬ್ಬರ ದಾಸ್ತಾನೀಕರಿಸಲು ಹಾಗೂ ಪೂರೈಸಲು ಕ್ರಮವಹಿಸಲು ಸೂಚಿಸಲಾಯಿತು.<br>6) ಮುಂಗಾರು ಬೆಳೆ ಸಮೀಕ್ಷೆಯಲ್ಲಿ ಶೇಕಡಾ 88.66 ರಷ್ಟು ಪ್ರಗತಿಯಾಗಿದ್ದು, ಸಮೀಕ್ಷೆ ಕಾರ್ಯವನ್ನು ಇನ್ನೂ ತೀವ್ರಗೊಳಿಸಿ ಪೂರ್ಣ ಪ್ರಮಾಣದ ಪ್ರಗತಿಯನ್ನು ಸಾಧಿಸಲು ನಿರ್ದೇಶಿಸಲಾಯಿತು.<br>7) ಪಂಚಾಯತ್ ರಾಜ್ ಇಂಜನೀಯರಿಂಗ್:- ಒಟ್ಟು 316 ಗ್ರಾಮೀಣ ರಸ್ತೆಗಳು ಬಾಧಿತವಾಗಿದ್ದು, ದುರಸ್ಥಿಗಾಗಿ ರೂ.692.34 ಲಕ್ಷ ಅನುದಾನದ ಅವಶ್ಯಕತೆಯಿರುತ್ತದೆ. ತುರ್ತಾಗಿ ರೂ.300.82 ಲಕ್ಷ ಅನುದಾನ ಬೇಕಾಗುತ್ತದೆ. ತುರ್ತಾಗಿ ರಸ್ತೆ ದುರಸ್ತಿಗಾಗಿ ಪ್ರತಿ ಕಿ.ಮೀ. ರೂ.60000.00 ಗಳು ಬೇಕಾಗಿದ್ದು, ರಸ್ತೆ ದುರಸ್ತಿಗೆ ಒಟ್ಟು 415.40 ಲಕ್ಷಗಳು NDRF ನಾರ್ಮ್ಸ್ ಪ್ರಕಾರ ಬೇಕಾಗುತ್ತದೆ. ಶೀಘ್ರದಲ್ಲಿ ಕ್ರಮ ಕೈಕೊಳ್ಳಲು ಸೂಚಿಸಲಾಯಿತು.<br>8) ಒಟ್ಟು 19 ಸೇತುವೆಗಳು ಹಾಳಾಗಿದ್ದು, ಅದಕ್ಕೆ ಒಟ್ಟು 66.05 ಲಕ್ಷ ಅನುದಾನ ಬೇಕಾಗುವುದು. ಹಾನಿಗೊಳಗಾದ ಸೇತುವೆಗಳಿಗೆ 60000.00 ರಂತೆ ಒಟ್ಟು ಅನುದಾನ ರೂ.11.40 ಲಕ್ಷ ಅನುದಾನ ತುರ್ತಾಗಿ ದುರಸ್ಥಿಗೊಳಿಸಲು ಬೇಕಾಗುವುದು. ಒಟ್ಟಾರೆ, ಜಿಲ್ಲೆಯ ಎಲ್ಲಾ ತಾಲೂಕುಗಳ 335 ರಸ್ತೆಗಳಿಗೆ ಮತ್ತು ಸೇತುವೆ ಕಾಮಗಾರಿಗಳಿಗೆ ಒಟ್ಟು ರೂ.426.80 ಲಕ್ಷ ಅನುದಾನ ಅವಶ್ಯವಿರುವುದು. ಶೀಘ್ರದಲ್ಲಿ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.<br>9) ಕಿರಿಯ ಮತ್ತು ಹಿರಿಯ ಶಾಲೆಗಳು 154, ಸಮುದಾಯ ಭವನ 47, ಆರೋಗ್ಯ ಕೇಂದ್ರ 14, ಮತ್ತು ಅಂಗನವಾಡಿ ಕೇಂದ್ರ 144 ಇದ್ದು, 154 ಶಾಲೆಗಳಿಗೆ ರೂ.3713.00 ಲಕ್ಷ ಅನುದಾನ ಅವಶ್ಯವಿರುವುದು. ಒಂದು ಯುನಿಟ್‌ಗೆ NDRF ನಾರ್ಮ್ಸ್ ಪ್ರಕಾರ ರೂ.2.00 ಲಕ್ಷದಂತೆ ರೂ.308.00 ಲಕ್ಷ ಅನುದಾನ ಬೇಕಾಗುವುದು. ಮತ್ತು 47 ಸಮುದಾಯ ಭವನಕ್ಕೆ ರೂ.178.70 ಲಕ್ಷ ಅನುದಾನ ಬೇಕಾಗುವುದು. NDRF ನಾರ್ಮ್ಸ್ ಪ್ರಕಾರ ಒಟ್ಟು ರೂ.94.00 ಲಕ್ಷ ಅನುದಾನದ ಅವಶ್ಯಕತೆ ಇರುವುದು. ಒಟ್ಟು ಪ್ರಾಥಮಿಕ ಆರೋಗ್ಯ ಕೇಂದ್ರ 14 ಹಾಳಾಗಿದ್ದು, ರೂ.105.00 ಲಕ್ಷ ಅನುದಾನ ಬೇಕಾಗಿದ್ದು, ಅದರಲ್ಲಿ NDRF ನಾರ್ಮ್ಸ್ ಪ್ರಕಾರ ರೂ.15.00 ಲಕ್ಷ ಅನುದಾನದ ಅವಶ್ಯಕತೆ ಇದೆ. ಒಟ್ಟು 144 ಅಂಗನವಾಡಿ ಕಟ್ಟಡ ದುರಸ್ತಿಗಳಿಗೆ ರೂ.535.25 ಲಕ್ಷ ಅನುದಾನ ಅವಶ್ಯಕತೆ ಇದ್ದು, NDRF ನಾರ್ಮ್ಸ್ ಪ್ರಕಾರ ರೂ.283.40 ಲಕ್ಷ ಅನುದಾನ ಬೇಕಾಗುವುದು. ಒಟ್ಟಾರೆಯಾಗಿ 689 ಕಾಮಗಾರಿಗಳಿಗೆ ರೂ.7696.00 ಲಕ್ಷ ಅನುದಾನ ಅವಶ್ಯಕತೆ ಇರುತ್ತದೆ. NDRF ನಾರ್ಮ್ಸ್ ಪ್ರಕಾರ ತುರ್ತಾಗಿ ರೂ.1133.75 ಲಕ್ಷ ಅನುದಾನದ ಅವಶ್ಯಕತೆ |

| | | |
|---|---|---|
| | | ಇರುವುದರಿಂದ ಶೀಘ್ರದಲ್ಲಿ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.<br>10) ಎಸ್.ವ್ಹಿ.ಎಸ್. ಯೋಜನೆಯಡಿ 229 ಘಟಕ ಬಾಧಿತವಾಗಿದ್ದು, 141 ಗ್ರಾಮ ಪಂಚಾಯತ ಮುಖಾಂತರ ದುರಸ್ತಿಗೊಳಿಸಲಾಗಿದ್ದು, 84 ಬಾದಿತವಾಗಿದ್ದು, ಅದರಲ್ಲಿ 80 ಪಂಚಾಯತ ರಾಜ್ [ಇಂ] ಇವರಿಂದ ದುರಸ್ಥಿಗೊಳಿಸಲಾಗಿದೆ. ಇನ್ನು 4 ಘಟಕಗಳ ಸ್ಥಳಗಳಲ್ಲಿ ಕೆಸರು ಇರುವುದರಿಂದ ದುರಸ್ಥಿಗೊಳಿಸಲು ಸಾಧ್ಯವಾಗಿರುವುದಿಲ್ಲವೆಂದು ಸಭೆಯಲ್ಲಿ ಅಧಿಕಾರಿಗಳು ತಿಳಿಸಿದರು. ಈ ಕುರಿತು ಕೂಡಲೇ ದುರಸ್ತಿಗೊಳಿಸಲು ಕ್ರಮ ಕೈಗೊಳ್ಳಲು ನಿರ್ದೇಶಿಸಲಾಯಿತು.<br>11) ಶುದ್ಧ ಕುಡಿಯುವ ನೀರಿನ ಘಟಕ ಒಟ್ಟು 83 ಬಾದಿತವಾಗಿದ್ದು, ಅದರಲ್ಲಿ 31 ದುರಸ್ತಿಗೊಳಿಸಲಾಗಿದೆ. 41 ಗ್ರಾಮ ಪಂಚಾಯತಿಯಿಂದ ದುರಸ್ಥಿಗೊಳಿಸಲಾಗಿದೆ. ಇನ್ನೂ ಮೇಜರ್ ರಿಪೇರಿ ಇರುವುದರಿಂದ ಕೆಲವು ಉಳಿದಿರುವ ಬಗ್ಗೆ ಸಭೆಯಲ್ಲಿ ಅಧಿಕಾರಿಗಳು ತಿಳಿಸಿದರು. ಅವುಗಳನ್ನು ಕೂಡಾ ಶೀಘ್ರದಲ್ಲಿ ರಿಪೇರಿ ಕೈಗೊಳ್ಳಲು ನಿರ್ದೇಶಿಸಲಾಯಿತು.<br>12) ಮಹಾತ್ಮಾ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಬೇಡಿಕೆಗೆ ಅನುಗುಣವಾಗಿ ಉದ್ಯೋಗ ಒದಗಿಸಲು ಸೂಚಿಸಿ ಇನ್ನೂ ಪ್ರಗತಿ ಸಾಧಿಸಲು ನಿರ್ದೇಶಿಸಲಾಯಿತು.<br>13) ಶೇ.100 ರಷ್ಟು ಸಕಾಲದಲ್ಲಿ ಕೂಲಿ ಪಾವತಿಸಲು ಸೂಚಿಸಿ ಹಾಗೂ ಕೂಲಿ ಪಾವತಿಸಿದ ಬಗ್ಗೆ ಸಂಬಂಧಿಸಿದ ಅಧಿಕಾರಿಗಳು ಲೆಕ್ಕ ಪತ್ರ ಪರಿಶೀಲಿಸಲು ಸೂಚಿಸಲಾಯಿತು.<br>14) ಜಲಶಕ್ತಿ ಅಭಿಯಾನ ಯೋಜನೆಯಡಿ ನಿಗದಿಪಡಿಸಿದ ಗುರಿಗೆ ಅನುಗುಣವಾಗಿ ಕಾಮಗಾರಿಗಳನ್ನು ಚಾಲನೆ ಮತ್ತು ಮುಕ್ತಾಯಗೊಳಿಸಲು ಸೂಚಿಸಲಾಯಿತು.<br>15) ಜಲಾಮೃತ ಯೋಜನೆಯಡಿ ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪ್ರಸಿದ್ಧ ದೇವಸ್ಥಾನಗಳ ವ್ಯಾಪ್ತಿಯಲ್ಲಿ ಬರುವ ಕಲ್ಯಾಣಿಗಳನ್ನು ಗುರುತಿಸಿ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅನುಷ್ಠಾನಗೊಳಿಸಲು ನಿರ್ದೇಶಿಸಲಾಯಿತು.<br>16) ಜಲಾಮೃತ ಯೋಜನೆಯಡಿ ವನಮಹೋತ್ಸವ ಕಾರ್ಯಕ್ರಮದಡಿ ನೆಡೆಸಿದ ಸಸಿಗಳಿಗೆ ಪಾಲನೆಪೋಷಣೆ ಮಾಡಿ ಸಂರಕ್ಷಿಸಲು ನಿರ್ದೇಶಿಸಲಾಯಿತು.<br>17) 2019-20 ನೇ ಸಾಲಿಗೆ ಜಿಲ್ಲೆಗೆ 10764 ಗುರಿ ಹೊಂದಿದ್ದು, ಇಲ್ಲಿಯವರೆಗೆ 2981 ವೈಯಕ್ತಿಕ ಶೌಚಾಲಯ ಹೊಂದಿದ್ದು, ಬಾಕಿ ಇರುವ 7783 ಕುಟುಂಬಗಳಿಗೆ ಅಕ್ಟೋಬರ್-2019 ಅಂತ್ಯದೊಳಗೆ ಪೂರ್ಣಗೊಳಿಸಲು ಮಾನ್ಯ ಕಾರ್ಯದರ್ಶಿಗಳು ಸಭೆಯಲ್ಲಿ ತಿಳಿಸಿದರು. ಹಾಗೂ ಬೇಸಲೈನ್ ಸಮೀಕ್ಷೆಯಿಂದ ಹೊರಗುಳಿದ ಕುಟುಂಬಗಳಿಗೆ ವೈಯಕ್ತಿಕ ಶೌಚಾಲಯ ಸೌಲಭ್ಯ ನೀಡಿ, ಶೌಚಾಲಯಗಳನ್ನು |

| | | |
|---|---|---|
| | | ಬಳಕೆ ಮಾಡಲು ಗ್ರಾಮೀಣ ಪ್ರದೇಶದ ಅಂಗನವಾಡಿ ಆಶಾ ಕಾರ್ಯಕರ್ತೆಯರು, ಶಾಲಾ ವಿದ್ಯಾರ್ಥಿಗಳು, ಗ್ರಾಮ ಪಂಚಾಯತ ಸದಸ್ಯರು ಮತ್ತು ಪಂಚಾಯತ ಮಟ್ಟದ ಅಧಿಕಾರಿಗಳು / ಸಿಬ್ಬಂದಿಯವರು ನಿರಂತರ ಐಇಸಿ ಕಾರ್ಯಕ್ರಮವನ್ನು ಹಮ್ಮಿಕೊಂಡು ವೈಯಕ್ತಿಕ ಮತ್ತು ಸಮುದಾಯ ಶೌಚಾಲಯಗಳ ಬಳಕೆ, ಸುಸ್ಥಿರತೆ ಕುರಿತು ನಿರಂತರ ಅರಿವು ಮೂಡಿಸಬೇಕೆಂದು ತಿಳಿಸಲಾಯಿತು.<br>18) ಜಿಲ್ಲೆಯಲ್ಲಿ ಘನ ತ್ಯಾಜ್ಯ ನಿರ್ವಹಣೆ ಅನುಷ್ಠಾನಕ್ಕೆ 30 ಗುರಿ ಹೊಂದಿದ್ದು, ಈಗಾಗಲೇ, 15 ಗ್ರಾಮ ಪಂಚಾಯತಗಳ ಡಿಪಿಆರ್ ಅನುಮೋದನೆಯಾಗಿದ್ದು, ಕಾರ್ಯನಿರ್ವಾಹಕ ಅಭಿಯಂತರರು ಪಂಚಾಯತ ರಾಜ್ ಉಪ ವಿಭಾಗ ಬಾಗಲಕೋಟೆರವರಿಂದ ಟೆಂಡರ್ ಪ್ರಕ್ರಿಯೆ ಬೇಗನೆ ಪೂರ್ಣಗೊಳಿಸಿ, ಕಾಮಗಾರಿಗಳನ್ನು ಪ್ರಾರಂಭಿಸಲು ಸಭೆಯಲ್ಲಿ ತಿಳಿಸಿದರು. ಮತ್ತು ಗ್ರಾಮೀಣ ಪ್ರದೇಶದಲ್ಲಿ ತಿಪ್ಪೆಗಳನ್ನು ವೈಜ್ಞಾನಿಕ ರೀತಿಯಲ್ಲಿ ಸಂಸ್ಕರಿಸುವ ಪದ್ಧತಿಯನ್ನು ಅಳವಡಿಸಿಕೊಂಡು ತಿಪ್ಪೆಗಳಿಂದ ಕಾಂಪೋಸ್ಟ್ ಗೊಬ್ಬರವನ್ನಾಗಿ ಪರಿವರ್ತಿಸಿ ರೈತರು ಹೊಲ ತೋಟಗಳಿಗೆ ಬಳಕೆ ಮಾಡುವಂತೆ ಗ್ರಾಮ ಪಂಚಾಯತಗಳಿಗೆ ನಿರ್ದೇಶನ ನೀಡಲು ಸಭೆಯಲ್ಲಿ ನಿರ್ದೇಶಿಸಲಾಯಿತು.<br>19) ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ವಾಜಪೇಯಿ ನಗರ ವಸತಿ & ಡಾ॥ ಬಿ.ಆರ್.ಅಂಬೇಡ್ಕರ್ ನಗರ ವಸತಿಯೊಜನೆಯಡಿಯಲ್ಲಿ ಆನ್‌ಲೈನ್ ಬೇಡಿಕೆ ಸಮೀಕ್ಷೆಯಾದಾರವಾಗಿ ಬಿ.ಎಲ್.ಸಿ./ಬಿ.ಎಲ್.ಇ/ಎ.ಎಚ್.ಪಿ & ಸಿ.ಎಲ್.ಎಸ್.ಎಸ್. ಘಟಕಾಂಶಗಳಡಿ ಪ್ರಗತಿ ಸಾಧಿಸಲು ಸೂಚಿಸಲಾಯಿತು.<br>20) ಕೇಂದ್ರ ಸರ್ಕಾರದ ರೂ, 1.50 ಲಕ್ಷಗಳ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಅರ್ಹ ಫಲಾನುಭವಿಗಳಿಗೆ ಸಹಾಯಧನ ಪಡೆದುಕೊಳ್ಳಲು ಸೂಚಿಸಿದರು. ಅದರಂತೆ ಲಭ್ಯವಿದ್ದ ಸರ್ಕಾರಿ / ಖಾಸಗಿ ಜಮೀನುಗಳನ್ನು ಗುರುತಿಸಿ ಬೇಡಿಕೆಗೆ ಅನುಗುಣವಾಗಿ ಅನುಷ್ಠಾನಗೊಳಿಸಲು ಸೂಚಿಸಲಾಯಿತು.<br>21) ನಗರೋತ್ಥಾನ ಹಂತ-3ರ ಯೋಜನೆಯಡಿ ಇನ್ನೂ ಪ್ರಾರಂಭಿಸದೇ ಇರುವ ಕಾಮಗಾರಿಗಳನ್ನು ಬೇಗನೇ ಪ್ರಾರಂಭಿಸಲು ಹಾಗೂ ಸ್ಥಳ ಬದಲಾವಣೆ ಇದ್ದಲ್ಲಿ 15 ದಿನಗಳೊಳಗಾಗಿ ಬದಲಿ ಕ್ರಿಯಾ ಯೋಜನೆಗೆ ಅನುಮೋದನೆ ಪಡೆದುಕೊಂಡು ಅಗತ್ಯ ಕ್ರಮ ವಹಿಸಲು ಸೂಚಿಸಿದರು.<br>22) 14ನೇ ಹಣಕಾಸು ಹಾಗೂ ಎಸ್.ಎಫ್.ಸಿ ಯೋಜನೆಯಡಿ ಇನ್ನೂ ಪ್ರಾರಂಭಿಸದೇ ಇರುವ ಕಾಮಗಾರಿಗಳನ್ನು ಬೇಗನೇ ಪ್ರಾರಂಭಿಸಿ ನಿಗಧಿತ ಅವಧಿಯೊಳಗೆ ಆರ್ಥಿಕ ಹಾಗೂ ಭೌತಿಕ ಪ್ರಗತಿಯನ್ನು ಸಾಧಿಸಲು ಸೂಚಿಸಲಾಯಿತು.<br>23) ರಾಷ್ಟ್ರೀಯ ಹಸಿರು ನ್ಯಾಯಾಧೀಕರಣದ ನಿರ್ದೇಶನದಂತೆ |

| | | |
|---|---|---|
| | | ಜಿಲ್ಲೆಯ 15 ಸ್ಥಳೀಯ ಸಂಸ್ಥೆಗಳ ಎಲ್ಲ ವಾರ್ಡ್‌ಗಳಲ್ಲಿ ಮೂಲದಲ್ಲಿಯೇ ಕಸ ವಿಂಗಡಣೆ ಹಾಗೂ ಮನೆ ಮನೆ ಕಸ ಸಂಗ್ರಹವನ್ನು ಕಡ್ಡಾಯವಾಗಿ ಮಾಡಲು ಸೂಚಿಸಿ ಶೇಖರಣೆ ಮಾಡದೇ ಇರುವುದು ಕಂಡು ಬಂದಲ್ಲಿ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.<br>24) ಸ್ವಚ್ಛ ಭಾರತ ಯೋಜನೆಯಡಿ ವೈಯಕ್ತಿಕ ಶೌಚಾಲಯದಲ್ಲಿ ಬಾಕಿ ಇರುವ ಶೌಚಾಲಯಗಳನ್ನು ನಿರ್ಮಾಣ ಮಾಡಲು ಕ್ರಮ ವಹಿಸಲು ಸೂಚಿಸಿ, ಸಮುದಾಯ ಶೌಚಾಲಯಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಸಾರ್ವಜನಿಕರಿಗೆ ಉಪಯೋಗಿಸಲು, ಅನುಕೂಲ ಮಾಡಲು ನಿರ್ದೇಶಿಸಲಾಯಿತು.<br>25) ಬಾಗಲಕೋಟೆ ಜಿಲ್ಲೆಯಲ್ಲಿ ಪೋಡಿ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಕರಣಗಳು ಬಾಕಿ ಇರದಂತೆ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.<br>26) ಮಾತೃ ವಂದನಾ ಯೋಜನೆಯಡಿ ಆನ್‌ಲೈನ್‌ನಲ್ಲಿ ಸ್ವೀಕೃತವಾದ ಅರ್ಜಿಗಳಿಗೆ ಕೂಡಲೇ ಸಹಾಯಧನ ವಿತರಿಸುವುದು ಹಾಗೂ ಫಲಾನುಭವಿಗಳ ಖಾತೆಗಳಿಗೆ ಜಮೆ ಆದ ಬಗ್ಗೆ ಪರಿಶೀಲಿಸುವುದು. ಮಾತೃ ವಂದನಾ ಯೋಜನೆಯಡಿ, ನೂರಕ್ಕೆ ನೂರರಷ್ಟು ಫಲಾನುಭವಿಗಳಿಗೆ ಯೋಜನೆ ಸೌಲಭ್ಯ ಒದಗಿಸಲು ನಿರ್ದೇಶಿಸಲಾಯಿತು.<br>27) ಮಾತೃಶ್ರೀ ಯೋಜನೆಯಡಿ ಆನ್‌ಲೈನ್‌ನಲ್ಲಿ ಸ್ವೀಕೃತವಾದ ಅರ್ಜಿಗಳಿಗೆ ಕೂಡಲೇ ಸಹಾಯಧನ ವಿತರಿಸುವುದು ಹಾಗೂ ಫಲಾನುಭವಿಗಳ ಖಾತೆಗಳಿಗೆ ಜಮೆ ಆದ ಬಗ್ಗೆ ಪರಿಶೀಲಿಸಲು ಸೂಚಿಸಲಾಯಿತು.<br>28) ಶಿಶು ಮರಣ ಸಂಭವಿಸದಂತೆ ಕ್ರಮ ಕೈಗೊಳ್ಳಲು ಆರೋಗ್ಯ ಇಲಾಖೆಗೆ ನಿರ್ದೇಶಿಸಲಾಯಿತು.<br>29) ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಸ್ವಸಹಾಯ ಅಭಿಯಾನ ಗುಂಪುಗಳಿಗೆ ಸಂಬಂಧಿಸಿದಂತೆ ಗ್ರಾಮೀಣ ಭಾಗದಲ್ಲಿ ಈ ಕುರಿತು ಜನರಿಗೆ ಅರಿವು ಮೂಡಿಸಲು ಸೂಚಿಸಲಾಯಿತು.<br>30) ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಸ್ವಸಹಾಯ ಅಭಿಯಾನ ಗುಂಪುಗಳಿಗೆ ಸಂಬಂಧಿಸಿದ ಅಧಿಕಾರಿಗಳು ಜಿಲ್ಲೆಯಲ್ಲಿ ಎಷ್ಟು ಸ್ವಸಹಾಯ ಗುಂಪುಗಳಿವೆ? ಹಾಗೂ ಎಷ್ಟು ಜನರಿಗೆ ಸಾಲ ನೀಡಲಾಗಿದೆ? ಯಾವ ಉದ್ದೇಶಕ್ಕೆ ಸಾಲ ನೀಡಲಾಗಿದೆ? ಎಷ್ಟು ಮರು ಪಾವತಿಯಾಗಿದೆ? ಈ ಕುರಿತು ಪರಿಶೀಲಿಸಲು ಸೂಚಿಸಲಾಯಿತು.<br>31) 2019-20 ನೇ ಸಾಲಿಗೆ 181 ಅಭ್ಯರ್ಥಿಗಳಿಗೆ ಕೌಶಲ್ಯ ತರಬೇತಿ ನೀಡುವ ಗುರಿ ನಿಗದಿಪಡಿಸಲಾಗಿದ್ದು, ಪ್ರಸ್ತುತ 89 ಅಭ್ಯರ್ಥಿಗಳಿಗೆ ತರಬೇತಿ ಪ್ರಾರಂಭಿಸಿ, 7 ಅಭ್ಯರ್ಥಿಗಳ ತರಬೇತಿ ಪೂರ್ಣಗೊಳಿಸಲಾಗಿದೆ. ಪ್ರಸಕ್ತ ಸಾಲಿನಡಿ ಇದುವರೆಗೆ ತರಬೇತಿ ಆಯೋಜಿಸಿದ ಫಲಾನುಭವಿಗಳ ಸಂಖ್ಯೆ ಕಡಿಮೆ ಇರುವ ಬಗ್ಗೆ ಮಾನ್ಯ ಜಿಲ್ಲಾ ನೋಡಲ್ |

ಕಾರ್ಯದರ್ಶಿಗಳು ಪ್ರಸ್ತಾಪಿಸಿದರು. ಈ ಕುರಿತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ ಬಾಗಲಕೋಟೆರವರು ಸರ್ಕಾರದಿಂದ ಜಿಲ್ಲೆಗೆ ಅಗಸ್ಟ್-2019ರವರೆಗೆ ತರಬೇತಿ ಸಂಸ್ಥೆ ಸ್ಥಾಪನೆಯಾಗಿರುವುದಿಲ್ಲ. ಸೆಪ್ಟೆಂಬರ್-2019 ರ ತಿಂಗಳಲ್ಲಿ ಒಂದು ತರಬೇತಿ ಸಂಸ್ಥೆಯನ್ನು ಜಿಲ್ಲೆಯಲ್ಲಿ ಸ್ಥಾಪಿಸಲಾಗಿದೆ. ಪ್ರಸ್ತುತ 70 ಅಭ್ಯರ್ಥಿಗಳ ಎರಡು ಬ್ಯಾಚ್ ತರಬೇತಿಯನ್ನು ಪ್ರಾರಂಭಿಸಲಾಗಿದೆ. ವಾರ್ಷಿಕ ಗುರಿಯನ್ವಯ ಮಾರ್ಚ್-2020 ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದೆಂದು ಸಭೆಯಲ್ಲಿ ಸೂಚಿಸಲಾಯಿತು.

32) ಸುತ್ತುನಿಧಿ ಪಡೆದುಕೊಳ್ಳುತ್ತಿರುವ ಸ್ವ-ಸಹಾಯ ಗುಂಪುಗಳ ಉಳಿತಾಯ, ಸುತ್ತುನಿಧಿ ಕೊಟ್ಟ ನಂತರ ಸಂಘದ ಸದಸ್ಯರು ಯಾವ ಉದ್ದೇಶಕ್ಕೆ ಸಾಲ ಪಡೆದುಕೊಳ್ಳುತ್ತಾರೆ ಎಂಬುದರ ಕುರಿತು, ಸಭೆಯಲ್ಲಿ ಸಂಬಂಧಿಸಿದ ಅಧಿಕಾರಿಗಳಿಗೆ ಜಿಲ್ಲೆಯಲ್ಲಿ ಎಷ್ಟು ಸ್ವಸಹಾಯ ಗುಂಪುಗಳಿವೆ? ಹಾಗೂ ಎಷ್ಟು ಜನರಿಗೆ ಸಾಲ ನೀಡಲಾಗಿದೆ? ಯಾವ ಉದ್ದೇಶಕ್ಕೆ ಸಾಲ ನೀಡಲಾಗಿದೆ? ಎಷ್ಟು ಮರು ಪಾವತಿಯಾಗಿದೆ? ಈ ಕುರಿತು ಪರಿಶೀಲಿಸಲು ಸೂಚಿಸಲಾಯಿತು.

33) ಬಾಗಲಕೋಟೆ ಜಿಲ್ಲೆಯಲ್ಲಿ ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಸೃಷ್ಟಿಸಲು ಎಷ್ಟು ನಿರುದ್ಯೋಗಿಗಳು ಇರುತ್ತಾರೆ ಎಂಬ ಬಗ್ಗೆ ಪಟ್ಟಿ ಮಾಡಿ ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಸಲು ಸೂಚಿಸಲಾಯಿತು.

34) ಬಾಗಲಕೋಟೆ ಜಿಲ್ಲೆಯಲ್ಲಿ ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಸೃಷ್ಟಿಸಲು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಜಿಲ್ಲೆಯಲ್ಲಿರುವ ಎಲ್ಲ ಕಾರ್ಖಾನೆಯವರೊಂದಿಗೆ ಸಭೆ ಜರುಗಿಸಿ ಅವರಿಗೆ ಬೇಕಾಗುವ ರೀತಿಯಲ್ಲಿ ಕಾರ್ಖಾನೆಯವರ ಜಂಟಿ ನೇತೃತ್ವದಲ್ಲಿ ನಿರುದ್ಯೋಗಿಗಳಿಗೆ ತರಬೇತಿ ನೀಡಿ ಉದ್ಯೋಗ ಸೃಜನೆಗೆ ಅನುವು ಮಾಡಿಕೊಡುವಂತೆ ಕ್ರಮ ಕೈಕೊಳ್ಳಲು ಸೂಚಿಸಲಾಯಿತು.

35) ಅರಣ್ಯ ಹಕ್ಕುಗಳ ಮಾನ್ಯತೆ ಕುರಿತು ನಿಜವಾದ ಅರಣ್ಯವಾಸಿಗಳನ್ನು ಗುರ್ತಿಸಿ, ಅಗತ್ಯ ಮಾಹಿತಿಗಳನ್ನು ಹಾಗೂ ಸರಿಯಾದ ದಾಖಲಾತಿಗಳನ್ನು ಪಡೆದು ಅರ್ಹ ಅರಣ್ಯವಾಸಿಗಳಿಗೆ ಜಮೀನು ಮಂಜೂರಿಸುವ ಕುರಿತು ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

36) ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ / ಡಾ॥ ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಭೂಒಡೆತನ ಯೋಜನೆಯಡಿ ಭೂರಹಿತ ಕುಟುಂಬಗಳ ಪಟ್ಟಿಯನ್ನು ಸಂಬಂಧಿಸಿದ ಇಲಾಖೆಯಿಂದ ಪಡೆದು ಅತೀ ಕಡುಬಡವರಿಗೆ ಆದ್ಯತೆಯ ಮೇರೆಗೆ ಸೌಲಭ್ಯ ಕಲ್ಪಿಸಲು ಕ್ರಮ ಕೈಕೊಳ್ಳಲು ಸೂಚಿಸಲಾಯಿತು.

37) ಬಾಗಲಕೋಟೆ ಜಿಲ್ಲೆಯಲ್ಲಿ ವಕ್ಫ್ ಆಸ್ತಿಗಳಿಗೆ ಸಂಬಂಧಿಸಿದಂತೆ ಯಾದಿ ಮಾಡಿ ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಸಲು

ಸೂಚಿಸಲಾಯಿತು.

38) ಬಾಗಲಕೋಟೆ ಜಿಲ್ಲೆಯಲ್ಲಿ ವಕ್ಫ್ ಆಸ್ತಿಗಳಿಗೆ ಸಂಬಂಧಿಸಿದಂತೆ ಪಹಣಿಯಲ್ಲಿ ಅಥವಾ ಉತಾರೆಯಲ್ಲಿ ಖಾಸಗಿ ಮಾಲಿಕತ್ವ ಹೆಸರುಗಳು ಇದ್ದಲ್ಲಿ, ವಕ್ಫ್ ಆಸ್ತಿಗೆ ಹೆಸರಿಸಲು ಕ್ರಮ ಕೈಗೊಳ್ಳಲು ಹಾಗೂ ಈ ಕುರಿತು ತಾಲೂಕಾವಾರು ಪಟ್ಟಿ ಮಾಡಿ ಅಗತ್ಯ ದಾಖಲಾತಿಗಳನ್ನು ಲಗತ್ತಿಸಿ, ತಾಲೂಕಾ ತಹಶೀಲದಾರರಿಗೆ ಪತ್ರ ಬರೆಯಲು ಸೂಚಿಸಲಾಯಿತು.

39) ಪ್ರಧಾನಮಂತ್ರಿ ಆವಾಸ್ ಯೋಜನೆ (ಗ್ರಾಮೀಣ) ಗಳಡಿ SECC Data ದಲ್ಲಿ ಅರ್ಹ / ಅನರ್ಹ ಪಟ್ಟಿ ಪರಿಶೀಲಿಸಿ ಅನರ್ಹರನ್ನು ಪಟ್ಟಿಯಿಂದ ಕೈ ಬಿಟ್ಟು ಅರ್ಹ ಫಲಾನುಭವಿಗಳನ್ನು ಪ್ರಸಕ್ತ ಸಾಲಿನ 1814 ಗುರಿಗೆ ಆಯ್ಕೆ ಮಾಡಲು ನಿರ್ದೇಶಿಸಿದರು.

40) 2017-18 ನೇ ಸಾಲಿನ ದೇವರಾಜ ಅರಸು ವಸತಿ ಯೋಜನೆಯಡಿ 371 ಫಲಾನುಭವಿಗಳ ಆಯ್ಕೆ ಬಾಕಿ ಇದ್ದು, ಸದ್ಯ ಜಿಲ್ಲಾ ಪಂಚಾಯತಿ ಕಛೇರಿಗೆ ವಿವಿಧ ಇಲಾಖೆಯ 98 ಫಲಾನುಭವಿಗಳ ಅರ್ಜಿಗಳು ಬಂದಿದ್ದು, ಇನ್ನುಳಿದ 273 ಬಾಕಿ ಇರುವ ಗುರಿಯನ್ನು ವಿವಿಧ ಇಲಾಖೆಗಳಿಂದ ಅರ್ಹ ಅರ್ಜಿಗಳನ್ನು ಸ್ವೀಕರಿಸಿ, ಜಿಲ್ಲಾಧಿಕಾರಿಗಳಿಂದ ಸದರಿ ಪ್ರಸ್ತಾವನೆಗೆ ಅನುಮೋದನೆಯನ್ನು ಪಡೆದು, ನಿಗಮಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ, ಅನುಮೋದನೆ ಪಡೆದುಕೊಳ್ಳಲು ಸೂಚಿಸಲಾಯಿತು.

41) ಜಿಲ್ಲೆಯಲ್ಲಿ ಒಟ್ಟು 30417 ನಿವೇಶನ ರಹಿತ ಫಲಾನುಭವಿಗಳಿದ್ದು, ಈ ಫಲಾನುಭವಿಗಳಿಗೆ ಜಿಲ್ಲೆಯಲ್ಲಿ ಲಭ್ಯವಿದ್ದ ಸರ್ಕಾರಿ ಜಮೀನು ಗುರುತಿಸುವಂತೆ ಹಾಗೂ ಸರ್ಕಾರಿ ಜಮೀನು ಲಭ್ಯವಿಲ್ಲದಿದ್ದಲ್ಲಿ ಖಾಸಗಿ ಜಮೀನು ಖರೀದಿಸಲು ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ನಿರ್ದೇಶನ ನೀಡಲಾಯಿತು.

**ದಿನಾಂಕ: 03-10-2019 ರಂದು ಸ್ಥಳ ಪರಿಶೀಲನಾ ವಿವರ ಹಾಗೂ ನೀಡಿದ ಸೂಚನೆಗಳು:-**

42) ಬಾದಾಮಿ ತಾಲೂಕ ಗೋವಣಕಿ ಗ್ರಾಮದಲ್ಲಿ ಪ್ರವಾಹದಿಂದ ಮರಳು ಶೇಖರಣೆಯಾಗಿದ್ದು, ಸದರಿ ಮರಳನ್ನು ನೆರೆ ಸಂತ್ರಸ್ಥರ ಮನೆಗಳ ನಿರ್ಮಾಣಕ್ಕಾಗಿ ಲೋಕೋಪಯೋಗಿ ಇಲಾಖೆ ಮೂಲಕ ಒದಗಿಸಲು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳಿಗೆ ಸೂಚಿಸಲಾಯಿತು.

43) ಬಾದಾಮಿ ತಾಲೂಕ ಜಿ.ಎನ್.ಜಾಲಿಹಾಳ ಗ್ರಾಮದಲ್ಲಿ ರಿ.ಸ.ನಂ:23 ಕ್ಷೇತ್ರ 6-10 ಎ/ಗುಂ ಸೂರ್ಯಕಾಂತಿ ಹಾಗೂ ರಿ.ಸ.ನಂ:2-00 ಎ/ಗುಂ ಕಬ್ಬು ಬೆಳೆಗಳು ಹಾನಿಯಾಗಿದ್ದು ಸದರಿ ಹಾನಿಗೆ ಕೂಡಲೇ ಪರಿಹಾರ ವಿತರಿಸಲು ಕೃಷಿ ಮತ್ತು ತೋಟಗಾರಿಕೆ ಇಲಾಖೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಯಿತು. ಕೆಲವೊಂದು ರೈತರು ತುರ್ತು ಪರಿಹಾರ ಹಣ ವಿತರಣೆ ಆಗಿರುವುದಿಲ್ಲ ಎಂದು

ತಿಳಿಸಿದಾಗ ಈ ಕುರಿತು ಪುನಃ ಪರಿಶೀಲನೆ ಮಾಡಲು ತಹಶೀಲದಾರ ಬಾದಾಮಿ ಇವರಿಗೆ ನಿರ್ದೇಶನ ನೀಡಲಾಯಿತು.

44) ಬಾದಾಮಿ ತಾಲೂಕ ಪಟ್ಟದಕಲ್ ಗ್ರಾಮದಲ್ಲಿ "ಎ" ಕೆಟಗರಿಯಲ್ಲಿ ಸೇರಬೇಕಾದ ಮನೆಗಳು "ಬಿ" ಮತ್ತು "ಸಿ" ಕೆಟಗರಿಯಲ್ಲಿ ಸೇರಿದ್ದು ಅವುಗಳನ್ನು ಪುನಃ ಪರಿಶೀಲನೆ ಮಾಡಲು ಜಂಟಿ ಸಮೀಕ್ಷಾ ತಂಡಗಳಿಗೆ ಸೂಚಿಸಲಾಯಿತು. ಸದರಿ ಗ್ರಾಮವು ಮಲಪ್ರಭಾ ನದಿ ವ್ಯಾಪ್ತಿಯಲ್ಲಿ ಇರುವುದರಿಂದ ಪ್ರವಾಹ ಬಂದಾಗ ಗ್ರಾಮವು ಸಂಪೂರ್ಣ ಜಲಾವೃತವಾಗುವ ಕಾರಣ ಕೂಡಲೇ ಸರಕಾರಿ ಜಾಗವನ್ನು ಗುರುತಿಸಿ ಸ್ಥಳಾಂತರಗೊಳಿಸಲು ಉಪವಿಭಾಗಾಧಿಕಾರಿಗಳು ಬಾಗಲಕೋಟೆ ಇವರಿಗೆ ಸೂಚಿಸಲಾಯಿತು.

45) ಬಾದಾಮಿ ತಾಲೂಕ ಪಟ್ಟದಕಲ್ ಗ್ರಾಮದಲ್ಲಿ ನಿರ್ಮಿಸಲಾದ ಶೆಡ್‌ಗಳಲ್ಲಿ ವಿದ್ಯುತ್ ಸಂಪರ್ಕ ಒದಗಿಸಲು ಹೆಸ್ಕಾಂ ಅಧಿಕಾರಿಗಳಿಗೆ ಸೂಚಿಸಲಾಯಿತು.

**ಸರ್ಕಾರದ ಹಂತದಲ್ಲಿ ಸಮನ್ವಯ ಸಾಧಿಸಬೇಕಾದ ವಿಷಯಗಳು**

46) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಮಾತನಾಡಿ, ಜಿಲ್ಲೆಯಲ್ಲಿ 10 ವರ್ಷಗಳ ಹಿಂದೆ ದೇವದಾಸಿಯರು ಕಟ್ಟಿಸಿಕೊಂಡಂತಹ ಮನೆಗಳು ಸದ್ಯದ ಪರಿಸ್ಥಿತಿಯಲ್ಲಿ ವಾಸಿಸಲು ಯೋಗ್ಯವಿಲ್ಲದ (ದುರಸ್ಥಿ) ಹಂತದಲ್ಲಿ ಇರುವದರಿಂದ, ಸದರಿಯವರಿಗೆ ಪುನಃ ಮನೆಯನ್ನು ಕಟ್ಟಲು ಅವಕಾಶ ಕಲ್ಪಿಸಿಕೊಡುವಂತೆ ಸಭೆಯಲ್ಲಿ ಪ್ರಸ್ತಾಪಿಸಿದರು. ಸರ್ಕಾರದ ಮಟ್ಟದಲ್ಲಿ ಚರ್ಚೆಮಾಡಿ ಪರಿಹಾರ ಮಾಡಲಾಗುವುದು ಎಂದು ಸಭೆಯಲ್ಲಿ ತಿಳಿಸಲಾಯಿತು.

47) ಸಮಾಜ ಕಲ್ಯಾಣ/ಹಿಂದುಳಿದ ವರ್ಗಗಳ ಕಲ್ಯಾಣ/ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ನಿವೇಶನಗಳ ಕುರಿತು ಪರಿಶೀಲಿಸಲಾಯಿತು ಸರ್ಕಾರದ ಮಟ್ಟಕ್ಕೆ ಕಳುಹಿಸಿರುವ ಪ್ರಸ್ತಾವನೆಗಳ ವಿವರಗಳನ್ನು ಇ-ಮೇಲ್ ಮುಖಾಂತರ ಕಳುಹಿಸಿಕೊಡಲು ಸೂಚಿಸಿದರು. ಸರ್ಕಾರದ ಮಟ್ಟದಲ್ಲಿ ಚರ್ಚೆಮಾಡಿ ಪರಿಹಾರ ಮಾಡಲಾಗುವುದು ಎಂದು ಸಭೆಯಲ್ಲಿ ತಿಳಿಸಲಾಯಿತು.

(ಮನೋಜ್ ಕುಮಾರ್ ಮೀನಾ)
ಸರ್ಕಾರದ ಕಾರ್ಯದರ್ಶಿ,
ವಸತಿ ಇಲಾಖೆ ಹಾಗೂ
ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

## ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಿಂದ ಸೆಪ್ಟಂಬರ–2019 ತಿಂಗಳ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಸಲ್ಲಿಸಬೇಕಾದ ನಮೂನೆ.

| ಕ್ರ.ಸಂ | ಅಂಶಗಳು | ಕಾರ್ಯದರ್ಶಿಗಳ ಷರಾ | |
|---|---|---|---|
| 1 | ಜಿಲ್ಲೆಯ ಹೆಸರು | ರಾಯಚೂರು | |
| 2 | ಉಸ್ತುವಾರಿ ಕಾರ್ಯದರ್ಶಿಯ ಹೆಸರು | ಜಿ. ಕುಮಾರ ನಾಯಕ ಭಾ.ಆ.ಸೇ | |
| 3 | ಭೇಟಿಯಾದ/ಪ್ರವಾಸದ ದಿನಾಂಕ | **27-09-2019** | |
| | | ಗಮನಿಸಿದ ಅಂಶಗಳು | ಸಲಹೆಗಳು |
| 4 | ಮುಖ್ಯವಾಗಿ ಗಮನಿಸಿದ ಅಂಶಗಳು ಹಾಗೂ ಸಲಹೆಗಳು | 1) ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ ಕುರಿತು. | 1) 2018-19 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ 51,960 ರೈತರಿಗೆ ರೂ.13195.41 ಲಕ್ಷಗಳು ಪ್ರದಾನ ಮಂತ್ರಿ ಫಸಲ್ ಭೀಮಾ ಯೋಜನೆ ಮೂಲಕ ಪಡೆದುಕೊಂಡಿರುತ್ತಾರೆ. ಇದು ಜಿಲ್ಲೆಯ ಉತ್ತಮ ಸಾಧನೆ. ಇದೇ ಮಾದರಿಯಾಗಿಟ್ಟುಕಂಡು , ಜಿಲ್ಲೆಯ ಎಲ್ಲಾ ಅಧಿಕಾರಿಗಳು ರೈತರಿಗೆ ಮನವರಿಕೆ ಮಾಡಿ, ಹೆಚ್ಚು ಹೆಚ್ಚಾಗಿ ರೈತರನ್ನು ಸದರಿ ಯೊಜನೆ ಉಪಯೋಗ ಪಡೆದುಕೊಳ್ಳುವಂತೆ ಸಲಹೆಯನ್ನು ನೀಡಲಾಯಿತು. |
| | | 2) ಕುಡಿಯುವ ನೀರು ಸರಬರಾಜು ಯೋಜನೆ ಕುರಿತು. | 2) ರಾಯಚೂರು ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ಸಂಬಂಧಿಸಿದಂತೆ ಹೋಸದಾಗಿ ಕೊರೆಸಲಾದ ಬೋರ್‌ವೆಲ್ ಗಳು ಜಿಲ್ಲೆಯ 214 ಬೋರ್‌ವೆಲ್ ಪೈಕಿ ಅರ್ಧದಷ್ಟು ದೇವದುರ್ಗ ತಾಲೂಕಿನಲ್ಲಿ ಅಂದರೆ, 123 ಕೈ ಪಂಪುಗಳನ್ನು ಬಳಸಿಕೊಂಡು ನೀರು ಸರಬರಾಜು ಮಾಡಲಾಗುತ್ತಿದೆ. ಉಳಿದ ತಾಲೂಕಿನಲ್ಲಿ ಕಡಿಮೆ ಇರುತ್ತದೆ. ಇದರ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ಇವರು ಸದರಿ ಸಮಸ್ಯೆ ಕುರಿತು ಗಮನಹರಿಸಿ, ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕೆಂದು ಸಲಹೆಯನ್ನು ನೀಡಲಾಯಿತು. ಹಾಗೂ ಜಿಲ್ಲೆಯಲ್ಲಿ 112 ಗ್ರಾಮಗಲಲ್ಲಿ 132 ಖಾಸಗಿ ಕೊಳವೆ ಬಾವಿಗಳ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗಿತ್ತಿದ್ದು, ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಸಂಬಂಧಿಸಿದ ಅಧಿಕಾರಿಗಳು ಗಂಭೀರತೆಯನ್ನು ತಿಳಿದುಕೊಳ್ಳಲು ಖುದ್ದು ಗ್ರಾಮಗಳಿಗೆ ಭೇಟಿ ಸಮಸ್ಯೆ ಕುರಿತು ವಾಸ್ತವತೆಯನ್ನು ಅಧ್ಯಯನ ಮಾಡಿಕೊಂಡು ಸಾರ್ವಜನಿಕರಿಗೆ ಕುಡಿಯುವ ನೀರನ್ನು ಸರಬರಾಜು ಮಾಡಬೇಕೆಂದು ಸಲಹೆಯನ್ನು ನೀಲಾಯಿತು. |

| | | | |
|---|---|---|---|
| | | 3) ಹಾಲು ಉತ್ಪಾದನೆ ಮೂಲಕ ಹೈನುಗಾರಿಕೆ ಉತ್ತೇಜನೆ ಮಾಡುವ ಕುರಿತು. | 3) ಕೋಲಾರ ಮಂಡ್ಯ ಮತ್ತು ಹಾಸನ ಇತರೆ ಜಿಲ್ಲೆಗಳಲ್ಲಿ ಹೈನುಗಾರಿಕೆಯಿಂದ ಹಾಲು ಉತ್ಪಾದನೆ ಹೆಚ್ಚಿಸಿಕೊಂಡು ರೈತರ ಆದಾಯವನ್ನು ಮೂಲಕ ಆರ್ಥಿಕವಾಗಿ ಅಭಿವೃದ್ಧಿ ಹೊಂದುತ್ತಿದ್ದು, ಅದೇ ಮಾದರಿಯಾಗಿ ಹಾಲು ಉತ್ಪಾದನೆ ಹೆಚ್ಚಿಸಲು ಪಶು ಸಂಗೋಪನೆ ಇಲಾಖೆಯಿಂದ ಗುರಿ ನಿಗದಿಪಡಿಸಿಕೊಳ್ಳಬೇಕು. ಹಾಲಿಗೆ ಸರ್ಕಾರ ನಿಗದಿ ಪಡಿಸಿದ ಸಬ್ಸಿಡಿಯೊಂದಿಗೆ , ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆ ಮೂಲಕ ದನದ ಕೊಟ್ಟಿಗೆ ನಿರ್ಮಾಣದ ಉಪಯೋಗ ಪಡೆದುಕೊಂಡು ಸೂಕ್ತ ಚಟುವಟಿಕೆಗಳನ್ನು ಹಮ್ಮಿಕೊಳ್ಳವುದು. ಹೈನುಗಾರಿಕೆಗೆ ಉತ್ತೇಜನ ನೀಡಲು ಜಿಲ್ಲೆಯಲ್ಲಿ ಪ್ರಯೋಗಿಕವಾಗಿ ಪ್ರತಿ ತಾಲೂಕಿನಲ್ಲಿ 5 ಮಾದರಿ ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು ಹೈನುಗಾರಿಕೆ ಮೂಲಕ ರೈತರ ಆದಾಯವನ್ನು ಹೆಚ್ಚಿಸುವ ಯೋಜನೆಯನ್ನು ರೂಪಿಸಬೇಕೆಂದು ಉಪ ನಿರ್ದೇಶಕರು ಪಶು ಸಂಗೋಪನಾ ಅಧಿಕಾರಿಗಳು ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳೊಂದಿಗೆ ಚರ್ಚಿಸಿ, ಕ್ರಮಕೈಗೊಳ್ಳಬೇಕೆಂದು ಸಲಹೆಯನ್ನು ನೀಡಲಾಯಿತು. |

(ಜಿ. ಕುಮಾರ ನಾಯಕ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ
ಹಾಗೂ ಉಸ್ತುವಾರಿ ಕಾರ್ಯದರ್ಶಿ ರಾಯಚೂರು ಜಿಲ್ಲೆ.

ದಿನಾಂಕ 27-09-2019 ರಂದು ರಾಯಚೂರು ಜಿಲ್ಲಾಧಿಕಾರಿಗಳ ಕಾರ್ಯಾಲಯದ ಸಭಾಂಗಣದಲ್ಲಿ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ರಾಯಚೂರು ಜಿಲ್ಲೆ. ಇವರ ಅಧ್ಯಕ್ಷತೆಯಲ್ಲಿ ಜರುಗಿದ "ರಾಯಚೂರು ಜಿಲ್ಲೆಯ ಪ್ರಗತಿ ಪರಿಶೀಲನೆ" ಕುರಿತು ಜಿಲ್ಲಾಧಿಕಾರಿಗಳು ಹಾಗೂ ಸಂಬಂಧಪಟ್ಟ ಇತರೆ ಇಲಾಖೆಗಳ ಎಲ್ಲಾ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಡುವಳಿ.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು :- ಹಾಜರಿ ಪುಸ್ತಕದಲ್ಲಿದ್ದಂತೆ.**

ಪ್ರಾರಂಭದಲ್ಲಿ ಸಹಾಯಕ ಆಯುಕ್ತರು ರಾಯಚೂರು ಸಭೆಗೆ ಆಗಮಿಸಿದ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ರಾಯಚೂರು ಜಿಲ್ಲೆ, ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿ.ಪಂ ರಾಯಚೂರು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸ್ವಾಗತಿಸಿದರು. ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡು ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ರಾಯಚೂರು ಜಿಲ್ಲೆ ಇವರನ್ನು ಕೋರಿದರು.

ಸಭೆಯನ್ನುದ್ದೇಶಿಸಿ, ಸರ್ಕಾರವು 2019-20 ನೇ ಸಾಲಿನಲ್ಲಿ ಉಂಟಾದ ಪ್ರವಾಹ ಹಾಗೂ ಮುಂಗಾರು ಮಳೆ ಕೊರತೆಯಿಂದ ಬರಗಾಲ ಪರಿಸ್ಥಿತಿಯನ್ನು ನಿಭಾಯಿಸಲು ಜಿಲ್ಲೆಯಲ್ಲಿ ಜಾನುವಾರುಗಳಿಗೆ ಮೇವಿನ ಸಂಗ್ರಹಣೆ, ಜನ-ಸಾಮಾನ್ಯರಿಗೆ ಕುಡಿಯುವ ನೀರು ಪೂರೈಕೆ, ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅನುಷ್ಠಾನ ಹಾಗೂ ರೈತರ ಯೋಜನೆಗಳ ಪ್ರಗತಿ ಕುರಿತು ಚರ್ಚಿಸಲು ಈ ಸಭೆಯನ್ನು ಆಯೋಜಿಸಲಾಗಿದೆಯೆಂದು ತಿಳಿಸಲಾಯಿತು.

**ವಿಷಯ:-1. ಮಳೆ ಪ್ರಮಾಣ ವರದಿ:-**

ಜಂಟಿ ಕೃಷಿ ನಿದೇಶಕರು ಸಭೆಯಲ್ಲಿ ಮಳೆಯ ಪ್ರಮಾಣ ವಿವರಿಸುತ್ತಾ, 2019-20 ನೇ ಸಾಲಿನ ಜಿಲ್ಲೆಯ ಮುಂಗಾರು ಹಂಗಾಮಿನ ಅವಧಿಯಲ್ಲಿ ಶೇ.18 ರಷ್ಟು ಮಳೆಯ ಕೊರತೆಯಾಗಿದ್ದು, ಅಗಷ್ಟನಲ್ಲಿ ಶೇ.57 ರಷ್ಟು ಮಳೆ ಕೊರತೆಯಿಂದ ಬೆಳೆಗಳು ಒಣಗುವ ಹಂತದಲ್ಲಿದ್ದವು ಆದರೆ ಸೆಪ್ಟಂಬರನಲ್ಲಿ ಸುರಿದ ಮಳೆಯು ಬೆಳೆಗಳ ಚೇತರಿಕೆಗೊಂಡಿವೆ. ಮಾನವಿ ತಾಲೂಕಿನಲ್ಲಿ ಹೆಚ್ಚಾಗಿ ಮಳೆ ಬಂದಿರುವುದರಿಂದ , ಬೆಳೆಗಳು ಕೊಳೆಯುವ ಹಂತದಲ್ಲಿವೆ ಎಂದು ವಿವರಿಸಿದರು.

**ವಿಷಯ:-2. ಬೆಳೆ ಪರಿಸ್ಥಿತಿ ವರದಿ:-**

ಜಂಟಿ ಕೃಷಿ ನಿದೇಶಕರು ಸಭೆಯಲ್ಲಿ ಕೃಷಿ ಕ್ಷೇತ್ರದ ಬಗ್ಗೆ ವಿವರಣೆ ನಿಡುತ್ತಾ, ಮುಂಗಾರು ಹಂಗಾಮಿನಲ್ಲಿ 3,49,615 ಹೆಕ್ಟರ್ ಬಿತ್ತನೆ ಗುರಿ ಹೊಂದಿದ್ದು, 2,54,824 ಹೆಕ್ಟರ್ ಬಿತ್ತನೆಯಾಗಿರುತ್ತದೆ. ಹಿಂಗಾರು ಹಂಗಾಮಿನಲ್ಲಿ ಬಿತ್ತನೆ ಮಾಡಲು ಬೀಜದ ಕೊರತೆಯಾಗದಂತೆ ಕ್ರಮ ಕೈಗೊಳ್ಳಲಾಗಿದೆ ಎಂದು ವಿವರಿಸಿದರು.

**ವಿಷಯ:3 ಬೆಳೆ ವಿಮೆ ಯೋಜನೆ ಕುರಿತು:**

ಪ್ರಧಾನ ಮಂತ್ರಿ ಫಸಲ ಭೀಮಾ ಯೋಜನೆ ಕುರಿತು ಜಂಟಿ ಕೃಷಿನಿರ್ದೇಶಕರು, ರಾಯಚೂರು ಇವರು ಸಭೆಯಲ್ಲಿ ತಿಳಿಸುತ್ತಾ, 2019-20 ನೇ ಸಾಲಿನ ಜಿಲ್ಲೆಯಲ್ಲಿ 1,10,764,ರೈತರು ಬೆಳೆ ವಿಮೆಗೆ ಒಳಪಟ್ಟಿರುತ್ತಾರೆ. ಹೆಚ್ಚಾಗಿ ರೈತರನ್ನು ಬೆಳೆ ವಿಮೆಗೆ ಒಲಪಡಲು ಜಿಲ್ಲಾಧಿಕಾರಿಗಳ ಹಾಗೂ ಸಿಬ್ಬಂಧಿಗಳ ಶ್ರಮವಹಿಸಿ ಕೆಲಸ ಮಾಡಿರುವುದರಿಂದ ಜಿಲ್ಲೆಯಲ್ಲಿ ಪ್ರಸ್ತುತ ಸಾಲಿನಲ್ಲಿ ಹೆಚ್ಚಾಗಿ ರೈತರು ಬೆಳೆ ವಿಮೆಗೆ ಒಳಪಟ್ಟಿರುತ್ತಾರೆ. ಹಾಗೂ 2018-19 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ 86,229 ರೈತರು ಬೆಳೆ ವಿಮೆ ಯೋಜನೆಗೆ ಒಳಪಟ್ಟಿದ್ದು, ಇದರಲ್ಲಿ 51,960,ರೈತರಿಗೆ ರೂ.13195.41 ಲಕ್ಷಗಳು ಕ್ಲೈಮು ಮಾಡಿರುತ್ತಾರೆ. ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತಾ, 2018-19 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ 51,960 ರೈತರಿಗೆ ರೂ.13195.41 ಲಕ್ಷಗಳು ಪ್ರದಾನ ಮಂತ್ರಿ ಫಸಲ್ ಭೀಮಾ ಯೋಜನೆ ಮೂಲಕ ಪಡೆದುಕೊಂಡಿರುತ್ತಾರೆ. ಇದು ಜಿಲ್ಲೆಯ ಉತ್ತಮ ಸಾಧನೆ. ಇದೇ ಮಾದರಿಯಾಗಿಟ್ಟುಕಂಡು , ಜಿಲ್ಲೆಯ ಎಲ್ಲಾ ಅಧಿಕಾರಿಗಳು ರೈತರಿಗೆ ಮನವರಿಕೆ ಮಾಡಿ, ಹೆಚ್ಚು ಹೆಚ್ಚಾಗಿ ರೈತರನ್ನು ಸದರಿ ಯೋಜನೆ ಉಪಯೋಗ

ಪಡೆಕೊಳ್ಳುವಂತೆ ಸಲಹೆಯನ್ನು ನೀಡಲಾಯಿತು. ನಂತರ ಬೆಳೆ ಪರಿಹಾರ ತಂತ್ರಾಂಶದ ಕುರಿತು ವಿವರಿಸುತ್ತಾ, 2018-19 ನೇ ಸಾಲಿನಲ್ಲಿ ಸುಮಾರು 1.50 ಲಕ್ಷ ಬೆಳೆಹಾನಿಯಾಗಿದ್ದು ಈಗಾಗಲೇ 82,480 ರೈತರು ರೂ 75.83 ಕೋಟಿಯಷ್ಟು ಇನ್ ಪುಟ್ ಸಬ್ಸಿಡಿಯನ್ನು ರೈತರು ಪಡೆದುಕೊಂಡಿರುತ್ತಾರೆ. 2018-19 ನೇ ಸಾಲಿನ ರೈತರ ಮಾಹಿತಿಯು ಭೂಮಿ ಪರಿಹಾರ ತಂತ್ರಾಂಶದಲ್ಲಿ ಡಾಟ ಎಂಟ್ರಿ ಮಾಡುವ ಪ್ರಗತಿ ಹಂತದಲ್ಲಿದೆ. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತಾ, 2018-19 ನೇ ಸಾಲಿನ ಹಿಂಗಾರು ಹಂಗಾಮಿನಲ್ಲಿ ಮಳೆ ಕೊರತೆಯಿಂದ ರಾಯಚೂರು ಜಿಲ್ಲೆಯನ್ನು ತೀವ್ರತರವಾದ ಬರಗಾಲದಿಂದ ರೈತರಿಗೆ ತುಂಬಾ ಸಂಕಷ್ಟದಲ್ಲಿದ್ದಾರೆ, ಅವರಿಗೆ ಸರಿಯಾದ ರೀತಿಯಿಂದ ಬೆಳೆ ಪರಿಹಾರವನ್ನು ತಲುಪಿಸಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

**ವಿಷಯ: 4. ರೈತರ ಆತ್ಮಹತ್ಯೆ ಪ್ರಕರಣಗಳ ವರದಿ:**

ಜಂಟಿ ಕೃಷಿನಿರ್ದೇಶಕರು, ರಾಯಚೂರು ಇವರು 2019-20ನೇ ಸಾಲಿನಲ್ಲಿ ರಾಯಚೂರು ಜಿಲ್ಲೆಯಲ್ಲಿ ಸಾಲಬಾದೆಯಿಂದ ರೈತರು ಆತ್ಮ ಹತ್ಯೆ ಮಾಡಿಕೊಂಡ 8 ಜನ ರೈತರ ಪ್ರಕರಣಗಳು ದಾಖಲಾಗಿರುತ್ತವೆ. ಇನ್ನೂ 4ಪ್ರಕರಣಗಲು ಇತ್ಯಾರ್ಥ ಮಾಡುವುದು ಬಾಕಿಯಿರುತ್ತದೆ ಎಂದು ತಿಳಿಸಿದರು. ನಂತರ ಉಸ್ತುವಾರಿ ಕಾರ್ಯದರ್ಶಿಗಳು ರಾಯಚೂರು ಜಿಲ್ಲೆ ಇವರು ಮಾತನಾಡುತ್ತಾ, ಕಳೆದ ಬಾರಿ ನಡೆದ ಸಭೆಯಲ್ಲಿ ನೀರಾವರಿ ಪ್ರದೇಶಗಳಾದ ಸಿಂಧನೂರು ಮತ್ತು ಮಾನವಿ ತಾಲೂಕಿನಲ್ಲಿ ಹೆಚ್ಚಾಗಿ ರೈತರು ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ, ಇದರ ಬಗ್ಗೆ ಅಧ್ಯಯನ ಮಾಡಿ ವರದಿ ಸಲ್ಲಿಸಿವಂತೆ ಜಂಟಿ ಕೃಷಿ ನಿರ್ದೇಶಕರಿಗೆ ಸೂಚಿಸಲಗಿತ್ತು. ಆದರೆ ಇದರ ಬಗ್ಗೆ ಇನ್ನೂ ಗಮನ ಹರಿಸಿರುವುದಿಲ್ಲಾ ಸದರಿ ವಿಷಯವನ್ನು ಗಂಭೀರವಾಗಿ ತೆಗೆದುಕೊಂಡು ಮುಂದಿನ ಸಭೆಯಲ್ಲಿ ತಿಳಿಸಲು ಸೂಚಿಸಲಾಯಿತು.

**ವಿಷಯ:-5 ಕುಡಿಯುವ ನೀರು ಸರಬರಾಜು ಯೋಜನೆ:**

ಕಾರ್ಯಪಾಲಕ ಅಭಿಯಂತರರು ಗ್ರಾ.ನೀ.ಸ.ಮಂ. ಇವರು ಸಭೆಯಲ್ಲಿ ಮಾತನಾಡುತ್ತಾ, ರಾಯಚೂರು ಜಿಲ್ಲೆಯಲ್ಲಿ ಪ್ರಸ್ತುತ ಗ್ರಾಮೀಣ ಪ್ರದೇಶದಲ್ಲಿ 5 ಗ್ರಾಮದಲ್ಲಿ 8 ಟ್ಯಾಂಕರ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದ್ದು, 112 ಗ್ರಾಮಗಳಲ್ಲಿ 132 ಖಾಸಗಿ ಕೊಳವೆ ಬಾವಿಗಳನ್ನು ಬಾಡಿಗೆ ಪಡೆದುಕೊಂಡು ನೀರು ಸರಬರಾಜು ಮಾಡಲಾಗುತ್ತಿದೆ. ಹಾಗೂ ಜಿಲ್ಲೆಯಲ್ಲಿ ಬರಗಾಲ ಪರಿಸ್ಥಿತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಿಸಲು ಪ್ರತಿ ವಿಧಾನ ಸಭಾ ಸದಸ್ಯರ ಅಧ್ಯಕ್ಷತೆಯಲ್ಲಿ 4 ತಾಲೂಕು ಟಾಸ್ಕ ಫೋರ್ಸ್ ನಿಂದ 426 ಕಾಮಗಾರಿಗಳಿಗೆ ಒಟ್ಟು ರೂ.942.00 ಲಕ್ಷಗಳನ್ನು ಮಾನ್ಯ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಅದರಲ್ಲಿ ರೂ.776.33 ಲಕ್ಷ ಬಿಡುಗಡೆ ಮಾಡಲಾಗಿರುತ್ತದೆಯೆಂದು ಮತ್ತು ಮುಂದಿನ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸದಂತೆ, ಸರ್ಕಾರಕ್ಕೆ ಯೋಜನೆಗಳನ್ನು ರೂಪಿಸಿ, ವರದಿಯನ್ನು ಸಲ್ಲಿಸಲಾಗಿದೆಯೆಂದು ಸಭೆಗೆ ತಿಳಿಸಿದರು. ನಂತರ ಯೋಜನಾಧಿಕಾರಿಗಳು ಜಿಲ್ಲಾ ನಗರಾಭಿವೃದ್ಧಿ ಕೋಶ ಇವರು ಸ್ಥಳೀಯ ಸಂಸ್ಥೆಗಳಲ್ಲಿ ಕುಡಿಯುವ ನೀರಿನ ಬಗ್ಗೆ ವಿವರಿಸುತ್ತಾ, ಹಟ್ಟಿ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ 13 ವಾರ್ಡುಗಳಲ್ಲಿ ಟ್ಯಾಂಕರ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ ಎಂದು ತಿಳಿಸಿದರು. ರಾಯಚೂರು ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ಸಂಬಂಧಿಸಿದಂತೆ ಹೋಸದಾಗಿ ಕೊರೆಸಲಾದ ಬೋರವೆಲ್ ಗಳು ಜಿಲ್ಲೆಯ 214 ಬೋರವೆಲ್ ಪೈಕಿ ಅರ್ಧದಷ್ಟು ದೇವದುರ್ಗ ತಾಲೂಕಿನಲ್ಲಿ ಅಂದರೆ, 123 ಕೈ ಪಂಪುಗಳನ್ನು ಬಳಸಿಕೊಂಡು ನೀರು ಸರಬರಾಜು ಮಾಡಲಾಗುತ್ತಿದೆ. ಉಳಿದ ತಾಲೂಕಿನಲ್ಲಿ ಕಡಿಮೆ ಇರುತ್ತದೆ. ಇದರ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ಇವರು ಸದರಿ ಸಮಸ್ಯೆ ಕುರಿತು ಗಮನಹರಿಸಿ, ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕೆಂದು ಸಲಹೆಯನ್ನು ನೀಡಲಾಯಿತು. ಹಾಗೂ ಜಿಲ್ಲೆಯಲ್ಲಿ 112 ಗ್ರಾಮಗಲಲ್ಲಿ 132 ಖಾಸಗಿ ಕೊಳವೆ ಬಾವಿಗಳ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗಿತ್ತಿದ್ದು, ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಸಂಬಂಧಿಸಿದ ಅಧಿಕಾರಿಗಳು ಗಂಭೀರತೆಯನ್ನು ತಿಳಿದುಕೊಳ್ಳಲು ಖುದ್ದು ಗ್ರಾಮಗಳಿಗೆ ಭೇಟಿ ಸಮಸ್ಯೆ

ಕುರಿತು ವಾಸ್ತವತೆಯನ್ನು ಅಧ್ಯಯನ ಮಾಡಿಕೊಂಡು ಸಾರ್ವಜನಿಕರಿಗೆ ಕುಡಿಯುವ ನೀರನ್ನು ಸರಬರಾಜು ಮಾಡಬೇಕೆಂದು ಸಲಹೆಯನ್ನು ನೀಲಾಯಿತು.

**ವಿಷಯ:6 ಮೇವಿನ ಪರಿಸ್ಥಿತಿ :-**

ಉಪ ನಿರ್ದೇಶಕರು ಪಶು ಸಂಗೋಪನಾ ಇಲಾಖೆ ರಾಯಚೂರು ಇವರು ಮಾತನಾಡುತ್ತಾ ಪ್ರಸ್ತುತ ಜಿಲ್ಲೆಯಲ್ಲಿ ಒಟ್ಟು 214533 ಮೆ.ಟನ್ ಮೇವು ಲಭ್ಯವಿದ್ದು ಮುಂದಿನ 12 ವಾರಗಳಿಗೆ ಸಕಾಗುವಷ್ಟು ಇರುತ್ತದೆ ಹಾಗೂ ಜಿಲ್ಲೆಯಲ್ಲಿ 42314 ಮೇವಿನ ಮಿನಿ ಕಿಟ್ ಗಳನ್ನು ಪೂರೈಕೆ ಮಾಡಲಾಗಿರುತ್ತದೆ ಎಂದು ಸಭೆಗೆ ತಿಳಿಸಿದರು. ಹಾಗೂ ಮುಂದಿನ ದಿನಗಳಲ್ಲಿ ಮೇವಿನ ಕೊರತೆ ಆಗದಂತೆ ಜಿಲ್ಲಾಡಳಿತದಿಂದ ಮುಂದಿನ ದಿನಗಳಲ್ಲಿ ಜಿಲ್ಲೆಯಲ್ಲಿ ಜಾನುವಾರುಗಳಿಗೆ ಮೇವಿನ ಅವಶ್ಯಕತೆ ಅನುಗುಣವಾಗಿ 300 ಮೇಟ್ರಿಕ್ ಟನ್ ಬೇಲ್ ಮಾಡಿರುವ ಒಣ ಭತ್ತದ ಮೇವನ್ನು ರಾಷ್ಟ್ರೀಯ ಬೀಜ ನಿಗಮ,ಕೇಂದ್ರೀಯ ರಾಜ್ಯ ಫಾರ್ಮನ ಜವಳಗೇರಾ, ತಾ: ಸಿಂಧನೂರುನಲ್ಲಿ ಕಾಯ್ದಿರಿಸಲು ಯೋಜನೆ ರೂಪಿಸಲಾಗಿದೆ, ಪ್ರಸ್ತುತ 5 ಮೇವಿನ ಬ್ಯಾಂಕ ಮತ್ತು ಹೈಕೋರ್ಟ ನಿರ್ದೇಶನದಂತೆ 5 ಗೋಶಾಲೆಗಳನ್ನು ತಗಲಾಗಿದೆ. ಸದರಿ ವಿಷಯಕ್ಕೆ ಸಂಬಂದಿಸಿದಂತೆ, ಕೋಲಾರ ಮಂಡ್ಯ ಮತ್ತು ಹಾಸನ ಇತರೆ ಜಿಲ್ಲೆಗಳಲ್ಲಿ ಹೈನುಗಾರಿಕೆಯಿಂದ ಹಾಲು ಉತ್ಪಾದನೆ ಹೆಚ್ಚಿಸಿಕೊಂಡು ರೈತರ ಆದಾಯವನ್ನು ಮೂಲಕ ಆರ್ಥಿಕವಾಗಿ ಅಭಿವೃದ್ಧಿ ಹೊಂದುತ್ತಿದ್ದು, ಅದೇ ಮಾದರಿಯಾಗಿ ಹಾಲು ಉತ್ಪಾದನೆ ಹೆಚ್ಚಿಸಲು ಪಶು ಸಂಗೋಪನೆ ಇಲಾಖೆಯಿಂದ ಗುರಿ ನಿಗದಿಪಡಿಸಿಕೊಳ್ಳಬೇಕು, ಹಾಲಿಗೆ ಸರ್ಕಾರ ನಿಗದಿ ಪಡಿಸಿದ ಸಬ್ಸಡಿಯೊಂದಿಗೆ , ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆ ಮೂಲಕ ದನದ ಕೊಟ್ಟಿಗೆ ನಿರ್ಮಾಣದ ಉಪಯೋಗ ಪಡೆದುಕೊಂಡು ಸೂಕ್ತ ಚಟುವಟಿಕೆಗಳನ್ನು ಹಮ್ಮಿಕೊಳ್ಳವುದು, ಹೈನುಗಾರಿಕೆಗೆ ಉತ್ತೇಜನ ನೀಡಲು ಜಿಲ್ಲೆಯಲ್ಲಿ ಪ್ರಯೋಗಿಕವಾಗಿ ಪ್ರತಿ ತಾಲೂಕಿನಲ್ಲಿ 5 ಮಾದರಿ ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು ಹೈನುಗಾರಿಕೆ ಮೂಲಕ ರೈತರ ಆದಾಯವನ್ನು ಹೆಚ್ಚಿಸುವ ಯೋಜನೆಯನ್ನು ರೂಪಿಸಬೇಕೆಂದು ಉಪ ನಿರ್ದೇಶಕರು ಪಶು ಸಂಗೋಪನಾ ಅಧಿಕಾರಿಗಳು ಜಿಲ್ಲಾಧಿಕಾರಿಗಳು ಹಾಗು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳೊಂದಿಗೆ ಚರ್ಚಿಸಿ, ಕ್ರಮಕೈಗೊಳ್ಳಬೇಕೆಂದು ಸಲಹೆಯನ್ನು ನೀಡಲಾಯಿತು.

**ವಿಷಯ:7 ಮಹತ್ಮಾಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ.**

ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಜಿಲ್ಲಾ.ಪಂ ರಾಯಚೂರು ರವರು ಮಾತನಾಡುತ್ತಾ, ಜಿಲ್ಲೆಯಲ್ಲಿ 2018-19 ನೇ ಸಾಲಿನ ನರೇಗಾ ಯೋಜನೆಯಡಿಯಲ್ಲಿ ಮಾನವ ದಿನಗಳ ಗುರಿಯು 92.58 ಲಕ್ಷವಿದ್ದು ಶೇ.114 ರಷ್ಟು ಗುರಿ ಸಾಧನೆಗೆ ರೂ.268.65 ಕೋಟಿ ಖರ್ಚು ಮಾಡಲಾಗಿರುತ್ತದೆ ಹಾಗೂ ಪ್ರಸ್ತುತ 2019-20 ನೇ ಸಾಲಿನ ಯೋಜನೆಯಡಿಯಲ್ಲಿ ಮಾನವ ದಿನಗಳ ಗುರಿಯು 110.00 ಲಕ್ಷವಿದ್ದು ಶೇ.79 ರಷ್ಟು ಗುರಿ ಸಾಧನೆಗೆ ರೂ.206.97 ಕೋಟಿ ಖರ್ಚು ಮಾಡಲಾಗಿರುತ್ತದೆ. ಹಾಗೂ ಮಹತ್ಮಾಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಬರಗಾಲ ನಿರ್ವಹಣೆ ಕಾಮಗಾರಿಗಳು ಪ್ರಗತಿಯಲ್ಲಿರುವ 607 ಕಾಮಗಾರಿಗಳಾಗಿವೆ ಹಾಗೂ 1875 ಕಾಮಗಾರಿಗಳು ಪೂರ್ಣಗೊಂಡಿರುತ್ತವೆಯೆಂದು ಸಭೆಯಲ್ಲಿ ಮಂಡಿಸಿದರು. ನಂತರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತಾ, ದೇವದುರ್ಗ ತಾಲೂಕಿನಲ್ಲಿ ಪ್ರಗತಿ ಪ್ರತಿಶತ ಕಡಿಮೆ ಇದ್ದು ಇದರ ಬಗ್ಗೆ ಸೂಕ್ತ ಗಮನ ಹರಿಸಿ ಪ್ರಗತಿ ಸಾದಿಸಬೇಕು ಹಾಗೂ ಜಿಲ್ಲೆಯಲ್ಲಿ ತೀವ್ರತರವಾದ ಬರಗಾಲವಿದ್ದುದರಿಂದ ಜನರು ಗೂಳೆ ಹೋಗುವುದನ್ನು ತಡೆಯಲು ಸದರಿ ಯೋಜನೆಯನ್ನು ಪರಿಣಾಮಕಾರಿಯಾಗಿ ಹಾಗೂ ಕಾರ್ಮಿಕ ಕೇಂದ್ರಿತ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಮತ್ತು ಹೆಚ್ಚಿನ ಉದ್ಯೋಗ ಸೃಜನೆ ಒಳಪಡುವ ಕಾಮಗಾರಿಗಳನ್ನು ಕೈಗೊತ್ತಿಕೊಂಡು ಹೆಚ್ಚಿನ ಸಾಧನೆ ಮಾಡಲು ಸೂಚಿಸಿದರು.

**ವಿಷಯ:8 ಪ್ರವಾಹ ಪರಿಸ್ಥತಿ:**

ಸಹಾಯಕ ಆಯುಕ್ತರು, ರಾಯಚೂರು ಇವರು 2019-20 ನೇ ಸಾಲಿನ ಅಗಷ್ಟ ತಿಂಗಳಿನಲ್ಲಿ ಉದ್ಭವಿಸಿರುವ ಪ್ರವಾಹ ಪರಿಸ್ಥಿಯನ್ನು ಈ ಕೆಳಗಿನಂತೆ ವಿವರಿಸಿದರು,

- ಜಿಲ್ಲೆಯ ಎಲ್ಲಾ 3792 ಸಂತ್ರಸ್ಥರಿಗೆ ಆಹಾರ ಕಿಟ್‌ಗಳನ್ನು ವಿತರಿಸಲಾಗಿರುತ್ತದೆ.
- ಜಿಲ್ಲೆಯ ಒಟ್ಟು ಎಲ್ಲಾ 543 ಸಂತ್ರಸ್ಥ ಕುಟುಂಬಗಳಿಗೆ ಪ್ರತಿ ಕುಟುಂಬಕ್ಕೆ ರೂ.10,000-00 ರಂತೆ ಒಟ್ಟು ರೂ. 54.30 ಲಕ್ಷಗಳನ್ನು ತುರ್ತು ಪರಿಹಾರಕ್ಕಾಗಿ ಬಟ್ಟೆ ಮತ್ತು ಅಡುಗೆ ಪಾತ್ರೆಗಳ ಖರೀದಿಗೆ ನೆರೆ ಸಂತ್ರಸ್ಥರಿಗೆ ನೇರವಾಗಿ ಬ್ಯಾಂಕ ಖಾತೆಗೆ ಜಮೆ ಮಾಡಲಾಗಿದೆ.
- ಪ್ರವಾಹದಿಂದ ದೇವದುರ್ಗ ತಾಲೂಕಿನಲ್ಲಿ ಒಂದು ಜೀವಹಾನಿಯಾಗಿದ್ದು,ರೂ.5.00 ಲಕ್ಷವನ್ನು ವಾರುಸುದಾರರಿಗೆ ಬಿಡುಗಡೆ ಮಾಡಲಾಗಿದೆ.
- ಪ್ರವಾಹದಿಂದ ಜಿಲ್ಲೆಯಲ್ಲಿ 2 ಜಾನುವಾರು ಮೃತಪಟ್ಟಿದ್ದು, ರೂ.60.00 ಸಾವಿರಗಳನ್ನು ವಾರುಸುದಾರರಿಗೆ ಬಿಡುಗಡೆ ಮಾಡಲಾಗಿದೆ.
- ಮನೆಗಳ ಹಾನಿ ವರದಿ :
- ಶೇಕಡ 75% ರಿಂದ 100% ಪೂರ್ತಿ ಹಾನಿಯಾದ ಮನೆಗಳು ಹಾನಿಯಾದ ಮನೆಗಳು-8
- ಶೇಕಡ 25% ರಿಂದ 75% ಭಾಗಶಃ ಹಾನಿಯಾದ ಮನೆಗಳು-15
- ಶೇಕಡ 15% ರಿಂದ 25% ಅಲ್ಪ ಸ್ವಲ್ಪ ಹಾನಿಯಾದ ಮನೆಗಳು-50 ಒಟ್ಟು-73
- 73 ಮನೆಗಳಿಗೆ ರೂ.25,000 ಗಳಂತೆ, ಒಟ್ಟು ರೂ.18.25 ಲಕ್ಷಗಳನ್ನು ನೆರೆ ಸಂತ್ರಸ್ಥರಿಗೆ ನೇರವಾಗಿ ಬ್ಯಾಂಕ ಖಾತೆಗೆ ಜಮೆ ಮಾಡಲಾಗಿದೆ ಹಾಗೂ ಪೂರ್ತಿ ಹಾನಿಯಾದ ಮನೆಗಳನ್ನು ರಾಜೀವಗಾಂಧಿ ವಸತಿ ನಿಗಮ ನಿಯಮಿತ ವತಿಯಿಂದ ಪರಿಹಾರಕ್ಕಾಗಿ ಪ್ರಕ್ರಿಯೆ ಚಾಲ್ತಿಯಲ್ಲಿದೆ.
- ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಬೆಳೆಗಳ ಒಟ್ಟು 13,925 ಹೇಕ್ಟರ್ ಪ್ರದೇಶ ಪ್ರವಾಹದಿಂದ ಹಾನಿಯಾಗಿದ್ದು, ಎನ್.ಡಿ.ಆರ್.ಎಫ್ ಮಾರ್ಗಸೂಚಿಯಂತೆ ರೂ. 18.34 ಕೋಟಿ ಪರಿಹಾರದ ಮೊತ್ತವನ್ನು ಬಿಡುಗಡೆ ಮಾಡಲು ಮಾನ್ಯ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಈಗಾಗಲೇ ಭೂಮಿ ಪರಿಹಾರ ತಂತ್ರಾಂಶದ ಮೂಲಕ 7 ಸಾವಿರ ರೈತರ ಮಾಹಿತಿ ದಾಖಲು ಮಾಡಲಾಗಿದ್ದು, ಆಧಾರ ಸಂಖ್ಯೆ ಮೂಲಕ ಪರಿಹಾರ ನೀಡುವುದು ಪ್ರಗತಿ ಹಂತದಲ್ಲಿದೆ.
- ಪ್ರವಾಹದಿಂದ ಹಾನಿಯಾಗಿರುವ ರಸ್ತೆ & ಸೇತುವೆಗಳ ತಾತ್ಕಲಿಕ ಮರು ನಿರ್ಮಾಣ ಕಾರ್ಯ ಪ್ರಗತಿಯಲ್ಲಿರುತ್ತದೆ. ಜಲದುರ್ಗ ಸೇತುವೆ, ಹೂವಿನಹೆಡಗಿ ಸೇತುವೆ ಮತ್ತು ಗೂಗಲ್ ಬ್ರಿಡ್ಜ್ ಕಂ ಬ್ಯಾರೇಜ್‌ಗಳ ದುರಸ್ಥಿ ಕಾರ್ಯ ಮುಗಿದಿದ್ದು ರಸ್ತೆ ಸಂಪರ್ಕ ಆರಂಭಗೊಂಡಿದೆ.
- ಪ್ರವಾಹದಿಂದ ಒಟ್ಟು 787 ಟ್ರಾನ್ಸ್ ಫಾರಂಗಳು ಹಾನಿಯಾಗಿದ್ದು ಇದರಲ್ಲಿ 650 ದುರಸ್ಥಿಗೊಂಡಿವೆ. ಉಳಿದ ಟ್ರಾನ್ಸ್‌ಫಾರಂ ದುರಸ್ಥಿ ಮತ್ತು ಬದಲಾವಣೆ ಕಾರ್ಯ ಚಾಲ್ತಿಯಲ್ಲಿದೆ.
- ಪ್ರವಾಹ ಪೀಡಿತ ಗ್ರಾಮಗಳಲ್ಲಿ ಜನರ ಆರೋಗ್ಯದ ಹಿತದೃಷ್ಟಿಯಿಂದ ಕೈಗೊಳ್ಳಬೇಕಾದ ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ಆರೋಗ್ಯ ಇಲಾಖೆಯಿಂದ ಕೈಗೊಳ್ಳಲಾಗಿದೆ.
- ಜಿಲ್ಲೆಯಲ್ಲಿ ಒಟ್ಟಾರೆ ರೂ.242.62 ಕೋಟಿ ಅಂದಾಜು ಹಾನಿಯನ್ನು ಲೆಕ್ಕಿಸಲಾಗಿದೆ.
- ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ಮಾರ್ಗಸೂಚಿಯನ್ವಯ ಒಟ್ಟು ರೂ.39.00 ಕೋಟಿ ಬೇಡಿಕೆಯನ್ನು ಸಲ್ಲಿಸಲಾಗಿದೆ.
- ಜಿಲ್ಲಾಧಿಕಾರಿಗಳ ಪಿಡಿ ಖಾತೆಯಲ್ಲಿ ಪ್ರಸ್ತುತ ರೂ.12.87 ಕೋಟಿ ಹಣ ಲಭ್ಯವಿರುತ್ತದೆ.

ನಂತರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತಾ, 2019-20 ನೇ ಸಾಲಿನ ಅಗಷ್ಟ ತಿಂಗಳಿನಲ್ಲಿ ಉದ್ಭವಿಸಿರುವ ಪ್ರವಾಹ ಪರಿಸ್ಥಿಯನ್ನುಸೂಕ್ತ ರೀತಿಯಾಗಿ ಸ್ಪಂದಿಸುವಂತೆ ಹಾಗೂ ಸೂಕ್ತ ಪರಿಹಾರವಬ್ಬು ನೆರೆ ಸಂತ್ರಸ್ಥರಿಗೆ ತಲುಪಿಸುವಂತೆ ಸೂಕ್ತ ಸಲಹೆಯನ್ನು ನೀಡಲಾಯಿತು.

ವಂದನಾರ್ಪಣೆಯೊಂದಿಗೆ ಸಭೆಯನ್ನು ಹಾಗೂ ಕ್ಷೇತ್ರ ಭೇಟಿಯನ್ನು ಮುಕ್ತಾಯಗೊಳಿಸಲಾಯಿತು.

(ಜಿ. ಕುಮಾರ ನಾಯಕ)

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ರಾಯಚೂರು ಜಿಲ್ಲೆ
ಮತ್ತು ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ

ಪ್ರತಿಯನ್ನು:

1. ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ವಿಧಾನ ಸೌಧ ಬೆಂಗಳೂರು ರವರಿಗೆ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ಬಹುಮಹಡಿಗಳ ಕಟ್ಟಡ ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ ರವರಿಗೆ ಸೂಕ್ತ ಕ್ರಮಕ್ಕಾಗಿ.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ ರಾಯಚೂರು ಜಿಲ್ಲೆ ರವರಿಗೆ ಸೂಕ್ತ ಕ್ರಮಕ್ಕಾಗಿ.
6. ಜಿಲ್ಲಾಮಟ್ಟದ ಎಲ್ಲಾ ಅನುಷ್ಠಾನಾಧಿಕಾರಿಯವರಿಗೆ ಸೂಕ್ತ ಕ್ರಮಕ್ಕಾಗಿ. (ಜಿಲ್ಲಾಧಿಕಾರಿಗಳು, ರಾಯಚೂರು ಮೂಲಕ).

**ದಿನಾಂಕ: 26-09-2019 ರಂದು ಶ್ರೀ ರಾಜೇಂದ್ರ ಕುಮಾರ್ ಕಠಾರಿಯಾ, ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಹಾಗೂ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು. ಚಾಮರಾಜನಗರ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ಸಭಾ ನಡವಳಿ.**

ಹಾಜರಿದ್ದವರು:

1. ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ; ಹಾಗೂ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು. ಚಾಮರಾಜನಗರ
2. ಜಿಲ್ಲಾಧಿಕಾರಿಗಳು, ಚಾಮರಾಜನಗರ ಜಿಲ್ಲೆ, ಚಾಮರಾಜನಗರ
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಾಮರಾಜನಗರ
4. ಉಪವಿಭಾಗಾಧಿಕಾರಿ, ಕೊಳ್ಳೇಗಾಲ ಉಪವಿಭಾಗ, ಕೊಳ್ಳೇಗಾಲ
5. ಜಿಲ್ಲಾ ಮಟ್ಟದ ಅಧಿಕಾರಿಗಳು, ಚಾಮರಾಜನಗರ ಜಿಲ್ಲೆ

ಮಾನ್ಯ ಜಿಲ್ಲಾಧಿಕಾರಿಗಳು ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಹಾಗೂ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು. ಚಾಮರಾಜನಗರ ರವರಿಗೆ ಹಾಗೂ ಸಭೆಗೆ ಹಾಜರಿದ್ದ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸ್ವಾಗತವನ್ನು ಕೋರಿದರು.

ಮಳೆ ವರದಿ :

ಚಾಮರಾಜನಗರ ಜಿಲ್ಲೆಯಲ್ಲಿ ಜಿಲ್ಲಾದ್ಯಂತ ಆಗಸ್ಟ್ ಮಾಹೆಯಲ್ಲಿ 108.5 ಮತ್ತು ಸೆಪ್ಟಂಬರ್ ಮಾಹೆಯಲ್ಲಿ ಶೇ. 26% ರಷ್ಟು ಮಳೆಯಾಗಿದ್ದು ವಾಡಿಕೆ ಮಳೆಗಿಂತ ಶೇ 5% ರಷ್ಟು ಹೆಚ್ಚು ಮಳೆಯಾಗಿರುತ್ತದೆ ಎಂದು ಮಾನ್ಯ ಜಿಲ್ಲಾಧಿಕಾರಿಗಳು ತಿಳಿಸಿದರು.

ಕೃಷಿ ಇಲಾಖೆ :

ಕೃಷಿ ಇಲಾಖೆಯ ಪ್ರಗತಿ ಬಗ್ಗೆ ಮಾಹಿತಿ ನೀಡುವಂತೆ ಕಾರ್ಯದರ್ಶಿಗಳು ಕೃಷಿ ಇಲಾಖೆಯ ಜಂಟಿ ನಿರ್ದೇಶಕರಿಗೆ ತಿಳಿಸಿದಾಗ, ಜಂಟಿ ನಿರ್ದೇಶಕರು, ಜಿಲ್ಲೆಯಲ್ಲಿ ಭತ್ತ, ಜೋಳ, ಹೆಸರು, ಉದ್ದು, ಅಲಸಂದೆ, ರಾಗಿ, ಸೂರ್ಯಕಾಂತಿ, ನೆಲಗಡಲೆ, ಮುಸುಕಿನ ಜೋಳ ಬಿತ್ತನೆ ಬೀಜಗಳು ವಿತರಿಸಲಾಗಿದ್ದು, ಬಿತ್ತನೆ ಬೀಜಗಳ ಕೊರತೆ ಇರುವುದಿಲ್ಲ. ಹಾಗೂ ಯೂರಿಯಾ, ಡಿ.ಎ.ಪಿ, ಎಂ.ಒ.ಪಿ, ಎಸ್.ಎಸ್.ಪಿ, ಕಾಂಪ್ಲೆಕ್ಸ್ ರಸಗೊಬ್ಬರಗಳ ದಾಸ್ತಾನು ಸಾಕಷ್ಟಿದ್ದು, ರಸಗೊಬ್ಬರಗಳ ಕೊರತೆ ಇರುವುದಿಲ್ಲ ಎಂದು ತಿಳಿಸಿದರು.

ಮಾನ್ಯ ಕಾರ್ಯದರ್ಶಿಗಳು, ಜಂಟಿ ನಿರ್ದೇಶಕರಿಗೆ ಚಾಮರಾಜನಗರ ಜಿಲ್ಲೆಯಲ್ಲಿ ವಾಡಿಕೆ ಮಳೆಗಿಂತ ಹೆಚ್ಚಾಗಿ ಮಳೆಯಾಗಿರುವುದರಿಂದ ವ್ಯವಸಾಯ ಮಾಡಲು ಹೆಚ್ಚಿನ ಬಿತ್ತನೆ ಬೀಜ, ರಸಗೊಬ್ಬರದ ಅವಶ್ಯಕತೆ ಹೆಚ್ಚಾಗಿರುತ್ತದೆ. ಆದ್ದರಿಂದ ಬಿತ್ತನೆ ಬೀಜ, ರಸಗೊಬ್ಬರದ ದಾಸ್ತಾನಿನ ಕೊರತೆ ಉಂಟಾಗದಂತೆ ಕ್ರಮವಹಿಸಲು ಸೂಚಿಸಿದರು.

**(ಕ್ರಮ: ಜಂಟಿ ಕೃಷಿ ನಿರ್ದೇಶಕರು, ಚಾಮರಾಜನಗರ)**

ಬೆಳೆ ವಿಮೆ :

ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಬೆಳೆ ವಿಮೆಯನ್ನು ರೈತರಿಗೆ ನೀಡಿರುವುದರ ಕುರಿತು ತಿಳಿಸಲು ಸೂಚಿಸಿದ ಮೇರೆಗೆ 2016-17ನೇ ಸಾಲಿನ ಹಿಂಗಾರು ಹಂಗಾಮಿನಲ್ಲಿ 50328 ರೈತರು ಬೆಳೆ ವಿಮೆಗೆ ನೊಂದಾಯಿಸಿ ಕೊಂಡಿರುತ್ತಾರೆ. ಅದರಲ್ಲಿ 49132 ರೈತರಿಗೆ 25.48 ಕೋಟಿ ಮೊತ್ತವು ಕ್ಲೈಂ ಇನೀಷಿಯೇಟ್ ಆಗಿರುತ್ತದೆ. ಈಗಾಗಲೇ 17013 ರೈತರಿಗೆ 11.94 ಕೋಟಿ ಮೊತ್ತ ರೈತ ಫಲಾನುಭವಿಗಳಿಗೆ ಬೆಳೆ ವಿಮೆ ಹಣ

ನೀಡಲಾಗಿರುತ್ತದೆ. ಉಳಿಕೆ 13.54 ಕೋಟಿ ಮೊತ್ತವು ರೈತರಿಗೆ ಸಂದಾಯವಾಗ ಬೇಕಾಗಿದ್ದು ಇದಕ್ಕಾಗಿ ಕೃಷಿ ಆಯುಕ್ತರ ಹೆಸರಿನಲ್ಲಿ ಇಖಅಖಔಫ ಚಿಛಿಛಿಂಣಟಿಣ ತೆರೆಯಲಾಗಿದ್ದು, ರೈತರಿಂದ ಅಗತ್ಯ ದಾಖಲಾತಿಗಳನ್ನು ಸಂಗ್ರಹಿಸಿದ ನಂತರ ಬೆಳೆ ವಿಮೆಯ ಮೊತ್ತವನ್ನು ರೈತರ ಖಾತೆಗೆ ನೇರವಾಗಿ ವರ್ಗಾವಣೆ ಮಾಡಲಾಗುವುದು ಎಂದು ಮಾನ್ಯ ಜಿಲ್ಲಾಧಿಕಾರಿಗಳು ಸಭೆಯಲ್ಲಿ ತಿಳಿಸಿದರು.

**(ಕ್ರಮ: ಜಂಟಿ ಕೃಷಿ ನಿರ್ದೇಶಕರು, ಚಾಮರಾಜನಗರ ಹಾಗೂ ವ್ಯವಸ್ಥಾಪಕರು, ಲೀಡ್ ಬ್ಯಾಂಕ್, ಚಾಮರಾಜನಗರ)**

**ಪ್ರವಾಹ ಪೀಡಿತ ಗ್ರಾಮಗಳಲ್ಲಿ ಉಂಟಾಗಿರುವ ಮನೆ ಹಾನಿಗಳ ವಿವರ :**

ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಶೇ. 100% ರಷ್ಟು ಸಂಪೂರ್ಣ ಹಾನಿಯಾಗಿರುವ 27 ಮನೆಗಳು, ಶೇ 25% ರಿಂದ 75% ಹಾನಿಯಾಗಿರುವ 27 ಮನೆಗಳು, ಶೇ 15% ರಿಂದ 25% ಹಾನಿಯಾಗಿರುವ 65 ಮನೆಗಳಿಗೆ ಒಂದರಂತೆ ರೂ. 25000/- ಒಟ್ಟು 1,62,5000 ಹಾಗೂ 06 ಗುಡಿಸಲುಗಳಿಗೆ ಒಂದರಂತೆ 4100 ರಂತೆ ರೂ ಒಟ್ಟು 24,600/- ಒಟ್ಟು ಸೇರಿ ಒಟ್ಟು 125 ಮನೆಗಳು ಪ್ರವಾಹದಿಂದಾಗಿ ಹಾನಿಗೊಳಗಾಗಿದ್ದು, ಇದರಲ್ಲಿ 27 ಮನೆಗಳಿಗೆ 13.5 ಲಕ್ಷ ರೂಪಾಯಿಗಳ ಪರಿಹಾರವನ್ನು ಆನ್ ಲೈನ್ ಮೂಲಕ ನೀಡಲಾಗಿರುತ್ತದೆ ಹಾಗೂ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಪ್ರವಾಹ ಪೀಡಿತ ಗ್ರಾಮಗಳಿಗೆ 1000 ಆಹಾರ ಕಿಟ್ ನೀಡಲು ಮಂಜೂರಾಗಿದ್ದು, 940 ಕುಟುಂಬಗಳಿಗೆ ಆಹಾರ ಕಿಟ್ ವಿತರಿಸಲಾಗಿರುತ್ತದೆ ಎಂದು ಮಾನ್ಯ ಜಿಲ್ಲಾಧಿಕಾರಿಗಳು ತಿಳಿಸಿದರು.

**(ಕ್ರಮ: ಉಪವಿಬಾಗಾಧಿಕಾರಿಗಳು, ಕೊಳ್ಳೇಗಾಲ ಉಪವಿಭಾಗ, ಕೊಳ್ಳೇಗಾಲ, ಉಪನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಚಾಮರಾಜನಗರ ಹಾಗೂ ಎಲ್ಲಾ ತಹಶೀಲ್ದಾರ್ ಗಳು ಚಾಮರಾಜನಗರ)**

**ಪಶು ಸಂಗೋಪನಾ ಇಲಾಖೆ :**

ಚಾಮರಾಜನಗರ ಜಿಲ್ಲೆಯಲ್ಲಿ ಉತ್ತಮವಾಗಿ ಮಳೆಯಾಗಿರುವ ಕಾರಣ ಮೇವಿನ ಕೊರತೆ ಉಂಟಾಗಿರುವುದಿಲ್ಲ. ರಾಜ್ಯದಲ್ಲಿ 154 ಗೋಶಾಲೆಗಳಿದ್ದು, ಅದರಲ್ಲಿ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ 01 ಗೋ ಶಾಲೆ, ಚಾಮರಾಜನಗರ ತಾಲ್ಲೂಕಿನಲ್ಲಿ 01, ಯಳಂದೂರು ತಾಲ್ಲೂಕಿನಲ್ಲಿ 01 ರಲ್ಲಿ ಹಾಗೂ ಕೊಳ್ಳೇಗಾಲ ತಾಲ್ಲೂಕಿನಲ್ಲಿ 01 ಗೋ ಶಾಲೆಗಳನ್ನು ತೆರೆಯಲಾಗಿರುತ್ತದೆ. ಆದ್ದರಿಂದ ಹೆಚ್ಚಿನ ಗೋಶಾಲೆಗಳನ್ನು ತೆರೆಯಲು ಅವಶ್ಯವಿರುವುದಿಲ್ಲವೆಂದು ಮಾನ್ಯ ಜಿಲ್ಲಾಧಿಕಾರಿಗಳು ತಿಳಿಸಿದರು.

ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು, ರೈತ ಸಂಪರ್ಕ ಕೇಂದ್ರದಲ್ಲಿ ರೈತರಿಗೆ ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಕೋ-ಆಪರೇಟಿವ್ ಸೊಸೈಟಿ, ಗ್ರಾಮೀಣಾಭಿವೃದ್ಧಿ ಇಲಾಖೆ, ಪಶು ಸಂಗೋಪನಾ ಇಲಾಖೆ, ಮೀನುಗಾರಿಕೆ ಇಲಾಖೆ, ರೇಷ್ಮೆ ಇಲಾಖೆ, ಸಾಮಾಜಿಕ ಅರಣ್ಯ, ಕೃಷಿ ವಿಜ್ಞಾನ ಕೇಂದ್ರ ಹಾಗೂ ಇತರ ಇಲಾಖೆಗಳಿಂದ ನೀಡಲಾಗುವ ಸರ್ಕಾರ ಸೌಲಭ್ಯ, ಯೋಜನೆಗಳ ಬಗ್ಗೆ ಹಾಗೂ ರೈತರಿಗೆ ಅವಶ್ಯಕವಿರುವ ತಾಂತ್ರಿಕ ಮಾಹಿತಿ ಹಾಗೂ ಇಲಾಖೆಗಳಲ್ಲಿ ಸಿಗುವ ಸರ್ಕಾರಿ ಸೌಲಭ್ಯಗಳನ್ನು ರೈತರು ಸದುಪಯೋಗ ಪಡಿಸಿಕೊಳ್ಳುವ ನಿಟ್ಟಿನಲ್ಲಿ ಸಂಬಂಧಪಟ್ಟ ಇಲಾಖೆಯ ಹೋಬಳಿ ಮಟ್ಟದ ಅಧಿಕಾರಿಗಳು ಪ್ರತಿ ಮಾಹೆ 02 ದಿನ ರೈತ ಸಂಪರ್ಕ ಕೇಂದ್ರಕ್ಕೆ ಖುದ್ದಾಗಿ ಹಾಜರಿದ್ದು ರೈತರಿಗೆ ಮಾಹಿತಿ ನೀಡಲು ಸೂಕ್ತ ಕ್ರಮವಹಿಸಿ ಹಾಗೂ ಚಾಮರಾಜನಗರ ಜಿಲ್ಲೆಯಲ್ಲಿ ಹಸುಗಳು ಕಡಿಮೆ ಪ್ರಮಾಣದಲ್ಲಿ ಹಾಲನ್ನು ನೀಡುತ್ತಿರುವುದರಿಂದ, ಇಲ್ಲಿನ ಹಸುಗಳು ಹೆಚ್ಚಿನ ಹಾಲು ಉತ್ಪಾದಿಸಲು ಹಾಗೂ ಹಾಲಿನಲ್ಲಿ ಇರಬೇಕಾದ ಕೊಬ್ಬಿನಾಂಶವನ್ನು ಹೆಚ್ಚಿಸುವುದಕ್ಕಾಗಿ ಹಸುಗಳಿಗೆ ನೀಡಬೇಕಾದ ಪೌಷ್ಟಿಕ ಆಹಾರದ ಕುರಿತು ಮಾಹಿತಿ ನೀಡಿ, ರೈತರಿಗೆ ಹೆಚ್ಚಿನ ಲಾಭಾಂಶ ಬರುವಂತೆ ಕ್ರಮವಹಿಸಲು ಸೂಚಿಸಿದರು.

**(ಕ್ರಮ: ಜಂಟಿ ಕೃಷಿ ನಿರ್ದೇಶಕರು, ಚಾಮರಾಜನಗರ, ಉಪನರ್ದೇಶಕರು ತೋಟಗಾರಿಕೆ ಇಲಾಖೆ, ಉಪನಿದೇಶಕರು;ರೇಷ್ಮೆ ಇಲಾಖೆ, ಸಹಾಯಕ ನಿರ್ದೇಶಕರು, ಮೀನುಗಾರಿಕೆ ಇಲಾಖೆ, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಸಾಮಾಜಿಕ ಅರಣ್ಯ, ಯೋಜನಾ ಸಂಯೋಜನಾ ಅಧಿಕಾರಿ, ಕೃಷಿ ವಿಜ್ಞಾನ ಕೇಂದ್ರ , ಉಪನಿರ್ದೇಶಕರು, ಪಶುಸಂಗೋಪನಾ ಇಲಾಖೆ, ಎಲ್ಲಾ ತಹಶೀಲ್ದಾರ್ ಗಳು, ಸಹಕಾರ ಸಂಘಗಳ ಉಪನಿಬಂಧಕರು ವ್ಯವಸ್ಥಾಪಕರು, ಲೀಡ್ ಬ್ಯಾಂಕ್, ಚಾಮರಾಜನಗರ ಹಾಗೂ ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ)**

**ಲೀಡ್ ಬ್ಯಾಂಕ್ :**

ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು, ಚಾಮರಾಜನಗರ ಜಿಲ್ಲೆಯಲ್ಲಿ 1 ಲಕ್ಷ 10 ಸಾವಿರ ರೈತ ಕುಟುಂಬವಿದ್ದು, ಅದರಲ್ಲಿ 20,000 ರೈತರನ್ನು ಪಿ.ಎಂ ಕಿಸಾನ್ ಯೋಜನೆಗೆ ಒಳಪಡಿಸಿದ್ದು, ಉಳಿದ ರೈತರ ಡಾಟಾವನ್ನು ತಮ್ಮ ಅಧೀನದಲ್ಲಿ ಬರುವ ಎಲ್ಲಾ ಬ್ಯಾಂಕ್‌ನ ಖಾತಾವಾರು ನೀಡಿ ಪಿ.ಎಂ ಕಿಸಾನ್ ಯೋಜನೆಯ ಫಲಾನುಭವಿಗಳನ್ನು ಗುರುತಿಸಿ, ಅವರ ಖಾತೆಗೆ ಹಣ ಜಮಾ ಮಾಡುವ ಕುರಿತು ಸೂಕ್ತ ಕ್ರಮವಹಿಸಿ, ಪಿ.ಎಂ. ಕಿಸಾನ್ ಯೋಜನೆಯ ಫಲಾನುಭವಿಗಳ ಪಟ್ಟಿಯನ್ನು ರೈತ ಸಂಪರ್ಕ ಕೇಂದ್ರಗಳಲ್ಲಿ ಪ್ರದರ್ಶಿಸ ಬೇಕೆಂದು ವ್ಯವಸ್ಥಾಪಕರು, ಲೀಡ್ ಬ್ಯಾಂಕ್, ಚಾಮರಾಜನಗರ ರವರಿಗೆ ಸೂಚಿಸಿದರು. ಅಲ್ಲದೆ ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ನೀಡಲಾಗುವ ಮುಖ್ಯವಾದ 05 ಯೋಜನೆಗಳ ಕುರಿತು ಮುಂದಿನ ಸಭೆಯಲ್ಲಿ ಚರ್ಚೆಯಾಗಬೇಕೆಂದು ಸಭೆಯಲ್ಲಿ ಸೂಚಿಸಿದರು.

ಕೃಷಿ ವಿಜ್ಞಾನ ಕೇಂದ್ರದ ಅಧಿಕಾರಿಗಳನ್ನು ಮುಂದಿನ ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳ ಸಭೆಗೆ ಹಾಜರಿರುವಂತೆ ಸೂಚಿಸಬೇಕೆಂದು ಮಾನ್ಯ ಜಿಲ್ಲಾಧಿಕಾರಿಗಳು ಸೂಚಿಸಿದರು.

**(ಕ್ರಮ: ಜಂಟಿ ಕೃಷಿ ನಿರ್ದೇಶಕರು, ಚಾಮರಾಜನಗರ, ಉಪನರ್ದೇಶಕರು ತೋಟಗಾರಿಕೆ ಇಲಾಖೆ, ವ್ಯವಸ್ಥಾಪಕರು, ಲೀಡ್ ಬ್ಯಾಂಕ್, ಎಲ್ಲಾ ತಹಶೀಲ್ದಾರ್‌ಗಳು)**

**ಮೀನುಗಾರಿಕೆ ಇಲಾಖೆ :**

ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು, ನರೇಗಾ ಯೋಜನೆಯಡಿ ಮೀನುಗಾರಿಕೆ ಇಲಾಖೆಗೆ ಮಾನವ ದಿನಗಳ ಸೃಜನೆಯ ಗುರಿಯನ್ನು ನಿಗಧಿಪಡಿಸಿ ಅದರಂತೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ ಮಾನವ ದಿನಗಳನ್ನು ಸೃಜನೆ ಮಾಡಲು ಸೂಚನೆ ನೀಡಲಾಗಿತ್ತು. ಅದರಂತೆ ಸದರಿ ಇಲಾಖೆಗೆ ಸಂಬಂಧಿಸಿದಂತೆ ಸೆಪ್ಟಂಬರ್ ಮಾಹೆಯ ಅಂತ್ಯದವರೆಗೆ 19160 ಮಾನವ ದಿನಗಳ ಗುರಿಯನ್ನು ನೀಡಲಾಗಿರುತ್ತದೆ. ಆದರೆ ಇದುವರೆವಿಗೂ ಮೀನುಗಾರಿಕೆ ಇಲಾಖೆಗೆ ನೀಡಿರುವ ಗುರಿಗೆ ಶೂನ್ಯ ಪ್ರಗತಿ ಸಾಧನೆಯಾಗಿದ್ದು, ನರೇಗಾ ಯೋಜನೆಯಡಿ ಪ್ರಗತಿ ಕುಂಠಿತವಾಗಿರುತ್ತದೆ. ಆದ್ದರಿಂದ ಸಹಾಯಕ ನಿರ್ದೇಶಕರು, ಮೀನುಗಾರಿಕೆ ಇಲಾಖೆಯವರಿಗೆ ಪ್ರಗತಿ ಕುಂಟಿತವಾಗಿರುವ ಕುರಿತು ಕಾರಣ ಕೇಳಿ ನೋಟಿಸ್ ನೀಡುವಂತೆ ಮುಖ್ಯ ಕಾರ್ಯನಿರ್ವಾಹಣ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಚಾಮರಾಜನಗರ ರವರಿಗೆ ಸೂಚಿಸಿದರು.

ನರೇಗಾ ಯೋಜನೆಯಡಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಸಂಬಂಧಿಸಿದಂತೆ ಮೀನು ಕೃಷಿ ಕೊಳ ನಿರ್ಮಾಣ ಮಾಡಲು ಫಲಾನುಭವಿ ಆಯ್ಕೆ, ತಾಂತ್ರಿಕ ಸಹಾಯ ಮಾತ್ರ ಮೀನುಗಾರಿಕೆ ಇಲಾಖೆಯಿಂದ ಮಾಡಲಾಗುವುದು ಆದರೆ ಕಾಮಗಾರಿಯ ಅನುಷ್ಠಾನವನ್ನು ಪಿ.ಆರ್.ಇ.ಡಿ ಅಥವಾ ಗ್ರಾಮ ಪಂಚಾಯಿತಿ ವತಿಯಿಂದ ನಿರ್ವಹಿಸಲಾಗುವುದು. ನರೇಗಾ ಯೋಜನೆಯ ಕುರಿತಂತೆ ಕ್ರಮವಹಿಸಲಾಗುತ್ತಿದ್ದು, ಈಗಾಗಲೇ 65 ಕ್ರಿಯಾ ಯೋಜನೆಗಳು ಅನುಮೋದನೆಗೊಂಡಿದ್ದು, 06 ಕಾಮಗಾರಿಗಳು ಪ್ರಗತಿಯಲ್ಲಿದ್ದು, 690 ಮಾನವ ದಿನಗಳ ಸೃಜನೆಯಾಗಿರುತ್ತದೆ. ಆದರೆ ಮೀನುಗಾರಿಕೆ ಇಲಾಖೆಗೆ ಸಂಬಂಧಿಸಿದ ಲಾಗಿನ್ ಐ.ಡಿ ಯಲ್ಲಿ ಅನುಷ್ಠಾನವಾಗದೆ ಗ್ರಾಮ ಪಂಚಾಯಿತಿ ಲಾಗಿನ್ ಐ.ಡಿ ಯಲ್ಲಿ ಮಾನವ ದಿನಗಳು ಸೃಜನೆಯಾಗಿರುತ್ತದೆ. ಮೀನುಗಾರಿಕೆ ಇಲಾಖೆಯಲ್ಲಿ ಅನುಷ್ಠಾನಗೊಳಿಸಲು ಲಾಗಿನ್ ಐ.ಡಿ ಇರದ ಕಾರಣ

ಪ್ರಗತಿ ವರದಿಯಲ್ಲಿ ಶೂನ್ಯ ಎಂದು ಸಹಾಯಕ ನಿರ್ದೇಶಕರು, ಮೀನುಗಾರಿಕೆ ಇಲಾಖೆ, ಚಾಮರಾಜನಗರ ರವರು ತಿಳಿಸಿದರು.

**(ಕ್ರಮ: ಸಹಾಯಕ ನಿರ್ದೇಶಕರು, ಮೀನುಗಾರಿಕೆ ಇಲಾಖೆ, )**

**ನೀರಿನ ಶುದ್ಧೀಕರಣ ಘಟಕಗಳ ವಿವರ :**

ಈಗಾಗಲೇ ನೀರಿನ ಶುದ್ದೀಕರಣ ಘಟಕಗಳ ಕಾಮಗಾರಿ ಮುಗಿದಿರುವ ಘಟಕಗಳು ಕೆ.ಆರ್.ಐ.ಡಿ.ಎಲ್ ರವರ ವತಿಯಿಂದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗೆ ವಹಿಸಿ ಕೊಡುವ ಬಗ್ಗೆ ಚರ್ಚೆಯಾಗಿದ್ದು, ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ರೂ. 36,000/- ಗಳ ಅಂದಾಜಿದ್ದು, 4 ಬಾರಿ ಟೆಂಡರ್ ಕರೆಯಲಾಗಿದ್ದು, ಯಾರೂ ಸದರಿ ಟೆಂಡರ್‌ಗಳಿಗೆ ಭಾಗವಹಿಸಿರುವುದಿಲ್ಲ ಎಂಬುದಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಾಮರಾಜನಗರ ರವರು ಸಭೆಗೆ ತಿಳಿಸಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ನರೇಗಾ ಯೋಜನೆಯಡಿಯಲ್ಲಿ ಇಂಗು ಗುಂಡಿ ಕಾಮಗಾರಿಗಳನ್ನು ಈಗಾಗಲೇ ಅನುಷ್ಠಾನಗೊಳಿಸಲಾಗುತ್ತಿದ್ದು, ಡಿಜಿಟಲ್ ಕೀ ಗಳನ್ನು ಸರಿಪಡಿಸಿ ಹಣ ಪಾವತಿಗಾಗಿ ಅಪ್ ಲೋಡ್ ಮಾಡಲು ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಿದರು.

**(ಕ್ರಮ: ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರಿನ ಮತ್ತು ನೈರ್ಮಲ್ಯ ವಿಭಾಗ)**

**ಜಿಲ್ಲಾ ಪಂಚಾಯತ್, ಚಾಮರಾಜನಗರ :**

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಗಂಗಾ ಕಲ್ಯಾಣ ಯೋಜನೆಯು ಯಾವ ಹಂತದಲ್ಲಿ ಇದೆ ಎಂಬ ಬಗ್ಗೆ ಜಿಲ್ಲಾ ವ್ಯವಸ್ಥಾಪಕರು, ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ರವರಿಗೆ ವರದಿ ನೀಡಲು ತಿಳಿಸಿ, 03 ಬಾರಿ ಟೆಂಡರ್ ಕರೆಯಲಾಗಿದೆ. ಆದರೆ ಯಾರೂ ಸಹ ಟೆಂಡರ್‌ದಾರರು ಟೆಂಡರ್‌ಗೆ ಬಾಗಿಯಾಗಿರುವುದಿಲ್ಲ ಎಂದು ಜಿಲ್ಲಾ ವ್ಯವಸ್ಥಾಪಕರು, ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ರವರು ಸಭೆಯಲ್ಲಿ ತಿಳಿಸಿದರು.

ಜಿಲ್ಲಾ ಪಂಚಾಯತ್ ವತಿಯಿಂದ ನಡೆಯುವ ನರೇಗಾ ಯೋಜನೆಯಡಿಯಲ್ಲಿ ಶೇ 53% ರಷ್ಟು ಮಾತ್ರ ಪ್ರಗತಿ ಕಡಿಮೆಯಾಗಿದ್ದು, ಕಳೆದ ಜೂನ್ ಮಾಹೆಯಲ್ಲಿ ತಿಳಿಸಿದಂತೆ ಹಳ್ಳಿಗಳನ್ನು ಗುರುತಿಸಿ, ಕಾಮಗಾರಿಗಳನ್ನು ಕೈಗೊಳ್ಳಲು ಹಾಗೂ ಪ್ರತ್ಯೇಕ ಸಭೆಗಳನ್ನು ಕರೆದು ಯೋಜನೆಗಳನ್ನು ನಿರ್ವಹಿಸಲು ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿಗಳಿಗೆ ತಿಳಿಸಿದರು ಹಾಗೂ ಕೃಷಿ ಇಲಾಖೆಯ ನರೇಗಾ ಯೋಜನೆಯಲ್ಲಿ ಕಾಮಗಾರಿಗಳನ್ನು ಚೆನ್ನಾಗಿ ನಿರ್ವಹಿಸಿದ್ದು, ತೋಟಗಾರಿಕೆ ಇಲಾಖೆ, ಶೇ. 30%, ಅರಣ್ಯ ಇಲಾಖಾ ವತಿಯಿಂದ ಶೇ 8%, ರೇಷ್ಮೆ ಇಲಾಖಾ ವತಿಯಿಂದ ಶೇ 13% ರಷ್ಟು ಮಾತ್ರ ಪ್ರಗತಿಯಾಗಿದ್ದು, ಸದರಿ ಪ್ರಗತಿಯ ಬಗ್ಗೆ ಅಸಮಾಧಾನ ವ್ಯಕ್ತ ಪಡಿಸಿ, ಈ ತಿಂಗಳು ಶೇ 70% ರಷ್ಟು ಪ್ರಗತಿ ಸಾಧಿಸಲು ಸೂಚಿಸಿದರು.

**(ಕ್ರಮ: ಮುಖ್ಯ ಕಾರ್ಯನಿರ್ವಾಹಣ ಅಧಿಕಾರಿ, ಜಿಲ್ಲಾ ಪಂಚಾಯತ್, ಚಾಮರಾಜನಗರ, ಉಪನರ್ದೇಶಕರು ತೋಟಗಾರಿಕೆ ಇಲಾಖೆ, ಉಪನಿದೇಶಕರು, ರೇಷ್ಮೆ ಇಲಾಖೆ, ಸಹಾಯಕ ನಿರ್ದೇಶಕರು, ಮೀನುಗಾರಿಕೆ ಇಲಾಖೆ, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಸಾಮಾಜಿಕ ಅರಣ್ಯ, ಉಪನಿರ್ದೇಶಕರು, ಪಶುಸಂಗೋಪನಾ ಇಲಾಖೆ, ಜಿಲ್ಲಾ ವ್ಯವಸ್ಥಾಪಕರು, ಹಿಂದುಳಿದ ವರ್ಗಗಳ ಅಭಿವೃದ್ಧಿ ಇಲಾಖೆ, ಹಾಗೂ ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ)**

**ಕಬಿನಿ ನೀರಾವರಿ ಇಲಾಖೆ, ಕೊಳ್ಳೇಗಾಲ:**

ಕೊಳ್ಳೇಗಾಲದ ಕೆರೆಗಳ ಅಭಿವೃದ್ಧಿ ಬಗ್ಗೆ ಕೈಗೊಂಡಿರುವ ಕ್ರಮಗಳ ವರದಿಯನ್ನು ನೀಡುವಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಬಿನಿ ನಾಲಾ ವಿಭಾಗ, ಕೊಳ್ಳೇಗಾಲ ರವರಿಗೆ ತಿಳಿಸಲಾಗಿ, ಕೆರೆಗಳ ಅಭಿವೃದ್ಧಿ ಬಗ್ಗೆ, ಕ್ರಮಕೈಗೊಂಡಿರುವುದಾಗಿ ವರದಿ ನೀಡಿದರು.

ಮಾನ್ಯ ಜಿಲ್ಲಾಧಿಕಾರಿಗಳು, ಕೊಳ್ಳೇಗಾಲದ ಕೊಂಗಳ್ಳಿ ಕೆರೆ, ಚಿಕ್ಕರಂಗನಾಥನ ಕೆರೆಗಳಿಗೆ ಮಣ್ಣಿನ ದಿಬ್ಬ ಹಾಕಿಸಿ, ಅವುಗಳನ್ನು ಅಭಿವೃದ್ಧಿಪಡಿಸಲು ಕ್ರಮವಹಿಸುವಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಬಿನಿ ನಾಲಾ ವಿಭಾಗ, ಕೊಳ್ಳೇಗಾಲ ರವರಿಗೆ ತಿಳಿಸಿದರು. ಹಾಗೂ ನಗರಸಭೆ ವತಿಯಿಂದ ಅಭಿವೃದ್ಧಿಪಡಿಸುವ ಬಗ್ಗೆ ಪರಿಶೀಲಿಸಲು ತಿಳಿಸಲಾಯಿತು.

**( ಕ್ರಮ: ಕಾರ್ಯಪಾಲಕ ಅಭಿಯಂತರರು, ಕಬಿನಿ ನಾಲಾ ವಿಭಾಗ, ಕೊಳ್ಳೇಗಾಲ)**

**ಆರೋಗ್ಯ ಇಲಾಖೆ :**

ಆರೋಗ್ಯ ಇಲಾಖೆಯಲ್ಲಿನ ಸಮಸ್ಯೆಗಳು ಮತ್ತು ಪ್ರಗತಿಯ ಬಗ್ಗೆ ತಿಳಿಸುವಂತೆ ಸೂಚಿಸಲಾಗಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಕೊಳ್ಳೇಗಾಲ ಮತ್ತು ಗುಂಡ್ಲುಪೇಟೆ ತಾಲ್ಲೂಕಿನ ಆಸ್ಪತ್ರೆಗಳಲ್ಲಿ ವೆಂಟಿಲೇಟರ್‌ಗಳನ್ನು ಅಳವಡಿಸಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ ಎಂದು ತಿಳಿಸಿದರು.

**(ಕ್ರಮ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಆರೋಗ್ಯ ಇಲಾಖೆ)**

**ಕಂದಾಯ ಇಲಾಖೆ:**

ಬೆಳೆ ಸರ್ವೆಯಲ್ಲಿ ಕಂದಾಯ ಇಲಾಖೆಯ ಪ್ರಗತಿ ಕಡಿಮೆಯಿದ್ದು, 4 ಬಾರಿ ವಿಡಿಯೋ ಕಾನ್ಫರೆನ್ಸ್ ನಡೆಸಿದ್ದರೂ ಸಹ ಶೇ 30%ರಷ್ಟು ಮಾತ್ರ ಪ್ರಗತಿಯಾಗಿದ್ದು ಈ ಬಗ್ಗೆ ಉಪವಿಭಾಗಾಧಿಕಾರಿಗಳು ಮತ್ತು ತಹಶೀಲ್ದಾರರು ನೇರ ಹೊಣೆಗಾರಿಕೆಯಾಗಿರುತ್ತಾರೆಂದು ಉಸ್ತುವಾರಿ ಕಾರ್ಯದರ್ಶಿಗಳು ಅಸಮಾಧಾನವನ್ನು ವ್ಯಕ್ತ ಪಡಿಸಿದರು ಹಾಗೂ ಎಲ್ಲಾ ತಾಲ್ಲೂಕು ತಹಶೀಲ್ದಾರ್ ಹಾಗೂ ಉಪವಿಭಾಗಾಧಿಕಾರಿಗಳಿಗೆ ಬೆಳೆ ಸರ್ವೆಯ ಬಗ್ಗೆ ಹೆಚ್ಚಿನ ಗಮನಹರಿಸಿ ಪ್ರಗತಿ ಸಾಧಿಸಲು ಸೂಚಿಸಿದರು. ಹಾಗೂ ಮುಂದಿನ ಸಭೆಯಲ್ಲಿ ಗ್ರಾಮ ಲೆಕ್ಕಿಗರು, ಪರಿಶೀಲಕರು, ಖುದ್ದು ಸಭೆಗೆ ಹಾಜರಿದ್ದು ವರದಿ ನೀಡುವಂತೆ ಸೂಚಿಸಿದರು.

**(ಕ್ರಮ: ಉಪವಿಭಾಗಾಧಿಕಾರಿ, ಕೊಳ್ಳೇಗಾಲ ಉಪವಿಭಾಗ, ಕೊಳ್ಳೇಗಾಲ, ಎಲ್ಲಾ ತಹಶೀಲ್ದಾರ್‌ಗಳು)**

**ಶಿಕ್ಷಣ ಇಲಾಖೆ :**

ಚಾಮರಾಜನಗರ ಜಿಲ್ಲೆಯಲ್ಲಿ ಒಟ್ಟು 1194 ಶಾಲೆಗಳಿದ್ದು, 01 ನೇ ತರಗತಿಯಿಂದ 10ನೇ ತಗತಿಯ ವರೆಗೆ ಒಟ್ಟು 23,353 ವಿದ್ಯಾಭ್ಯಾಸ ಮಾಡುತ್ತಿದ್ದು, ಮಕ್ಕಳಿಗೆ ಪಠ್ಯ ಪುಸ್ತಕ, ಸಮವಸ್ತ್ರ, ಸೈಕಲ್‌ಗಳನ್ನು ಈಗಾಗಲೇ ವಿತರಿಸಲಾಗಿರುತ್ತದೆ. ಶಾಲಾ ಮಕ್ಕಳಿಗೆ ಶೂ ಮತ್ತು ಸಾಕ್ಸ್‌ಗಳಿಗೆ ಹಣ ಬಿಡುಗಡೆಯಾಗಿದ್ದು ಕಾರ್ಯಾದೇಶ ನೀಡಲಾಗಿರುತ್ತದೆ. ಶಾಲಾ ಅಭಿವೃದ್ಧಿ ಸಮಿತಿಗಳು ಮತ್ತು ಶಾಲಾ ಮುಖ್ಯೋಪಾಧ್ಯಾಯರು ಕಾರ್ಯಾದೇಶದಂತೆ ವಿತರಿಸಲು ಕ್ರಮವಹಿಸುತ್ತಾರೆಂದೂ ಹಾಗೂ 342 ಶಾಲೆ ಬಿಟ್ಟ ಮಕ್ಕಳನ್ನು ಗುರುತಿಸಲಾಗಿರುತ್ತದೆ. ರಾಜ್ಯದಲ್ಲಿಯೇ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಚಾಮರಾಜನಗರವು 15 ನೇ ಸ್ಥಾನದಲ್ಲಿದೆ. ಮಕ್ಕಳ ಪರೀಕ್ಷೆ ಫಲಿತಾಂಶದ ಪ್ರಗತಿ ಬಗ್ಗೆ ಇಲಾಖಾ ವತಿಯಿಂದ ಪ್ರಶ್ನೆ ಪತ್ರಿಕೆ ಬ್ಯಾಂಕ್, 10 ಅಂಶಗಳ ಕಾರ್ಯಕ್ರಮ, ಪ್ರತಿದಿನದ ವಿಷಯಗಳ ಕುರಿತು ಗುಂಪುಗಳನ್ನಾಗಿ ಮಾಡಿ ಫಲಿತಾಂಶ ಹೆಚ್ಚಿಸಲು ಕ್ರಮವಹಿಸಲಾಗಿದೆ ಎಂದು ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಾಮರಾಜನಗರ ರವರು ಸಭೆಯಲ್ಲಿ ತಿಳಿಸಿದರು.

ಜಿಲ್ಲೆಯಲ್ಲಿ ಕಡಿಮೆ ಫಲಿತಾಂಶವಿರುವ ಶಾಲೆಗಳನ್ನು ಗುರುತಿಸಿ, ಆ ಮಕ್ಕಳ ಸಮಸ್ಯೆಗಳ ಕುರಿತು ಪರಿಶೀಲಿಸಿ, ಉತ್ತಮ ಫಲಿತಾಂಶ ಬರುವಂತೆ ಕ್ರಮವಹಿಸಲು ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಾಮರಾಜನಗರ ರವರಿಗೆ ಸೂಚಿಸಿದರು.

**(ಕ್ರಮ: ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ)**

**ಸಮಾಜ ಕಲ್ಯಾಣ ಇಲಾಖೆ :**

ಸಮಾಜ ಕಲ್ಯಾಣ ಇಲಾಖಾ ವತಿಯಿಂದ ಸುಮಾರು 1.80 ಲಕ್ಷ ಕಾಮಗಾರಿ ನಡೆಯುತ್ತಿದ್ದು, ಹೆಚ್ಚುವರಿ 01 ಕೋಟಿ ಅನುದಾನಕ್ಕೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ವಿದ್ಯಾರ್ಥಿ ವೇತನ ನೀಡಲು ಅನುದಾನ ಲಭ್ಯವಿದ್ದು, ದಿನಾಂಕ: 30-09-2019 ರಂದು ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಿದ್ದು, ಕಳೆದ ವಾರದಲ್ಲಿ ಹಾಸ್ಟೆಲ್ ವಾರ್ಡನ್‌ಗಳ ನೇಮಕಾತಿ ಪ್ರಕ್ರಿಯೆ ನಡೆದಿದ್ದು, ಇನ್ನೂ 10 ದಿನಗಳಲ್ಲಿ ನೇಮಕಾತಿ ಮಾಡಲು ಸರ್ಕಾರದಿಂದ ಆದೇಶ ನೀಡುವ ಪ್ರಕ್ರಿಯೆಯಲ್ಲಿರುತ್ತದೆ. ಹಾಸ್ಟೆಲ್‌ಗಳಲ್ಲಿ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳ ಜೊತೆ ಒ.ಬಿ.ಸಿ ವಿದ್ಯಾರ್ಥಿಗಳಿಗೂ ಸಹ ಶೇ. 25% ರಷ್ಟು ಪ್ರವೇಶಕ್ಕೆ ಅವಕಾಶವಿರುತ್ತದೆ ಎಂದು ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಚಾಮರಾಜನಗರ ರವರು ತಿಳಿಸಿದರು.

**(ಕ್ರಮ: ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ)**

**ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ :**

ಚಾಮರಾಜನಗರ ಜಿಲ್ಲೆಯಲ್ಲಿ ಕೊಳ್ಳೇಗಾಲ, ಚಾಮರಾಜನಗರ, ಯಳಂದೂರು, ಗುಂಡ್ಲುಪೇಟೆ ತಾಲ್ಲೂಕುಗಳಲ್ಲಿ ಒಟ್ಟು 36 ವಿದ್ಯಾರ್ಥಿ ನಿಲಯಗಳಿದ್ದು, ಹೆಚ್ಚುವರಿಯಾಗಿ ಇನ್ನೂ 5 ವಿದ್ಯಾರ್ಥಿ ನಿಲಯಗಳನ್ನು ಮಂಜೂರು ಮಾಡಿಸಿ ಕೊಡುವಂತೆ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಚಾಮರಾಜನಗರ ರವರು ಸಭೆಯಲ್ಲಿ ಕೋರಿದರು.

ಅರಣ್ಯದೊಳಗೆ ಇರುವ ಆಶ್ರಮ ಶಾಲೆಗಳಲ್ಲಿ ಮ್ಕಕಳು ಶಾಲೆ ಬಿಟ್ಟು ಹೋಗುತ್ತಿರುವ ಬಗ್ಗೆ, ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಅರಣ್ಯ ಇಲಾಖೆಯವರು ಈ ಕುರಿತು ಚರ್ಚಿಸಿ, 01ನೇ ತರಗತಿಯಿಂದ 07ನೇ ತರಗತಿಗೆ ಶಾಲೆಗಳನ್ನು ಮೇಲ್ದರ್ಜೆಗೆ ಏರಿಸಿ ಅಗತ್ಯ ಕ್ರಮವಹಿಸಿ, ಶಾಲೆಗಳಲ್ಲಿ ಮಕ್ಕಳು ವಿದ್ಯಾಭ್ಯಾಸ ಕಲಿಯಲು ಬರುವಂತೆ ಕ್ರಮವಹಿಸ ಬೇಕೆಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು.

**(ಕ್ರಮ: ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕ್ಷೇತ್ರ ನಿರ್ದೇಶಕರು, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ, ಬಂಡೀಪುರ, ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕ್ಷೇತ್ರ ನಿರ್ದೇಶಕರು, ಬಿ.ಆರ್.ಟಿ ಹುಲಿ ಸಂರಕ್ಷಿತ ಪ್ರದೇಶ, ಉಪ ಅರಣ್ಯ ಸಂರಕ್ಷಣಾಧಿಕಾರಿ, ಮ್ಲೈಮಹದೇಶ್ವರ ವನ್ಯ ಜೀವಿ ವಿಭಾಗ, ಹನೂರು, ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ, ಚಾಮರಾಜನಗರ ಹಾಗೂ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಾಮರಾಜನಗರ)**

**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:**

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಜನರು ಕೇರಳಾಕ್ಕೆ ಕೆಲಸದ ನಿಮಿತ್ತ ವಲಸೆ ಹೋಗುತ್ತಿರುತ್ತಾರೆ. ಆದ್ದರಿಂದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯಗಳ ಅವಶ್ಯಕವಿರುತ್ತದೆ. ಹಾಗೂ ಬಿ.ಎ ಬಿ.ಎಡ್ ಹಾಗೂ ಸ್ನಾತಕೋತ್ತರ ಪದವೀಧರರಿಂದ ಮೊರಾರ್ಜಿ ಶಾಲೆಯ ವಿದ್ಯಾರ್ಥಿಗಳಿಗೆ ಹೆಚ್ಚಿನ ತರಬೇತಿ ನೀಡುತ್ತಿರುವುದರಿಂದ ಉತ್ತಮ ಫಲಿತಾಂಶದಲ್ಲಿ ವಿದ್ಯಾರ್ಥಿಗಳು ಉತ್ತೀರ್ಣರಾಗುತ್ತಿದ್ದಾರೆ ಎಂದು ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ರವರು ಸಭೆಯಲ್ಲಿ ತಿಳಿಸಿದರು.

ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಯಾವ ರೀತಿಯಲ್ಲಿ ಬಿ.ಎ, ಬಿ.ಎಡ್ ಹಾಗೂ ಸ್ನಾತಕೋತ್ತರ ಪದವೀಧರರಿಂದ ವಿದ್ಯಾರ್ಥಿಗಳಿಗೆ ಹೆಚ್ಚಿನ ತರಬೇತಿ ನೀಡುತ್ತಿರುತ್ತಾರೋ ಅದೇ ಕ್ರಮವನ್ನು ಅನುಸರಿಸಿ ಸಾರ್ವಜನಿಕ ಶಿಕ್ಷಣ ಇಲಾಖೆಯವರು ಸಹ ಎಸ್.ಎಸ್.ಎಲ್.ಸಿ ಫಲಿತಾಂಶವನ್ನು ಮೇಲ್ದರ್ಜೆಗೆ ಏರಿಸಲು ಸ್ನಾತಕೋತ್ತರ ಪದವೀಧರರಿಂದ ವಿದ್ಯಾರ್ಥಿಗಳಿಗೆ ಹೆಚ್ಚಿನ ತರಬೇತಿ ನೀಡಲು ಸೂಕ್ತ ಕ್ರಮವಹಿಸಬೇಕೆಂದು ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಾಮರಾಜನಗರ ರವರಿಗೆ ಸೂಚಿಸಿದರು.

**(ಕ್ರಮ: ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಜಿಲ್ಲಾ ವ್ಯವಸ್ಥಾಪಕರು, ಹಿಂದುಳಿಗೆ ವರ್ಗಗಳ ಅಭಿವೃದ್ಧಿ ಇಲಾಖೆ)**

**ಮಲೈ ಮಹದೇಶ್ವರ ವನ್ಯ ಜೀವಿ ವಿಭಾಗ, ಹನೂರು ತಾಲ್ಲೂಕು:**

ದೊಡ್ಡಾಣೆ ಗ್ರಾಮಕ್ಕೆ ಮಾರ್ಟಳ್ಳಿ ಗ್ರಾಮದಿಂದ ರಸ್ತೆ ನಿರ್ಮಿಸಲಾಗಿದ್ದು, ದೊಡ್ಡಾಣೆ ಗ್ರಾಮದಲ್ಲಿನ ಗಿರಿಜನರಿಗೆ ಮಹದೇಶ್ವರ ಬೆಟ್ಟ ಮುಖ್ಯ ರಸ್ತೆಗೆ 45 ನಿಮಿಷದಲ್ಲಿ ತಲುಪುವಂತೆ ತೋಕೆರೆಯಿಂದ ದೊಡ್ಡಾಣೆ ಗ್ರಾಮದ ವರೆಗೆ ರಸ್ತೆಯನ್ನು ನಿರ್ಮಿಸಲಾಗಿರುತ್ತದೆ ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಲೈ ಮಹದೇಶ್ವರ ಬೆಟ್ಟ ರವರು ತಿಳಿಸಿದರು.

ದೊಡ್ಡಾಣೆ ಗ್ರಾಮದಿಂದ ಮಹದೇಶ್ವರ ಬೆಟ್ಟದ ಮುಖ್ಯ ರಸ್ತೆಗೆ ರಸ್ತೆ ಸಂಪರ್ಕ ಕಲ್ಪಿಸುವ ಬಗ್ಗೆ ಅರಣ್ಯ ಇಲಾಖೆಯ ಅನುದಾನದಲ್ಲಿ ಅಥವಾ ನರೇಗಾ ಯೋಜನೆಯಲ್ಲಿ ಪರಿಶೀಲಿಸಿ, ಅವಕಾಶವಿದ್ದರೆ ರಸ್ತೆ ನಿರ್ಮಾಣ ಮಾಡಲು ಕ್ರಮಕೈಗೊಳ್ಳುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಮುಖ್ಯ ಕಾರ್ಯನಿರ್ವಾಹಣ ಅಧಿಕಾರಿ ರವರಿಗೆ ಜಿಲ್ಲಾ ಪಂಚಾಯತ್, ಹಾಗೂ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಸಭೆಯಲ್ಲಿ ಸೂಚಿಸಿದರು. ದೊಡ್ಡಾಣೆ ಗ್ರಾಮದಲ್ಲಿ ಸಂಬಂಧಿಸಿದಂತೆ ಮೂಲಭೂತ ಸೌಕರ್ಯಗಳ ಕೊರತೆಯ ಕುರಿತು ಪಟ್ಟಿ ಮಾಡಿ ತಿಳಿಸುವಂತೆ ಸೂಚಿಸಿದರು.

**(ಕ್ರಮ: ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಲೈ ಮಹದೇಶ್ವರ ವನ್ಯ ಜೀವಿ ವಿಭಾಗ, ಹನೂರು)**

ಮುಂದುವರೆದು ಈ ಹಿಂದೆ ನಡೆದ ಸಭೆಗಳಲ್ಲಿ ಯಾಂತ್ರಿಕವಾಗಿ ಮಾಹಿತಿ ನೀಡಿರುವುದನ್ನು ಗಮನಿಸಿ, ಪ್ರಸ್ತುತ ಸಭೆಯಲ್ಲಿ ಸೂಚಿಸಿರುವಂತೆ, ಇಲಾಖೆಗಳಲ್ಲಿ ಅತಿ ಮುಖ್ಯವಾಗಿ ಆಗ ಬೇಕಾಗಿರುವ ಕೆಲಸಗಳು/ಸವಾಲುಗಳು ಮತ್ತು ಜನಸಾಮಾನ್ಯರಿಗೆ ತಲುಪಿಸಲು ಕೈಗೊಂಡಿರುವ ವಿಶೇಷ ಕ್ರಮಗಳನ್ನಾಧರಿಸಿ ಪ್ರಗತಿ ವರದಿಯನ್ನು ಜಿಲ್ಲಾ ಮಟ್ಟದ ಅಧಿಕಾರಿಗಳೇ ಖುದ್ದು ತಯಾರಿಸಿ ಮುಂದಿನ ಸಭೆಯಲ್ಲಿ ಕಡ್ಡಾಯವಾಗಿ ನೀಡುವಂತೆ ಸೂಚಿಸಿ, ಮಾನ್ಯ ಸರ್ಕಾರದ ಕಾರ್ಯದರ್ಶಿಗಳಿಗೆ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**(ರಾಜೇಂದರ್ ಕುಮಾರ್ ಕಟಾರಿಯಾ)**
ಸರ್ಕಾರದ ಕಾರ್ಯದರ್ಶಿ
ಕೃಷಿ ಇಲಾಖೆ ಹಾಗೂ ಚಾಮರಾಜನಗರ
ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,
ಚಾಮರಾಜನಗರ

**Format in which district incharge Secretaries has to submit report to Chief Secretary every month**

**-: Dharwad District :-**

| Sl. No. | Points | Remarks of the Secretary |
|---|---|---|
| 01 | Name of the District | Dharwad |
| 02 | Name of the District incharge Secretary | V. Manjula |
| 03 | Visited/Tour Date | 08.08.2019 to 12.08.2019, 21.08.2019 and 26.08.2018 |
| 04 | Important points noticed and instructions given | **REVIEW OF FLOOD RELIEF ACTIVITIES ON 08/08/2019 TO 12/08/2019**<br><br>Visited flood affected places in Hubli, Dharwad Talukas and Hulikeri in Alnavar Taluka. Visited Kalwad and Arekurhatti villages in Navalgund Taluka<br><br>Visited Unkal lake area, oversaw the relief works carried out there.<br><br>Left for Saunshi and Mulavalli villages in Kundagol Taluka to oversee the relief works carried out there.<br><br>Proceeded to Shiraguppi and Ingalahalli villages in Hubli Taluka and oversaw the relief works carried out there.<br><br>Visited the flood affected areas in Dharwad city limits. Left for Neersagar in Kalghatagi Taluka oversaw the flood relief works carried out there.<br><br>Left for Hebsur in Hubli Taluka, via Tadas Road in Hubli Taluka, visited Kierekesur in Navalgund Taluka and returned to Byahatti in Hubli Taluka, to oversee the relief works. |
| | | **Date: 21/08/2019** |
| | | Acompanied the District incharge Minister in inspection of flood affected villages/areas in Alnavar, Douginala, Hoolikeri etc., and attended the review meeting under his Chairmanship. |

9/10/19

SO) BP 10/10/19

| | | |
|---|---|---|
| | | **Date: 26/08/2019** |
| | | Inspection of flood affected areas in Dharwad district along with the Central team and discussions on relief and rehabilitation measures. |
| | | **REVIEW OF THE WORKS RELATING TO HUBLI-DHARWAD SMART CITY LIMITED ON 10/08/2019 & 26/08/2019**<br><br>On review of the financial and physical progress achieved by the Hubli-Dharwad Smart City Limited (HDSCL), it is noticed that the expenditure in July has improved. In fact, it is almost twice the expenditure incurred in the month of June 2019. However, the expenditure in the month of August is very low, part of the reason being incessant rainfall during the first week of August. The HDSCL must now continuously monitor with the contractors to ensure that the cumulative shortfall up to the month of July, 2019 and the shortfall during August, 2019 are covered in the next 3 months.<br><br>The MD, HDSCL is directed to follow-up with the Janagraha and to get the drawings at the earliest. If not, the full set, stretch wise drawings may be obtained to facilitate the contractors to start the works.<br><br>As the e-procurement portal is now functioning, 3 weeks of additional time may be given for submission of bids so that there is sufficient competition.<br><br>Also inspected various works – Tolankere lake development, development of ICCC, basic services to urban poor, MSME smart roads package-4 etc. The progress must be expedited.<br><br>Regarding projects under DPR/RFP stage, the HDSCL must now move to tender stage. In case of renovation for core markets / MG market, the scope of the market shall be reduced to around Rs. 65 crore and the balance Rs. 35 crore should be earmarked for the construction of Sports complex drove-tailing with the Khelo India project.<br><br>The MD, HDSCL has been directed to take up the proposal of development of OCBS, Hubli with part funding from Smart City Limited and earmarking of funds for expansion of BRTS project towards Agricultural University and other works before |

| | | |
|---|---|---|
| | | the advisory council so that these projects can be tendered at the earliest.<br><br>**REVIEW OF THE PROGRESS OF HUBLI-DHARWAD BRTS PROJECT ON 10/08/2019**<br><br>At the outset, action taken in compliance to the instructions given in previous meeting were reviewed and subsequently other issues were taken up for discussion. During the discussion, It was mentioned by the Managing Director, Hubli-Dharwad Bus Rapid Transit System (H-D BRTS)Company Limited that a list of issues that need resolution has been prepared. On going through the list, it is found that some of the issues pertain to new works or design changes. It must be emphasized here that the designs of all depots and terminals have been more than once scrutinized by North Western Karnataka Road Transport Corporation (NWKRTC) officers. Based on their feedback, the MD, H-D BRTS Company Limited had also made many changes.<br><br>It is noticed that a recurring problem is the water leakage at the joints and at various places in the terminal and the depot infrastructure. This is a serious issue and needs to be resolved. Non installation of fare gates, leakages and cracks at Foot Over Bridges (FOBs) are other major issues. Water is also supposedly entering into the Point of Sale (PoS) and the main gate of bus stand due to improper and deficient integration between FOBs and bus stations. The MD is requested to specify a timeline to monitor and resolution of the issues. These issues need to be resolved at the earliest.<br><br>The proposal for exclusive police station for BRTS project is reported to be pending at Directorate of Urban Land Transport (DULT). The MD may follow up the same. It has been informed to me that 70 Home Guards and 80 Police Constables have been deployed for enforcement of traffic discipline in the BRTS Corridor as well as mixed traffic lanes and traffic control centre. The MD informed that the construction of footpath all along the corridor would be taken up as well as approval has obtained from DULT.<br><br>The problem of water stagnation at Toll Naka needs to be addressed on an emergent basis. The Hubli-Dharwad Smart |

| | | |
|---|---|---|
| | | City Limited (HDSCL) has been asked to do a detailed investigation and take action to prepare designs and estimates for addressing the issue of water stagnation on the MTNL from Toll Naka to Jubilee circle. The MD, H-D BRTS Co. Ltd. informed that Hubli – Dharwad Municipal Corporation (HDMC) will take action to prevent water stagnation at Slum Board, Modern Hall, SDM Dental College, Resident Hotel near Srinagar cross and overflow near Rayapur Lake. The same can be followed up with HDMC and HDSCL by KRDCL and H-D BRTS Co. Ltd.,<br><br>The NWKRTC must start utilizing the Transit Management System Module. Unless various modules are put to use, we will not know the improvements needed and the issues if any. The staff are also not trained. Instead of stating that the system is not perfect, we must start using the system to be able to clearly point out the issues for rectification. If necessary, training also needs to be repeated to the concerned staff. |

**(V. Manjula)**
Additional Chief Secretary
DPAR (Administrative Reforms)

**To:**

The Chief Secretary to Government,
Government of Karnataka.

E-ಕಛೇರಿ - 766997/2019
IDD-RE&I

<u>ಸರ್ಕಾರದ ಪ್ರಧಾನ ಕಾರ್ಯದರ್ಶಿ ಹಾಗೂ ಕಲಬುರ್ಗಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು</u>

<u>ಸೆಪ್ಟೆಂಬರ್ 2019 ರಲ್ಲಿ ಕಲಬುರ್ಗಿ ಜಿಲ್ಲೆಗೆ ಪ್ರವಾಸ ಕೈಗೊಂಡ ಬಗ್ಗೆ ವರದಿ:</u>

| ಕ್ರ..ಸಂ | ಅಂಶಗಳು | ಕಾರ್ಯದರ್ಶಿಗಳ ಷರಾ |
|---|---|---|
| 1. | ಜಿಲ್ಲೆಯ ಹೆಸರು | ಕಲಬುರ್ಗಿ ಜಿಲ್ಲೆ |
| 2. | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ಹೆಸರು | ಶ್ರೀ ಕಪಿಲ್ ಮೋಹನ್ |
| 3. | ಭೇಟಿಯಾದ /ಪ್ರವಾಸದ ದಿನಾಂಕ | 12-09-2019, 13-09-2019 |
| 4. | ಮುಖ್ಯವಾಗಿ ಗಮನಿಸಿದ ಅಂಶಗಳು ಹಾಗೂ ಸಲಹೆಗಳು | ಕಲಬುರ್ಗಿ, ಜಿಲ್ಲೆಯಲ್ಲಿ ಆಗಸ್ಟ್ ಮಾಹೆಯಲ್ಲಿ ಭೀಮಾ ನದಿಯ ಪ್ರವಾಹದಿಂದಾಗಿ ಉಂಟಾಗಿರುವ ಹಾನಿಯ ಕುರಿತು ನಡೆದ ಸಭೆಯಲ್ಲಿ, ಕಲಬುರ್ಗಿ ಅಪರ ಜಿಲ್ಲಾಧಿಕಾರಿಗಳು ಒಟ್ಟಾರೆಯಾಗಿ ಜಿಲ್ಲೆಯಲ್ಲಿ ಮೂಲ ಸೌಲಭ್ಯ ಹಾನಿಗಳ ಕುರಿತು ರೂ.3,139.4165 ಲಕ್ಷಗಳ ಅನುದಾನದ ಅವಶ್ಯಕತೆ ಇರುವುದರ ಬಗ್ಗೆ ಪ್ರಾಥಮಿಕ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿರುವುದನ್ನು ತಿಳಿಸಿದ್ದು, ಗಮನಕ್ಕೆ ಬಂದಿರುತ್ತದೆ.. |

9/10/19
10/10/19

| | |
|---|---|
| | ಕಲಬುರ್ಗಿ ಜಿಲ್ಲೆಯ ವಿಮಾನ ನಿಲ್ದಾಣದ ಅಭಿವೃದ್ಧಿಗೆ ಸಂಬಂಧಿಸಿದಂತೆ ಪರಿಶೀಲನಾ ಸಭೆ ನಡೆಸಿದ್ದು, ಸದರಿ ಸಭೆಯಲ್ಲಿ ಕಲಬುರ್ಗಿ ವಿಮಾನ ನಿಲ್ದಾಣವನ್ನು ಎ.ಎ.ಐ ಗೆ ಹಸ್ತಾಂತರಿಸುವ ಬಗ್ಗೆ ಕ್ರಮ ವಹಿಸಲು ತಿಳಿಸಿದ್ದು, ವಿಮಾನ ನಿಲ್ದಾಣ ತೆರೆಯುವ ವರೆಗೆ ರಕ್ಷಣೆ ಬಗ್ಗೆ ಕಲಬುರ್ಗಿ ಪೋಲೀಸ್ ಸೂಪರಿಂಟೆಂಡೆಂಟ್ ರವರಿಗೆ ಸೂಚಿಸಲಾಗಿರುತ್ತದೆ. ಹಾಗೂ ಜಿಲ್ಲಾಡಳಿತಕ್ಕೆ ಹೇಳಿರುವ ಎಲ್ಲಾ ಸೂಚನೆಗಳನ್ನು ಪಾಲಿಸಲು ಸಲಹೆ ನೀಡಿದ್ದು, ಲೋಕೋಪಯೋಗಿ ಇಲಾಖೆ, ಅಗ್ನಿಶಾಮಕ ಪಡೆ, ವಿಶೇಷ ಭೂಸ್ವಾಧೀನಾಧಿಕಾರಿ, ಕೆಐಎಡಿಬಿ ಕಲಬುರ್ಗಿ ತಹಶೀಲ್ದಾರ್ ರವರು ಒಟ್ಟಾಗಿ ವಿಡಿಯೋ ಕಾನ್ಫರೆನ್ಸ್ ಪರಿಶೀಲನಾ ಸಭೆ ನಡೆಸಲು ಸೂಚಿಸಲಾಗಿರುತ್ತದೆ. ಲೋಕೋಪಯೋಗಿ ಇಲಾಖೆಯವರು 4-5 ವಾರದೊಳಗೆ ಮೂಲ ಕಾಮಗಾರಿಗಳನ್ನು ಮುಗಿಸುವಂತೆ ಸೂಚಿಸಿದ್ದು, ನೂಡಲ್ ಏಜೆನ್ಸಿಯಾದ ಕೆ ಎಸ್ ಐ ಐ ಡಿ ಸಿ ಸಂಸ್ಥೆಯು ಎ ಎ ಐ ರೊಂದಿಗೆ ಸಹಕರಿಸುವಂತೆ ಸಲಹೆ ನೀಡಲಾಗಿರುತ್ತದೆ. ಹಾಗೂ ಸದರಿ ವಿಮಾನ ನಿಲ್ದಾಣಕ್ಕೆ ಬೇಕಾದ ಜಮೀನನ್ನು ಸ್ವಾಧೀನ ಪಡಿಸುವ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ. |

| | |
|---|---|
| | ಕಲಬುರ್ಗಿ ಜಿಲ್ಲೆಯ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆಯನ್ನು ನಡೆಸಿದಾಗ, ಬಹಳಷ್ಟು ಇಲಾಖೆಗಳ ಪ್ರಗತಿ ತೃಪ್ತಿದಾಯಕವಾಗಿರುವುದಿಲ್ಲ ಎಂಬ ಅಂಶವು ಗಮನಕ್ಕೆ ಬಂದಿದ್ದು ಆರ್ಥಿಕ ವರ್ಷದ 6 ತಿಂಗಳುಗಳು ಮಾತ್ರ ಬಾಕಿ ಇರುವುದರಿಂದ, ಮುಂದಿನ ಸಭೆಯ ವೇಳೆಗೆ ಎಲ್ಲಾ ಇಲಾಖೆಗಳ ಅಧಿಕಾರಿಗಳು ವೈಯಕ್ತಿಕ ಗಮನ ಹರಿಸಿ ಗುರಿಗೆ ತಕ್ಕಂತೆ ಪ್ರಗತಿ ಸಾಧಿಸಲು ತಿಳಿಸಿ ಮುಂದಿನ ಸಭೆಗೆ ಆಯ್ದ ಅಭಿವೃದ್ಧಿಗೆ ಪೂರಕವಾಗಿರುವ ಇಲಾಖೆಗಳ ಪ್ರಗತಿ ಪರಿಶೀಲನೆ ನಡೆಸಲಾಗುವುದೆಂದು ಸಭೆಯಲ್ಲಿ ತಿಳಿಸಲಾಗಿರುತ್ತದೆ. |

(ಕಪಿಲ್ ಮೋಹನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ,
ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ,ಹಾಗೂ
ಕಲಬುರಗಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು.

(1) ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ,ವಿಧಾನ ಸೌಧ,ಬೆಂಗಳೂರು

(2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಿಆಸುಇ (ಆಡಳಿತ ಸುಧಾರಣೆ) ಬಹುಮಹಡಿ ಕಟ್ಟಡ,ಬೆಂಗಳೂರು.

ಡಾ: ಜಿ. ಕಲ್ಪನ, ಭಾ.ಆ.ಸೇ.,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಕರ್ನಾಟಕ ಸರ್ಕಾರದ ಸಚಿವಾಲಯ
ದೂರವಾಣಿ : ಕಛೇರಿ: 22255827
22032589
ಫ್ಯಾಕ್ಸ್: 080-22252499
ಇಮೇಲ್: prs-yesd@karnataka.gov.in
ysdsec@gmail.com
2ನೇ ಮಹಡಿ, 2ನೇ ಹಂತ
ಬಹುಮಹಡಿಗಳ ಕಟ್ಟಡ, ಬೆಂಗಳೂರು-560001

ಸಂಖ್ಯೆ: ಯುಸಕ್ರೀ 60 ಅಮುಕಾ 2019 ದಿನಾಂಕ:26-09-2019

**ಟಿಪ್ಪಣಿ**

ವಿಷಯ: ಮೈಸೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ಮೈಸೂರು ಜಿಲ್ಲೆಗೆ ಪ್ರವಾಸ ಕೈಗೊಂಡಿರುವ ಬಗ್ಗೆ ವಿವರ.

*****

| ಕ್ರ.ಸಂ. | ಅಂಶಗಳು | ಕಾರ್ಯದರ್ಶಿಗಳ ಷರಾ |
|---|---|---|
| 1 | ಜಿಲ್ಲೆಯ ಹೆಸರು | ಮೈಸೂರು |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ಹೆಸರು | ಡಾ: ಜಿ.ಕಲ್ಪನ |
| 3 | ಭೇಟಿಯಾದ/ ಪ್ರವಾಸದ ದಿನಾಂಕ: | 29-08-2019, 06-09-2019, 07-09-2019, 12-09-2019, 13-09-2019 ಮತ್ತು 20-09-2019 |
| 4 | ಮುಖ್ಯವಾಗಿ ಗಮನಿಸಿದ ಅಂಶಗಳು ಹಾಗೂ ಸಲಹೆಗಳು | ಮುಂದಿನ ಕಂಡಿಕೆಗಳಲ್ಲಿ ವಿವರಿಸಲಾಗಿದೆ. |

ಜಿಲ್ಲೆಯ ಅಭಿವೃದ್ಧಿ ಹಾಗೂ ಯೋಜನಾ ಕಾರ್ಯಕ್ರಮಗಳ ಪರಿಶೀಲನೆಗಾಗಿ ದಿನಾಂಕ: 29-08-2019ರಂದು ಮಾನ್ಯ ವಸತಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಮೈಸೂರು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ತಾಲ್ಲೂಕು, ಜಿಲ್ಲೆ, ವಿಭಾಗ ಮತ್ತು ರಾಜ್ಯ ಮಟ್ಟದ ದೇಸರಾ ಕ್ರೀಡಾಕೂಟದ ಸಂಘಟನೆ ಕುರಿತು ಸುದೀರ್ಘವಾಗಿ ಚರ್ಚಿಸಲಾಯಿತು.

ದಿನಾಂಕ:06-09-2019ರಂದು ಮಾನ್ಯ ವಸತಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ದಸರಾ ಸಿ.ಎಂ.ಕಪ್ ಕ್ರೀಡಾಕೂಟ ಆಯೋಜನೆ ಹಾಗೂ ಮಾನ್ಯತೆ ನೀಡುವ ಕುರಿತು ಚರ್ಚಿಸಲಾಯಿತು.

ದಿನಾಂಕ:07-09-2019 ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಮಾನ್ಯ ವಸತಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಕಬಿನಿ ಜಲಾಶಯಕ್ಕೆ ಬಾಗಿನ ಅರ್ಪಿಸುವ ಕಾರ್ಯಕ್ರಮದಲ್ಲಿ ಭಾಗವಹಿಸಲಾಯಿತು.

...2

ದಿನಾಂಕ:12-09-2019ರಂದು ಮಾನ್ಯ ವಸತಿ ಸಚಿವರು ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಕಛೇರಿಯಲ್ಲಿ ಆಯೋಜಿಸಲಾದ ದಸರಾ-2019 ಸಿದ್ದತೆ ಕುರಿತಂತೆ ಮೈಸೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಪ್ರಾದೇಶಿಕ ಆಯುಕ್ತರು, ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಮೈಸೂರು ನಗರ ಪೊಲೀಸ್ ವರಿಷ್ಠಾಧಿಕಾರಿಗಳು, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಮಹಾನಗರ ಪಾಲಿಕೆ ಆಯುಕ್ತರು, ಮುಡಾ ಆಯುಕ್ತರು ಹಾಗೂ ಇತರೇ ಪ್ರಮುಖ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಭಾಗವಹಿಸಲಾಯಿತು.

ತದನಂತರ 2019ನೇ ಸಾಲಿನ ದಸರಾ ಕ್ರೀಡಾಕೂಟಕ್ಕೆ ಮಾನ್ಯತೆ ನೀಡುವ ಕುರಿತು ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಂಟಿ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಅಬಕಾರಿ ಉಪ ಆಯುಕ್ತರು, ಮೈಸೂರು ಜಿಲ್ಲೆ, ಕ್ರೆಡಿಟ್-ಐ ಸಂಸ್ಥೆಯ ಮುಖ್ಯಸ್ಥರು, ಮೈಸೂರು, ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮೈಸೂರು ಜಿಲ್ಲೆ, ಹಾಗೂ ಸಲಹೆಗಾರರು, ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ ಇವರುಗಳೊಂದಿಗೆ ದಿನಾಂಕ: 12-09-2019 ಅಪರಾಹ್ನದಂದು ಸುದೀರ್ಘ ಸಭೆ ನಡೆಸಲಾಯಿತು.

ದಿನಾಂಕ:13-09-2019ರಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ಮೈಸೂರು ಜಿಲ್ಲೆಯಲ್ಲಿ ದಸರಾ ಕ್ರೀಡಾ ಉಪಸಮಿತಿ ಸದಸ್ಯರಾದ ಅಬಕಾರಿ ಉಪ ಆಯುಕ್ತರು, ಮೈಸೂರು, ಉಪ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು, ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮೈಸೂರು ಜಿಲ್ಲೆ ಮತ್ತು ಸಂಬಂಧಿಸಿದ ತಾಂತ್ರಿಕ ಸಿಬ್ಬಂದಿಗಳೊಂದಿಗೆ ಮೈಸೂರಿನಲ್ಲಿರುವ 1) ಚಾಮುಂಡಿ ವಿಹಾರ ಕ್ರೀಡಾಂಗಣದ - ಹಾಕಿ ಅಂಕಣ, ಒಳಾಂಗಣ ಕ್ರೀಡಾಂಗಣ ಮತ್ತು ಅಥ್ಲೆಟಿಕ್ ಸಿಂಥೆಟಿಕ್ ಅಂಕಣ 2) ಸೇಂಟ್ ಫಿಲೋಮಿನ ಕಾಲೇಜಿನ ಒಳಾಂಗಣ ಕ್ರೀಡಾಂಗಣದಲ್ಲಿನ ಫೆನ್ಸಿಂಗ್ ಅಂಕಣ ಮತ್ತು ಫುಟ್‌ಬಾಲ್ ಕ್ರೀಡಾಂಗಣ 3) ಕುಪ್ಪಣ್ಣ ಪಾರ್ಕ್ ಮತ್ತು ಡಾ: ವಿಷ್ಣುವರ್ದನ್ ಉದ್ಯಾನವನದಲ್ಲಿ ಸಾಹಸ ಕ್ರೀಡೆಗಳ ಪ್ರದರ್ಶನ ಕುರಿತು ಹೆಚ್ಚಿನ ಆದ್ಯತೆ ನೀಡಿ ಪ್ರವಾಸಿಗರನ್ನು ಮತ್ತಷ್ಟು ಉತ್ತಮ ಸೌಲಭ್ಯಗಳೊಂದಿಗೆ ಆಕರ್ಷಿಸುವಂತೆ ಸಲಹೆ ನೀಡಲಾಯಿತು. 4) ಮೈಸೂರು ವಿಶ್ವವಿದ್ಯಾನಿಲಯದ ಸ್ಪೋರ್ಟ್ಸ್ ಪೆವಿಲಿಯನಲ್ಲಿ ಫೆನ್ಸಿಂಗ್ ಕ್ರೀಡೆ ಆಯೋಜನೆ ಕುರಿತು ಡಾ:ಪಿ.ಕೃಷ್ಣಯ್ಯ ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ ಇವರೊಂದಿಗೆ ಚರ್ಚಿಸಲಾಯಿತು ಹಾಗೂ ವಾಲಿಬಾಲ್ ಮೈದಾನದ ಪರಿಶೀಲನೆ ಮಾಡಲಾಯಿತು ಮತ್ತು ಸದರಿ ಸ್ಥಳ ಹಾಗೂ ಕ್ರೀಡೆಗಳ ಉತ್ತಮ ಪಡಿಸುವ ನಿಟ್ಟಿನಲ್ಲಿ ಸಲಹೆಗಳನ್ನು ನೀಡಲಾಯಿತು. 5) ನ್ಯಾಷನಲ್ ಇನ್‌ಸ್ಟಿಟೂಟ್ ಆಫ್ ಇಂಜಿನಿಯರಿಂಗ್ ಡೈಮಂಡ್ ಜುಬ್ಲಿ ಸ್ಪೋರ್ಟ್ಸ್ ಇಲ್ಲಿನ ಬಾಸ್ಕೆಟ್‌ಬಾಲ್ ಒಳಾಂಗಣ ಕ್ರೀಡಾಂಗಣ ಮತ್ತು ಹೊರಾಂಗಣ ಕ್ರೀಡಾಂಗಣದ ಸೌಲಭ್ಯಗಳ ಪರಿವೀಕ್ಷಣೆ ನಡೆಸಲಾಯಿತು ಹಾಗೂ ಸದರಿ ಇನ್‌ಸ್ಟಿಟೂಟ್‌ನಲ್ಲಿರುವ ಸೌಲಭ್ಯಗಳನ್ನು ದಸರಾ ಕ್ರೀಡಾಕೂಟದ ಸ್ಪರ್ಧೆಗಳಿಗೆ ಉಪಯೋಗಿಸಿಕೊಳ್ಳುವಂತೆ ಇಲಾಖಾ ಅಧಿಕಾರಿಗಳಿಗೆ ತಿಳಿಸಲಾಯಿತು. 6) ಮೈಸೂರಿನ ಜೆ.ಪಿ.ನಗರದ ಪುಟ್ಟರಾಜ ಗವಾಯಿ ಕ್ರೀಡಾಂಗಣಕ್ಕೆ ಭೇಟಿ ನೀಡಿ ಈಜುಕೊಳ ಮತ್ತು ಬಾಸ್ಕೆಟ್‌ಬಾಲ್ ಅಂಕಣ ಮತ್ತು ಹ್ಯಾಂಡ್‌ಬಾಲ್ ಅಂಕಣಗಳನ್ನು ಪರಿವೀಕ್ಷಿಸಲಾಯಿತು.

ದಿನಾಂಕ:20-09-2019ರಂದು ಮಾನ್ಯ ವಸತಿ ಸಚಿವರು ಮತ್ತು ಮೈಸೂರು ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಮಾನ್ಯ ಸಂಸದರು, ಮೈಸೂರು ಕ್ಷೇತ್ರ, ಮಾನ್ಯ ಶಾಸಕರು, ಚಾಮರಾಜ ಮತಕ್ಷೇತ್ರ, ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ ಮತ್ತು ಕಾರ್ಯದರ್ಶಿ, ಕುಸ್ತಿ ಉಪ ಸಮಿತಿ, ಇವರೊಂದಿಗೆ 'ರಾಜ್ಯ ದಸರಾ ಕ್ರೀಡಾಕೂಟ ಮತ್ತು ಸಾಹಸ ಕ್ರೀಡೋತ್ಸವಕ್ಕೆ ಸಂಬಂಧಿಸಿದಂತೆ ವೆಬ್‌ಸೈಟ್ ಅನಾವರಣ ಮತ್ತು ಪೋಸ್ಟರ್‌ಗಳ ಬಿಡುಗಡೆ ಸಂಬಂಧದ ಪತ್ರಿಕಾಗೋಷ್ಠಿಯಲ್ಲಿ' ಭಾಗವಹಿಸಲಾಯಿತು.

...3

ತದನಂತರ, ದಿನಾಂಕ:20-09-2019ರಂದು ಅಪರಾಹ್ನ ಮಾನ್ಯ ವಸತಿ ಸಚಿವರು ಮತ್ತು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಮಾನ್ಯ ಸಂಸದರು, ಮೈಸೂರು, ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಪೋಲೀಸ್ ಅಧೀಕ್ಷಕರು, ಮೈಸೂರು ಜಿಲ್ಲೆ ಮತ್ತು ಜಂಟಿ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಇವರುಗಳೊಂದಿಗೆ ಮೈಸೂರು ಅರಮನೆ ಮಂಡಳಿಯಲ್ಲಿ ದಸರಾ ಸಿದ್ದತೆ ಕುರಿತು ನಡೆದ ಸಭೆಯಲ್ಲಿ ಭಾಗವಹಿಸಲಾಯಿತು.

ಅವಗಾಹನೆಗಾಗಿ ಸಲ್ಲಿಸಿದೆ.

Kalpana. G

(ಡಾ. ಜಿ. ಕಲ್ಪನ)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಸರ್ಕಾರದ ಮುಖ್ಯ ಕಾರ್ಯದರ್ಶಿ,
ವಿಧಾನಸೌಧ,
ಬೆಂಗಳೂರು.

**ಡಾ. ಶಾಲಿನಿ ರಜನೀಶ್,** ಭಾ.ಆ.ಸೇ.
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಇಲಾಖೆ

**ಕರ್ನಾಟಕ ಸರ್ಕಾರ**

ಕರ್ನಾಟಕ ಸರ್ಕಾರದ ಸಚಿವಾಲಯ
ಕೊಠಡಿ ಸಂಖ್ಯೆ: 701, 7ನೇ ಮಹಡಿ
3ನೇ ಹಂತ, ಬಹುಮಹಡಿಗಳ ಕಟ್ಟಡ
ಬೆಂಗಳೂರು – 560 001
ದೂ : 080–22252352, 22032726
ಇ–ಮೇಲ್: prsplanning@gmail.com

ACS/AR/E-772923

ಸಂಖ್ಯೆ: ಯೋಇ/141/ಪ್ರಕಾ/2019 ದಿನಾಂಕ: 03.10.2019

**ಮಾನ್ಯರೇ,**

ತಮ್ಮ ಸುತ್ತೋಲೆ ಪತ್ರ ಸಂಖ್ಯೆ: ಸಿಆಸುಇ 19 ಇಸಪ 2018, ದಿನಾಂಕ: 11.07.2018 ರಲ್ಲಿ ತಿಳಿಸಿರುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ತುಮಕೂರು ಜಿಲ್ಲೆಗೆ ಸಂಬಂಧಿಸಿದಂತೆ ಭೇಟಿ ನೀಡಿದ ವರದಿಯನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

| ಕ್ರಮ ಸಂಖ್ಯೆ | ಅಂಶಗಳು | ಕಾರ್ಯದರ್ಶಿಗಳ ಷರಾ |
|---|---|---|
| 1 | ಜಿಲ್ಲೆಯ ಹೆಸರು | ತುಮಕೂರು |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ಹೆಸರು | ಡಾ: ಶಾಲಿನಿ ರಜನೀಶ್,ಭಾ.ಆ.ಸೇ. |
| 3 | ಭೇಟಿಯಾದ/ಪ್ರವಾಸದ ದಿನಾಂಕ | ದಿನಾಂಕ: 19.09.2019 |
| 4 | ಮುಖ್ಯವಾಗಿ ಗಮನಿಸಿದ ಅಂಶಗಳು ಹಾಗೂ ಸಲಹೆಗಳು | ಜಿಲ್ಲಾ ಭೇಟಿಯ ವರದಿಯ ಪ್ರತಿ ಲಗತ್ತಿಸಿದೆ |

**ಗೌರವಗಳೊಂದಿಗೆ,**

ತಮ್ಮ ವಿಶ್ವಾಸಿ,

**ಶ್ರೀಮತಿ ವಿ.ಮಂಜುಲ, ಭಾ.ಆ.ಸೇ.,**
**ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,**
**ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ** (ಆಸು)

DS

9/10/19

9/10/19

10/10/19

# ತುಮಕೂರು ಪ್ರವಾಸದ ವರದಿ

**ದಿನಾಂಕ:19.09.2019 ರಂದು ನಾನು ತುಮಕೂರು ಜಿಲ್ಲೆಗೆ ಭೇಟಿ ನೀಡಿರುತ್ತೇನೆ. ಅದರಂತೆ ಪ್ರವಾಸದಲ್ಲಿ ಕೈಗೊಂಡ ಸಭೆಯ ವಿವರಗಳು.**

01. ಬೆಳಗ್ಗೆ 10.30 ಗಂಟೆಗೆ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಯೋಜನೆಯಡಿ ಅನುಷ್ಠಾನಗೊಳ್ಳುತ್ತಿರುವ ಎಲ್ಲಾ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಪಾಲ್ಗೊಳ್ಳಲಾಯಿತು. ಸಭೆಯಲ್ಲಿ ನಡೆದ ಪ್ರಮುಖ ಅಂಶಗಳು ಈ ಕೆಳಕಂಡಂತಿವೆ.

**ರಿಂಗ್ ರಸ್ತೆ ಅಭಿವೃದ್ಧಿ–** ತುಮಕೂರು ವರ್ತುಲ ರಿಂಗ್ ರಸ್ತೆ ಅಭಿವೃದ್ದಿ ಸಂಬಂಧವಾಗಿ ಕಾಮಗಾರಿಯು ಮಂದಗತಿಯಾಗಿ ನಡೆಯುತ್ತಿದ್ದು, ಈ ಅಂಶವನ್ನು ಮಾನ್ಯ ಸಚಿವರು ಪ್ರಶ್ನಿಸಿರುತ್ತಾರೆ. ಅದರಂತೆ ಕಾಮಗಾರಿಗೆ ಟೆಂಡರ್ ಕರೆದು ಈಗಾಗಲೇ ನಾಲ್ಕು ತಿಂಗಳು ಕಳೆದರೂ ಗುತ್ತಿಗೆದಾರರು ಇತರೆ ಇಲಾಖೆಯವರು ಸಹಕರಿಸುತ್ತಿಲ್ಲವೆಂದು ನೆಪ ಹೂಡಿರುತ್ತಾರೆ. ಆದ್ದರಿಂದ ಈ ಅಂಶವನ್ನು ಗಮನಿಸಿದ ಮಾನ್ಯ ಸಚಿವರು ಯಾವ ಕುರುಡು ಕಾರಣ ನೀಡದೆ ಡಿಸೆಂಬರ್ ಮಾಹೆಯೊಳಗೆ ಸಂಪೂರ್ಣ ರಿಂಗ್ ರಸ್ತೆ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಸೂಚಿಸಿದರು. ಹಾಗಾಗದಿದ್ದಲ್ಲಿ ಈಗಿರುವ ಗುತ್ತಿಗೆದಾರರ ಟೆಂಡರ್ ಅನ್ನು ರದ್ದುಗೊಳಿಸಿ ಸದರಿಯವರಿಗೆ ದಂಡ ವಿಧಿಸಲು ಕ್ರಮ ವಹಿಸುವಂತೆ ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಲಾಯಿತು.

**(ಕ್ರಮ: ವ್ಯವಸ್ಥಾಪಕ ನಿರ್ದೇಶಕರು, ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್)**

ಆನಂತರ ನಗರದ ಹಲವೆಡೆ ನಡೆಯುತ್ತಿರುವ ಸ್ಮಾರ್ಟ್ ರೋಡ್ ಕಾಮಗಾರಿ ಪರಿಶೀಲನೆ ನಡೆಯುತ್ತಿದ್ದು ಸದರಿ ಕಾಮಗಾರಿಯಲ್ಲಿ ಬೆಸ್ಕಾಂ, ಬಿ.ಎಸ್.ಎನ್.ಎಲ್, KUWS&DB ಹಲವು ಇಲಾಖೆಗಳ ಪೈಪ್‌ಗಳು/ ಪೋಲ್ಸ್ ಸ್ಥಳಾಂತರ ಮಾಡದೆ ಇರುವುದರಿಂದ ವಿಳಂಬವಾಗಿದ್ದು, ಈ ಸಂಬಂಧ, ಸಂಬಂಧ ಪಟ್ಟ ಇಲಾಖೆ ಅಧಿಕಾರಿಗಳಿಗೆ ಕೂಡಲೆ ಅಗತ್ಯ ಕ್ರಮ ವಹಿಸುವಂತೆ ಸೂಚಿಸಲಾಯಿತು. ಸ್ಮಾರ್ಟ್ ರೋಡ್ ಕಾಮಗಾರಿಯನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸದೆ ಇದ್ದಲ್ಲಿ ಕಾಮಗಾರಿಗಳು ನಡೆಯುವ ಸ್ಥಳಗಳಲ್ಲಿ ಸುರಕ್ಷಿತ ಕ್ರಮ ಅಳವಡಿಸದೆ ಇದ್ದಲ್ಲಿ ಸಾರ್ವಜನಿಕರಿಗೆ ಸಂಚಾರದಟ್ಟಣೆ ಸಮಸ್ಯೆ ಉಂಟಾಗದಂತೆ ನೋಡಿಕೊಳ್ಳಲು ಮಾನ್ಯ ಸಚಿವರು ಸೂಚಿಸಿದರು. ಈ ಅಂಶವನ್ನು ಗಮನಿಸಿ ಇವೆಲ್ಲವನ್ನು ಪಾಲಿಸುವಲ್ಲಿ ಗುತ್ತಿಗೆದಾರರ ಮೇಲೆ ಕೂಡಲೇ ಕ್ರಮಕೈಗೊಳ್ಳುವಂತೆ ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಲಾಯಿತು. ನಂತರ ಬುಗುಡನಹಳ್ಳಿಯಿಂದ ತುಮಕೂರಿನ ಅಮಾನಿಕೆರೆಗೆ ನೀರನ್ನು ತುಂಬಿಸುವ ಯೋಜನೆಗೆ ಸಂಬಂಧಿಸಿದಂತೆ ಮಾನ್ಯ ಸಚಿವರು ಪರಿಶೀಲಿಸಿದ್ದು, ತುರ್ತಾಗಿ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ತುಮಕೂರು ಇವರಿಗೆ ಸೂಚಿಸಿದರು. ಬುಗುಡನಹಳ್ಳಿ ಕೆರೆಯಿಂದ ಪ್ರಸ್ತುತ 14 ಎಮ್.ಎಲ್.ಡಿ ಪ್ರಮಾಣದ ನೀರು ಖರ್ಚಾಗುತ್ತಿರುವ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಕೂಡಲೇ ಮಾನ್ಯ ಸಚಿವರು ಕಛೇರಿಗೆ ಸಲ್ಲಿಸಲು ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ತುಮಕೂರು ಇವರಿಗೆ ತಿಳಿಸಲಾಯಿತು.

(ಕ್ರಮ: ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ನಗರ ನೀರುಸರಬರಾಜು ಮತ್ತು ಒಳಚರಂಡಿ ಮಂಡಳಿ, ತುಮಕೂರು)

ಹಾಗೆಯೇ ಉಳಿದ ಎಲ್ಲಾ ಯೋಜನೆಗಳ ಮಾಹಿತಿಯನ್ನು ಪಡೆದು ವಿಳಂಬ ಮಾಡದೆ ತುರ್ತುಗತಿಯಲ್ಲಿ ಪೂರ್ಣಗೊಳಿಸುವಂತೆ ಮಾನ್ಯ ಸಚಿವರು ಸೂಚಿಸಿದರು.

02. ಮಧ್ಯಾಹ್ನ 1 ಗಂಟೆಗೆ ಜಿಲ್ಲಾಮಟ್ಟದ ಅಧಿಕಾರಿಗಳೊಂದಿಗೆ, ಮಾನ್ಯ ಸಚಿವರು ಜಿಲ್ಲಾಧಿಕಾರಿಗಳ ಕಛೇರಿಯಲ್ಲೇ ಸಭೆಯನ್ನು ಕೈಗೊಂಡಿದ್ದರು ಸದರಿ ಸಭೆಯಲ್ಲಿ **ಮಾನ್ಯ ಸಚಿವರು ಜಿಲ್ಲೆಯ ಅಭಿವೃದ್ಧಿ ಸಂಬಂಧಿಸಿದಂತೆ ಜಂಟಿ ನಿರ್ದೇಶಕರು, ಕೃಷಿರವರನ್ನು ಯಾಕೆ ಕೇಂದ್ರ ಸರ್ಕಾರದ ಕೃಷಿ ಹೊಂಡ ಹಾಗೂ ಜಲಾನಯನ ಯೋಜನೆ ಹಣ ಖರ್ಚು ಮಾಡದೆ ವಾಪಸ್ಸು ಕಳಿಸಿದ್ದು ಎಂದು ಪ್ರಶ್ನಿಸಿದಾಗ ಸರಿಯಾಗಿ ಉತ್ತರ ನೀಡದೆ ಮುಜುಗರ**

**ಅನುಭವಿಸುವಂತೆ ಮಾಡಿರುತ್ತಾರೆ.** ಈ ಸಂಬಂಧ ಮಾನ್ಯ ಸಚಿವರು ಕೋಪಗೊಂಡು ಸೆಪ್ಟಂಬರ್ ಮಾಹೆಯ ಅಂತ್ಯದಲ್ಲಿ ಅಥವಾ ಅಕ್ಟೋಬರ್ ಮೊದಲನೇ ವಾರದಲ್ಲಿ ನಡೆಯುವ ಕೆ.ಡಿ.ಪಿ ಸಭೆಗೆ ಜಿಲ್ಲಾಮಟ್ಟದ ಎಲ್ಲಾ ಅಧಿಕಾರಿಗಳು ಸಂಪೂರ್ಣ ಮಾಹಿತಿಯೊಂದಿಗೆ ಹಾಜರಾಗಿ, ಸಭೆಯಲ್ಲಿ ಕೇಳಲಾಗುವ ಪ್ರಶ್ನೆಗಳಿಗೆ ಅವರೇ ಉತ್ತರಿಸತಕ್ಕದ್ದು ಎಂದು ಸೂಚಿಸಿದರು. ಜಿಲ್ಲೆಯಲ್ಲಿ ಮಳೆ ಬಾರದೇ ಇರುವುದರಿಂದ ಸಮಗ್ರ ಕೃಷಿ ಪದ್ಧತಿ ಯೋಜನೆಯನ್ನು ಅನುಷ್ಠಾನಗೊಳಿಸಿದ್ದು ಮಳೆ ಇಲ್ಲದೆ ಬೆಳೆಗಳ ಬಗ್ಗೆ ಜಿಲ್ಲೆಯ ರೈತರಿಗೆ ಮಾಹಿತಿ ನೀಡಲಾಗುತ್ತಿರುವ ವಿಷಯವನ್ನು ಮಾನ್ಯ ಸಚಿವರಿಗೆ ನೀಡಲಾಯಿತು. ಮಾನ್ಯ ಸಚಿವರು ತಿಳಿಸಿರುವಂತೆ ಕೆ.ಡಿ.ಪಿ ಸಭೆಗೆ ಕಡ್ಡಾಯವಾಗಿ ಜಿಲ್ಲಾಮಟ್ಟದ ಅಧಿಕಾರಿಗಳು ಅವರವರ ಇಲಾಖೆಗೆ ಸಂಬಂಧಿಸಿದ ಯೋಜನೆ ಅನುಷ್ಠಾನ, ಅನುದಾನ ವಿವರ, ಸ್ಥಳ ಪರಿಶೀಲನಾ ಮಾಹಿತಿ ಸೇರಿದಂತೆ ಎಲ್ಲಾ ದಾಖಲೆಗಳೊಂದಿಗೆ ಸಭೆಗೆ ಹಾಜರಾಗಲು ಸೂಚಿಸಲಾಯಿತು.

**(ಕ್ರಮ: ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು)**

03. ಮಧ್ಯಾಹ್ನ 2 ಗಂಟೆಗೆ ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ನ ಮಂಡಳಿ ನಿರ್ದೇಶಕರ ಸಭೆಯನ್ನು ಸ್ಮಾರ್ಟ್ ಸಿಟಿ ಕಛೇರಿಯಲ್ಲಿ ಕೈಗೊಳ್ಳಲಾಯಿತು. ಸದರಿ ಸಭೆಯಲ್ಲಿ ಅದೇ ದಿನಾಂಕದಂದು ಬೆಳಿಗ್ಗೆ ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯನ್ನು ಗಮನದಲ್ಲಿಟ್ಟುಕೊಂಡು, ಕೂಡಲೇ ಗುತ್ತಿಗೆದಾರರಿಗೆ ನಿಗದಿತ ಸಮಯದಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸುವುದಾದರೆ ಮಾತ್ರ ಮುಂದುವರೆಸತಕ್ಕದ್ದು, ಹಾಗಾಗದಿದ್ದಲ್ಲಿ ಟೆಂಡರ್‌ನ್ನು ರದ್ದುಪಡಿಸಿ ಮುಂದಿನ ಸೂಕ್ತ ಕ್ರಮವನ್ನು ವಹಿಸುವಂತೆ ವ್ಯವಸ್ಥಾಪಕ ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಿಗೆ ತಿಳಿಸಲಾಯಿತು. ಸದರಿ ಸಭೆಗೆ National Education Foundation ನ ಅಧ್ಯಕ್ಷರಾದ ಶ್ರೀ ಎಮ್.ಬಿ ಗುರುರಾಜ್ ಹಾಜರಾಗಿ ಕೌಶಲ್ಯಾಭಿವೃದ್ಧಿ ಬಗ್ಗೆ ಪ್ರಸ್ತಾವನೆಯನ್ನು ಮಂಡಿಸಿದರು. ಈ ಉದ್ದೇಶಕ್ಕಾಗಿ ಶೇ. 80 ರಷ್ಟು ಅನುದಾನವನ್ನು ಸದರಿಯವರ ಸಂಸ್ಥೆಯಿಂದ ಭರಿಸುವುದಾಗಿ ಹಾಗೂ ಉಳಿದ ಶೇ.20 ರಷ್ಟು ಅನುದಾನವನ್ನು ತುಮಕೂರು ಕೌಶಲ್ಯಾಭಿವೃದ್ಧಿ ಕೇಂದ್ರ ಭರಿಸಬಹುದಾಗಿದೆ ಎಂದು ತಿಳಿಸಿದರು. ಈ ಪ್ರಸ್ತಾವನೆಯನ್ನು ಮಂಡಳಿ ಸಭೆಯಲ್ಲಿ ಚರ್ಚಿಸಿ ಕೌಶಲ್ಯಾಭಿವೃದ್ಧಿ ಇಲಾಖೆಯಿಂದ ಶೇ. 20% ರಷ್ಟು ಅನುದಾನವನ್ನು ಭರಿಸಲು ಮಂಡಳಿಯು ತೀರ್ಮಾನಿಸಲಾಯಿತು. ಇದೇ ಮಾದರಿಯಲ್ಲಿ ಈಗಾಗಲೇ National Skill Development Centre ನೊಂದಿಗೆ ಮಾಡಿಕೊಂಡಿರುವ ಒಪ್ಪಂದದಲ್ಲಿ ಒಟ್ಟು ಹತ್ತು ಲಕ್ಷ ಅಭ್ಯರ್ಥಿಗಳಿಗೆ ತರಬೇತಿ ನೀಡಲು ಶೇ. 80% ರಷ್ಟು ಅನುದಾನವನ್ನು NEF-USA ರವರೇ ಭರಿಸುತ್ತಿದ್ದು ಮತ್ತು ಎರಡು ಲಕ್ಷ ಮಹಿಳಾ ಅಭ್ಯರ್ಥಿಗಳಿಗೆ ಶೇ. 100% ರಷ್ಟು ಭರಿಸುತ್ತಿದ್ದಾರೆ ಎಂದು ಸಭೆಯಲ್ಲಿ ತಿಳಿಸಿರುತ್ತಾರೆ. ಆದ್ದರಿಂದ National Education Foundation ತಿಳಿಸಿರುವ ಪ್ರಸ್ತಾವನೆಯನ್ನು ಕೂಡಲೇ ವಿಶ್ವವಿದ್ಯಾಲಯದೊಂದಿಗೆ ಜಿಲ್ಲೆಯಾದ್ಯಂತ ನಿರ್ವಹಿಸಲು ಸೂಚಿಸಲಾಯಿತು.

**(ಕ್ರಮ: 01. ಕುಲಪತಿಗಳು, ತುಮಕೂರು ವಿಶ್ವವಿದ್ಯಾಲಯ, ತುಮಕೂರು**
**02. ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು.**
**03. ವ್ಯವಸ್ಥಾಪಕ ನಿರ್ದೇಶಕರು, ತು.ಸ್ಮಾ.ಸಿ ತುಮಕೂರು.**
**04. ಮುಖ್ಯ ಅಭಿಯಂತರರು,ತು.ಸ್ಮಾ.ಸಿ, ತುಮಕೂರು.)**

**(ಡಾ. ಶಾಲಿನಿ ರಜನೀಶ್ ಭಾ.ಆ.ಸೇ)**
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಯೋಜನೆ, ಕಾರ್ಯಕ್ರಮ ಸಂಯೋಜನೆ ಹಾಗೂ
ಸಾಂಖ್ಯಿಕ ಇಲಾಖೆ ಮತ್ತು ತುಮಕೂರು ಜಿಲ್ಲಾ
ಉಸ್ತುವಾರಿ ಕಾರ್ಯದರ್ಶಿಗಳು ಮತ್ತು ಅಧ್ಯಕ್ಷರು,
ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್.

**ಲಗತ್ತು:**ದಿನಾಂಕ: 19.09.2019 ರ ಪ್ರವಾಸದ ಪತ್ರಿಕೆ ಪ್ರಕಟಣೆಯನ್ನು ಈ ಪತ್ರದೊಂದಿಗೆ ಲಗತ್ತಿಸಿದೆ.

ACS Dpr

**ದಿನಾಂಕ 25.09.2019 ರಂದು ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಪ್ರವಾಸೋದ್ಯಮ ಇಲಾಖೆ ಬೆಂಗಳೂರು ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಯಾದಗಿರಿ ರವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಜರುಗಿದ ಸಭೆಯ ನಡುವಳಿಗಳು.**

**ಸ್ಥಳ:- ಜಿಲ್ಲಾಧಿಕಾರಿಗಳ ಕಾರ್ಯಾಲಯ, ಯಾದಗಿರಿ.**

| | |
|---|---|
| ಅಧ್ಯಕ್ಷತೆ:- | ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಪ್ರವಾಸೋದ್ಯಮ ಇಲಾಖೆ ಬೆಂಗಳೂರು ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಯಾದಗಿರಿ |
| ಉಪಸ್ಥಿತರಿದ್ದ ಅಧಿಕಾರಿ/ಸಿಬ್ಬಂದಿಗಳು:- | ಶ್ರೀ ಕೂರ್ಮಾ ರಾವ್ ಎಂ. ಭಾ.ಆ.ಸೇ ಜಿಲ್ಲಾಧಿಕಾರಿಗಳು, ಯಾದಗಿರಿ. ಶ್ರೀಮತಿ ಶಿಲ್ಪಾ ಶರ್ಮಾ ಭಾ.ಆ.ಸೇ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಯಾದಗಿರಿ. ಶ್ರೀ ಪ್ರಕಾಶ್ ಜಿ. ರಜಪೂತ್, ಕ.ಆ.ಸೇ ಅಪರ ಜಿಲ್ಲಾಧಿಕಾರಿಗಳು, ಯಾದಗಿರಿ. ತಹಸೀಲ್ದಾರರು, ಯಾದಗಿರಿ ಮತ್ತು ಶೋರಾಪೂರ ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳು. |

-o-

ಸಭೆಯಲ್ಲಿ ಉಪಸ್ಥಿತರಿದ್ದ ಸನ್ಮಾನ್ಯ ಶ್ರೀ ಟಿ.ಕೆ ಅನೀಲ್ ಕುಮಾರ್, ಐಎಎಸ್, ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಪ್ರವಾಸೋದ್ಯಮ ಇಲಾಖೆ ಬೆಂಗಳೂರು ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಯಾದಗಿರಿ ಹಾಗೂ ಅಧಿಕಾರಿ/ಸಿಬ್ಬಂದಿಗಳನ್ನು ಅಪರ ಜಿಲ್ಲಾಧಿಕಾರಿಗಳು ಸ್ವಾಗತಿಸಿದರು. ಹಾಗೂ ಸಭೆಯನ್ನು ನಡೆಸುವಂತೆ ಕೋರಿದರು. ನಂತರ ಈ ಕೆಳಕಂಡ ವಿಷಯಗಳ ಕುರಿತು ವಿವರವಾಗಿ ಚರ್ಚಿಸಿ ಕೂಡಲೇ ಕ್ರಮ ಕೈಗೊಳ್ಳಲು ಸೂಚಿಸಿದರು.

ಮೊದಲಿಗೆ ಮಾನ್ಯ ಜಿಲ್ಲಾಧಿಕಾರಿಗಳು ಮಾತನಾಡುತ್ತಾ, ಯಾದಗಿರಿ ಜಿಲ್ಲೆಗೆ ಸಂಬಂಧಿಸಿದ ಜಲಾಶಯಗಳ ನೀರಿನ ಮಟ್ಟದ ಬಗ್ಗೆ ತಿಳಿಸುತ್ತಾ, ಪ್ರವಾಹ ಪರಿಸ್ಥಿತಿ ಸಂದರ್ಭದಲ್ಲಿ ಯಾದಗಿರಿ ತಾಲೂಕಿನ ಕೌಳೂರು ಗ್ರಾಮದ ಸಾಯಬರೆಡ್ಡಿ ಎನ್ನುವ ರೈತ ಪಂಪ್‌ಸೆಟ್ ತೆಗೆಯಲು ಹೋಗಿದ ಸಂದರ್ಭದಲ್ಲಿ ಭೀಮನದಿಯಲ್ಲಿ ಕೊಚ್ಚಿಕೊಂಡು ಮೃತನಾಗಿರುತ್ತಾನೆ. ಸದರಿ ಯಾದಗಿರಿ ಜಿಲ್ಲೆಯಲ್ಲಿ ಒಂದು ಪ್ರಕರಣವನ್ನು ಬಿಟ್ಟರೆ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳು ಸೇರಿ ಅಚ್ಚು ಕಟ್ಟಾಗಿ ಕೆಲಸ ನಿರ್ವಹಿಸಿರುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ಯಾವುದೇ ರೀತಿಯಿಂದ ಜನ ಜಾನುವಾರುಗಳ ಪ್ರಾಣ ಹಾನಿಯಾಗಿರುವುದಿಲ್ಲವೆಂದು ಮಾನ್ಯರಿಗೆ ವಿವರಿಸಿದರು.

- **ಮಳೆ ವಿವರ :-**

ಮಾನ್ಯ ಸರಕಾರದ ಕಾರ್ಯದರ್ಶಿಗಳು, ಪ್ರವಾಸೋದ್ಯಮ ಇಲಾಖೆ ಬೆಂಗಳೂರು ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಯಾದಗಿರಿ ಇವರು ಮಾತನಾಡುತ್ತಾ, ಜಿಲ್ಲೆಯ ವಾಡಿಕೆ ಮಳೆ 554 (ಮಿ.ಮೀ) ಇದ್ದು ಆದರೆ ವಾಸ್ತವವಾಗಿ 396(ಮಿ.ಮೀ) ಆಗಿರುತ್ತದೆ, ಹಾಗೂ ಇನ್ನು ಜಿಲ್ಲೆಯಲ್ಲಿ ಮಳೆಯ ಕೊರತೆ -28 ಇರುವುದಾಗಿ ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ಯಾದಗಿರಿ ಇವರು ಮಾನ್ಯರಿಗೆ ವಿವರಿಸಿದರು.

- **ಬಿತ್ತನೆ ವಿವರ :-**

ಮಾನ್ಯ ತಾಲೂಕವಾರು ಬಿತ್ತನೆ ಕ್ಷೇತ್ರ, ಗೊತ್ತುಪಡಿಸಿದ ಕ್ಷೇತ್ರದ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಕೃಷಿ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು, ನಂತರ **ತೊಗರಿ-4015 (94%) ಹತ್ತಿ-25168(115.73%)** ತದನಂತರ **ಜಿಲ್ಲೆಯ ಒಟ್ಟು ಕ್ಷೇತ್ರ-111163** ಗುರಿಪಡಿಸಿದ **ಒಟ್ಟು ಬಿತ್ತನೆ ಕ್ಷೇತ್ರ-111028** ಇದೆ ಎಂದು ಕೃಷಿ ಇಲಾಖೆಯ ಅಧಿಕಾರಿಗಳು ಹೇಳಿದರು.

**<u>ಮುಂಗಾರು ಹಿಂಗಾರು ಬಿತ್ತನೆ ಬೀಜದ ವಿವರ:-</u>**

ಜಿಲ್ಲೆಯಲ್ಲಿ ಗೊಬ್ಬರ, ಬೀಜ ರೈತರಿಗೆ ಕಡಿಮೆ ಬೀಳದ ಹಾಗೆ ಮುಂಜಾಗೃತ ಕ್ರಮ ವಹಿಸಲು ಮಾನ್ಯ ಸಚಿವರು ತಿಳಿಸಿದರು. ಮಾನ್ಯ ಜಿಲ್ಲಾಧಿಕಾರಿಗಳು ಈಗಾಗಲೇ ಮುಂಜಾಗೃತ ಕ್ರಮ ಕೈಗೊಂಡಿದ್ದು ಇರುತ್ತದೆ ಎಂದು ಮಾಹಿತಿ ನೀಡಿದರು.

**<u>ಕೃಷಿ ಇಲಾಖೆ:-</u>**

- **<u>ರೈತರ ಆತ್ಮಹತ್ಯೆ ಪ್ರಕರಣಗಳ ಬಗ್ಗೆ :-</u>**

| ತಾಲ್ಲುಕು | ಆತ್ಮಹತ್ಯೆ ಮಾಡಿಕೊಂಡ ರೈತರ ಒಟ್ಟು ಸಂಖ್ಯೆ | | | ವಿಲೇವಾರಿ ಮಾಡಿದ ಪ್ರಕರಣಗಳ ಸಂಖ್ಯೆ | | | | ಪರಿಹಾರ ವಿತರಿಸಿದ ಮೊತ್ತ (ಲಕ್ಷಗಳಲ್ಲಿ) | ತಿರಸ್ಕರಿಸಲು ಪ್ರಮುಖ ಕಾರಣಗಳು | ಉಚಿತ ಶಿಕ್ಷಣ ಪಡೆಯುತ್ತಿರುವ ಕುಂಟುಬಗಳ ಸಂಖ್ಯೆ | ವಿಶೇಷ ಆರೋಗ್ಯ ಯೋಜನೆ ಪಡೆದುಕೊಂಡ ಕುಟುಂಬಗಳ ಸಂಖ್ಯೆ | ಪಿಂಚಣಿ ಮಂಜೂರಾದ ಕುಟುಂಬಗಳ ಸಂಖ್ಯೆ |
|---|---|---|---|---|---|---|---|---|---|---|---|---|
| | ಪುರುಷರು | ಮಹಿಳೆಯರು | ಒಟ್ಟು | ಪರಿಹಾರವನ್ನು ವಿತರಿಸಿದ ಪ್ರಕರಣಗಳ ಸಂಖ್ಯೆ | ಎಫ್.ಎಸ್.ಎಲ್. ವರದಿಗಾಗಿ ಬಾಕಿ ಇರುವ ಪ್ರಕರಣಗಳ ಸಂ. | ತಿರಸ್ಕರಿಸಿದ ಪ್ರಕರಣಗಳ ಸಂಖ್ಯೆ | ಒಟ್ಟು (6+7+8) | | | | | |
| ಶಹಾಪೂರ | 5 | 0 | 5 | 0 | 0 | 5 | 5 | 0 | ಸಾಲ ಇರುವ ಬಗ್ಗೆ ದಾಖಲಾತಿ ಇರುವುದಿಲ್ಲ | - | - | - |
| ವಡಗೇರಾ | 1 | 0 | 1 | 1 | 0 | 0 | 1 | 5.00 | - | - | - | - |
| ಸುರಪೂರ | 7 | 0 | 7 | 2 | 5 | 0 | 7 | 10.00 | - | 2 | 5 | - |
| ಹುಣಸಗಿ | 0 | 0 | 0 | 0 | 0 | 0 | 0 | 0 | - | - | - | - |
| ಯಾದಗಿರಿ | 0 | 0 | 0 | 0 | 0 | 0 | 0 | 0 | - | - | - | - |
| ಗುರುಮಿಠಕಲ | 0 | 0 | 0 | 0 | 0 | 0 | 0 | 0 | - | - | - | - |
| ಒಟ್ಟು | 13 | 0 | 13 | 03 | 05 | 05 | 13 | 15.00 | - | 2 | 5 | - |

ಪ್ರಸಕ್ತ ಸಾಲಿನಲ್ಲಿ ಜಿಲ್ಲೆಯಲ್ಲಿ 13 ರೈತರು ಆತ್ಮಹತ್ಯೆ ಮಾಡಿಕೊಂಡಿರುವ ಪ್ರಕರಣಗಳಿದ್ದು, 3 ಕುಟುಂಬಗಳಿಗೆ ಪರಿಹಾರ ವಿತರಿಸಲಾಗಿದೆ, 5 ಪ್ರಕರಣಗಳಿಗೆ ಎಫ್ಎಸ್ಎಲ್ ವರದಿ ಬಾಕಿ ಇದ್ದು, 5 ತಿರಸ್ಕೃತವಾಗಿವೆ ಎಂಬುದಾಗಿ ಜಂಟಿ ಕೃಷಿ ನಿರ್ದೇಶಕರು, ಯಾದಗಿರಿ ಇವರು ಮಾನ್ಯರಿಗೆ ವಿವರಿಸಿದರು.

ಜಿಲ್ಲಾಧಿಕಾರಿಗಳು, ಯಾದಗಿರಿ ರವರು ಮಾತನಾಡಿ, ಮೃತ ರೈತರ ಹೆಸರಿನಲ್ಲಿ ಸಾಲ ಇರದ ಕಾರಣಕ್ಕೆ ಪ್ರಕರಣಗಳು ತಿರಸ್ಕೃತವಾಗಿವೆ. ಈ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರ ಗಮನಕ್ಕೆ ತರಲಾಗಿದ್ದು, ತಿರಸ್ಕೃತ ಆತ್ಮಹತ್ಯೆ ಪ್ರಕರಣಗಳನ್ನು ಮತ್ತೊಮ್ಮೆ ಪರಿಶೀಲಿಸಲು ಸೂಚನೆ ನೀಡಿದ್ದಾರೆ.

ಯಾದಗಿರಿ ಜಿಲ್ಲೆಗೆ ಅಗತ್ಯಕ್ಕನುಗುಣವಾಗಿ ಬಿತ್ತನೆ ಬೀಜಗಳನ್ನು ಮುಂಚಿತವಾಗಿಯೇ ದಾಸ್ತಾನು ಮಾಡಿಕೊಳ್ಳಬೇಕು. ಅದಕ್ಕೆ ತಕ್ಕಂತೆ ರಸಗೊಬ್ಬರ ಕೂಡ ಸಂಗ್ರಹಿಸಬೇಕು ಎಂದು ಸೂಚಿಸಿದರು. ನೆರೆಹಾವಳಿಯಲ್ಲಿ ಬೆಳೆಹಾನಿಯಿಂದಾಗಿ ಪರ್ಯಾಯ ಬೆಳೆಗಳ ಬಿತ್ತನೆಗೆ ರೈತರು ಮುಂದಾಗಿರುವುದರಿಂದ 10,000 (ಹತ್ತು ಸಾವಿರ) ಟನ್ ಯೂರಿಯಾ ರಸಗೊಬ್ಬರದ ಕೊರತೆ ಉಂಟಾಗಿದೆ. ಯೂರಿಯಾ ರಸಗೊಬ್ಬರ ಪೂರೈಕೆಗೆ ಸರಕಾರಕ್ಕೆ ಪತ್ರ ಬರೆಯಲಾಗಿದೆ ಎಂದು ಉಸ್ತುವಾರಿ ಕಾರ್ಯದರ್ಶಿಗಳಿಗೆ ತಿಳಿಸಿದರು.

<u>(ಕ್ರಮ:ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ಯಾದಗಿರಿ)</u>

**ಪಶು ಪಾಲನಾ ಇಲಾಖೆ:-**

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಮಾತನಾಡಿ ಪ್ರವಾಹ ಬಂದ ಸಮಯದಲ್ಲಿ ಎಷ್ಟು ಜಾನುವಾರುಗಳ ಪ್ರಾಣ ಹಾನಿಯಾಗಿರುವುದರ ಕುರಿತು ಪರಿಶೀಲಿಸಲಾಗಿ, ಯಾದಗಿರಿ ಜಿಲ್ಲೆಯಲ್ಲಿ ಪ್ರವಾಹ ಪರಿಸ್ಥಿತಿಯಲ್ಲಿ (02) ಎರಡು ಜಾನುವಾರುಗಳು ಮೃತವಾಗಿದ್ದು, ಮೃತಪಟ್ಟ ಜಾನುವಾರುಗಳಿಗೆ ಪೂರ್ಣ ಪ್ರಮಾಣದಲ್ಲಿ ಸರಕಾರದಿಂದ ಪರಿಹಾರ ವಿತರಿಸಲಾಗಿರುತ್ತದೆ ಎಂದು ಉಪ ನಿರ್ದೇಶಕರು, ಪಶು ಪಾಲನಾ ಇಲಾಖೆ, ಯಾದಗಿರಿ ಇವರು ಮಾನ್ಯರಿಗೆ ವಿವರಿಸಿದರು.

ಜಿಲ್ಲೆಯ ವಡಗೇರಿ ರೈಲ್ವೆ ವೈರಲೇಸ್ ಸ್ಥಳ, ಸುರಪೂರದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಹಾಗೂ ಗುರುಮಿಠಕಲ್‌ನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (03) ಕಡೆ ಗೋಶಾಲೆ, (08) ಮೇವು ಬ್ಯಾಂಕ್ ತೆರೆಯಲಾಗಿದ್ದು, ದಿ.19.08.2019 ರಂದು ಜಿಲ್ಲೆಯಲ್ಲಿ ಉತ್ತಮವಾದ ಮಳೆಯಾಗಿರುವ ಪ್ರಯುಕ್ತ, ಅಗಸ್ಟ 19 ರಿಂದ ಸ್ಥಗಿತಗೊಳಿಸಲಾಗಿದೆ. ಹಾಗೂ ಜಿಲ್ಲೆಯಲ್ಲಿ ಒಟ್ಟು=362098 ಜಾನುವಾರುಗಳಿದ್ದು, 205488 ಮೆ.ಟನ್ ಮೇವು ಸಂಗ್ರಹಿಸಲಾಗಿದ್ದು, ರೈತರಿಗೆ 16 ವಾರಗಳಷ್ಟು ಆಗುವ ಮೇವು ದಾಸ್ತಾನು ಇದ್ದು, ಸಾಕಷ್ಟು ಹಸಿರು ಮೇವು ಕೂಡಾ ಲಭ್ಯ ಇರುತ್ತದೆ ಎಂದು ಉಪ ನಿರ್ದೇಶಕರು, ಪಶುಪಾಲನಾ ಇಲಾಖೆ, ಯಾದಗಿರಿ ಇವರು ಮಾನ್ಯರಿಗೆ ವಿವರಿಸಿದರು.

ಜಿಲ್ಲೆಯಲ್ಲಿ ಜಾನುವಾರುಗಳ ಆರೋಗ್ಯದ ಬಗ್ಗೆ ಪರಿಶೀಲಿಸಲಾಗಿ, ರಾಷ್ಟ್ರೀಯ ಜಾನುವಾರುಗಳಿಗೆ ಕಾಲು ಬಾಯಿ ರೋಗದ ಲಸಿಕಾ ಕಾರ್ಯಕ್ರಮ ಅಕ್ಟೋಬರ್ ಮಾಹೆಯಲ್ಲಿ ಹಮ್ಮಿಕೊಳ್ಳಲಾಗಿರುವುದಾಗಿ ಮಾನ್ಯರಿಗೆ ವಿವರಿಸಿದರು. ಮಾನ್ಯರು ಮಾತನಾಡಿ ಜಿಲ್ಲೆಯ ಎಲ್ಲಾ ಜಾನುವಾರುಗಳಿಗೆ ಲಸಿಕೆ ಹಾಕಿ ಶೇಕಡಾ 100% ಸಾಧನೆ ಮಾಡಲು ತಿಳಿಸಿದರು.

ರಾಷ್ಟ್ರೀಯ ಕೃತಕ ಗರ್ಭಧಾರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಜಿಲ್ಲೆಯ 100 ಗ್ರಾಮಗಳಲ್ಲಿ ಪ್ರತಿ ಗ್ರಾಮದ 200 ಜಾನುವಾರುಗಳಿಗೆ ಮಾಲಿಕರ ಮನೆಗೆ ತೆರಳಿ ಕೃತಕ ಗರ್ಭಧಾರಣೆ ಸೌಲಭ್ಯ ನೀಡಲಾಗುವುದು ಹಾಗೂ ಸದರಿ ಕಾರ್ಯಕ್ರಮವು (06) ತಿಂಗಳುಗಳ ಕಾಲ ಜಾರಿಯಲ್ಲಿರುತ್ತದೆ ಎಂದು ಮಾನ್ಯರಿಗೆ ಉಪ ನಿರ್ದೇಶಕರು, ಪಶು ಪಾಲನಾ ಇಲಾಖೆ, ಯಾದಗಿರಿ ಇವರು ತಿಳಿಸಿದರು.

(ಕ್ರಮ:ಉಪ ನಿರ್ದೇಶಕರು, ಪಶು ಪಾಲನಾ ಇಲಾಖೆ, ಯಾದಗಿರಿ)

**ಲೋಕೋಪಯೋಗಿ ಇಲಾಖೆ:-**

ಪ್ರವಾಹ ಪರಿಸ್ಥಿತಿ ಸಂದರ್ಭದಲ್ಲಿ ಯಾದಗಿರಿ ಜಿಲ್ಲೆಯಲ್ಲಿ ಹಾಳಾದ ಬ್ರಿಡ್ಜ್‌ಗಳ ಬಗ್ಗೆ ವಿವರಣೆ ಕೇಳಲಾಗಿ, ಶಹಾಪೂರ ತಾಲ್ಲೂಕಿನ ಕೊಳ್ಳುರ ಬ್ರಿಡ್ಜ್ ಅಪ್ರೋಚ್ ರಸ್ತೆಯ ದುರಸ್ತಿ ಕಾಮಗಾರಿ ಪೂರ್ಣಗೊಳಿಸಿ ಸಾರ್ವಜನಿಕರ ಸುಗಮ ಸಂಚಾರಕ್ಕೆ ಮಾಡಲಾಗಿದೆ ಎಂದು ಕಾರ್ಯ ನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಯಾದಗಿರಿ ಇವರು ಮಾನ್ಯರಿಗೆ ವಿವರಿಸಿದರು.

ನೀಲಕಂಠರಾಯನ ಗಡ್ಡಿ Foot Bridge (ಕಾಲು ಸೇತುವೆ)ಯು ಈ ಮೊದಲು ನಿರ್ಮಾಣವಾದ Power Plat ಕಂಪನಿಯ ಸೇತುವೆಗೆ ಹೊಂದಿಕೊಂಡು ನಿರ್ಮಿಸಲಾಗಿದ್ದು, ಇತ್ತೀಚಿನ ಪ್ರವಾಹದಿಂದ ಹಳೆಯ ಸೇತುವೆ ಕೊಚ್ಚಿಹೋಗಿದ್ದು, ನೀಲಕಂಠರಾಯನ ಗಡ್ಡಿಯ ಸಂಪರ್ಕ ಕಡಿತಗೊಂಡಿರುವ ಪ್ರಯುಕ್ತ, ಕೂಡಲೇ ಹಾಳಾದ ಸೇತುವೆಯ ಕಾಮಗಾರಿಯನ್ನು ಶೀಘ್ರವಾಗಿ ಕೈಗೊಂಡು ಸಂಪರ್ಕ ಕಲ್ಪಿಸಲು ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಯಾದಗಿರಿ ಇವರಿಗೆ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಸೂಚಿಸಿದರು.

(ಕ್ರಮ:ಕಾರ್ಯ ನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಯಾದಗಿರಿ)

<u>ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆ</u>:-

- <u>ಕುಡಿಯುವ ನೀರು</u>:-

ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು, ಯಾದಗಿರಿ ಇವರು ಮಾತನಾಡುತ್ತಾ, ಜಿಲ್ಲೆಯ ಸುರಪೂರ ತಾಲ್ಲೂಕಿನ 2 ಗ್ರಾಮಗಳಲ್ಲಿ 06 ಟ್ರಿಪ್‌ಗಳ ಮೂಲಕ 05 ಖಾಸಗಿ ಬೋರವೆಲ್‌ಗಳಿಂದ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗಿತ್ತಿದೆ, ಎಂದು ಮಾನ್ಯರಿಗೆ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆ, ಯಾದಗಿರಿ ರವರು ವಿವರಿಸಿದರು.

ನೀರು ಸರಬರಾಜು ಮಾಡಲಾದ ಖಾಸಗಿ ಬೋರವೆಲ್ ಮಾಲಿಕರಿಗೆ, ಸಂಪೂರ್ಣವಾಗಿ ವೇತನ ಪಾವತಿಸಲು ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆ, ಯಾದಗಿರಿ/ಜಿಲ್ಲೆಯ ಎಲ್ಲಾ ತಹಸೀಲ್ದಾರರಿಗೆ ಮಾನ್ಯರು ಸೂಚಿಸಿದರು.

ಸುರಪುರ ತಾಲ್ಲೂಕಿನ ತಳ್ಳಳ್ಳಿ ಬಿ ಮತ್ತು ಯಕ್ತಾಪುರ ಗ್ರಾಮಗಳಲ್ಲಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. ನಗನೂರ, ಎಂ.ಬೊಮ್ಮನಳ್ಳಿ, ಕಾಚಾಪುರ ಹಾಗೂ ಯಕ್ತಾಪುರ ಗ್ರಾಮಗಳಲ್ಲಿ ಖಾಸಗಿ ಬೋರ್‌ವೆಲ್‌ಗಳ ಮೂಲಕ ನೀರು ಪೂರೈಸಲಾಗುತ್ತಿದೆ ಎಂದು ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆ, ಯಾದಗಿರಿ ಇವರು ಮಾಹಿತಿ ನೀಡಿದರು.

<u>ಸಕಾಲ</u>:-

ಜಿಲ್ಲೆಯಲ್ಲಿ ಸಕಾಲದಲ್ಲಿ ಸಕಾಲದ ನಿಯಮ ಮೀರಿ ಬಾಕಿ ಇರುವ ಪ್ರಕರಣಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಮಾನ್ಯರು ಕಟ್ಟುನಿಟ್ಟಾಗಿ ನಿರ್ದೇಶಿಸಿದರು.

<u>(ಕ್ರಮ: ಜಿಲ್ಲಾ ಮಟ್ಟದ ಅಧಿಕಾರಿಗಳು, ಯಾದಗಿರಿ)</u>

ವಂದಾನಾರ್ಪಣೆಗಳೊಂದಿಗೆ ಸಭೆ ಮುಕ್ತಾಯವಾಯಿತು.

(ಟಿ.ಕೆ.ಅನಿಲ್ ಕುಮಾರ್)
ಸರಕಾರದ ಕಾರ್ಯದರ್ಶಿಗಳು,
ಪ್ರವಾಸೋದ್ಯಮ ಇಲಾಖೆ, ಬೆಂಗಳೂರು
ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,
ಯಾದಗಿರಿ

**ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ, ಇವರ ಕಛೇರಿ**

ದೂರವಾಣಿ : 080-22250284
ಮೇಲ್: secretaryagrigok@gmail.com

ಸಂಖ್ಯೆ: ಕೃಇ/ಕಾರ್ಯದರ್ಶಿ/ 75 /2019 ದಿನಾಂಕ: 09.10.2019

**ಪ್ರವಾಸ ಕಾರ್ಯಕ್ರಮ**

ಶ್ರೀ ರಾಜೇಂದರ್ ಕುಮಾರ್ ಕಟಾರಿಯಾ, ಭಾ.ಆ.ಸೇ. ಸರ್ಕಾರದ ಕಾರ್ಯದರ್ಶಿಗಳು, ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ ಇವರು ದಿನಾಂಕ: 10.10.2019ರಂದು ಕಲಬುರಗಿ ಜಿಲ್ಲೆಯಲ್ಲಿ ಕೈಗೊಳ್ಳಲಿರುವ ಪ್ರವಾಸ ಕಾರ್ಯಕ್ರಮದ ವಿವರಗಳು (ಮೊಬೈಲ್ ಸಂಖ್ಯೆ: **72593-01111**)

| ದಿನಾಂಕ | ವೇಳೆ | ಪ್ರವಾಸದ ವಿವರ ಮತ್ತು ಉದ್ದೇಶ |
|---|---|---|
| 10.10.2019 ಗುರುವಾರ | ಬೆಳಗ್ಗೆ 05.35 ಘಂಟೆ | ನಿರ್ಗಮನ : ಬೆಂಗಳೂರು (ಏರ್ ಏಷಿಯಾ-I5 1582)ಮೂಲಕ |
| | ಬೆಳಗ್ಗೆ 6.35 ಘಂಟೆ | ಆಗಮನ : ಹೈದ್ರಾಬಾದ್ ವಿಮಾನ ನಿಲ್ದಾಣ |
| | ಬೆಳಗ್ಗೆ 6.35 ಘಂಟೆ | ನಿರ್ಗಮನ : ಸರ್ಕಾರಿ ವಾಹನದ ಮೂಲಕ |
| | ಬೆಳಗ್ಗೆ 9.45 ಘಂಟೆ | ಆಗಮನ : ಕಲಬುರಗಿ |
| | ಪೂರ್ವಾಹ್ನ 10.00 ಘಂಟೆ | CCC No.200180/2019 – Suryakanth, Raichur University Vs. State and others - ಬಗ್ಗೆ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಚರ್ಚೆ |
| | ಪೂರ್ವಾಹ್ನ 10.30 ಘಂಟೆ | ಸದರಿ ಕಂಟೆಪ್ಟ್ ವಿಚಾರಣೆಗೆ ಸಂಬಂಧಿಸಿದಂತೆ ಕಲಬುರಗಿ ಉಚ್ಚ ನ್ಯಾಯಾಲಯದಲ್ಲಿ ಹಾಜರಾಗುವುದು. |
| | ಪೂರ್ವಾಹ್ನ 11.30 – 1.30 ಘಂಟೆ | ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಯ ಅಧಿಕಾರಿಗಳೊಂದಿಗೆ ಇಲಾಖಾ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆ – ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ |
| | ಅಪರಾಹ್ನ 2.00 ರಿಂದ 3.00 ಘಂಟೆಯವರೆಗೆ | ಜಿಲ್ಲೆಯ ಬೆಳೆಯ ಪರಿಸ್ಥಿತಿ / ನೆರೆ ಪರಿಸ್ಥಿತಿಯ ಅಧ್ಯಯನದ ಬಗ್ಗೆ ಕ್ಷೇತ್ರ ಭೇಟಿ |
| | ಅಪರಾಹ್ನ 3.00 ಘಂಟೆ | ನಿರ್ಗಮನ : ಕಲಬುರಗಿ (ಸರ್ಕಾರಿ ವಾಹನ ಮೂಲಕ) |
| | ಸಂಜೆ 6.30 ಘಂಟೆ | ಆಗಮನ : ಹೈದ್ರಾಬಾದ್ ವಿಮಾನ ನಿಲ್ದಾಣ |
| | ರಾತ್ರಿ : 7.25 ಘಂಟೆ | ನಿರ್ಗಮನ : ಹೈದ್ರಾಬಾದ್ ವಿಮಾನ ನಿಲ್ದಾಣ (ಏರ್ ಏಷಿಯಾ-I5 1519)ಮೂಲಕ |
| | ರಾತ್ರಿ 8.35 ಘಂಟೆ | ಆಗಮನ : ಬೆಂಗಳೂರು |

SVT 9/10/19
(ಶ್ರೀಶ ವಿ. ತರತ್ರಿ)
ಸರ್ಕಾರದ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ
ಕೃಷಿ ಇಲಾಖೆ

10/10/19

ಇವರಿಗೆ:

1) ಜಿಲ್ಲಾಧಿಕಾರಿಗಳು, ಕಲಬುರಗಿ ಜಿಲ್ಲೆ – ಹೈದ್ರಾಬಾದ್ ವಿಮಾನ ನಿಲ್ದಾಣದಿಂದ ಡಿ.ವಿ. ವಾಹನವನ್ನು ಕಳುಹಿಸುವಂತೆ ಮತ್ತು ಕಾರ್ಯದರ್ಶಿಗಳ ಭೇಟಿಯ ಅವಧಿಯಲ್ಲಿ ಸೂಕ್ತ ಶಿಷ್ಟಾಚಾರ ವ್ಯವಸ್ಥೆಯನ್ನು ಕಲ್ಪಿಸುವಂತೆ ಕೋರಿದೆ.
2) ಮಾನ್ಯ ಕುಲಪತಿಗಳು ಮತ್ತು ಕುಲಸಚಿವರು ರಾಯಚೂರು ಕೃಷಿ ವಿಶ್ವವಿದ್ಯಾಲಯ – ಇವರಿಗೆ ಕಳುಹಿಸುತ್ತಾ ಸದರಿ ಕಂಟೆಪ್ಟ್ ಕೇಸಿನ ಬಗ್ಗೆ ಸೂಕ್ತ ಮಾಹಿತಿಯೊಂದಿಗೆ ಕಾರ್ಯದರ್ಶಿಯವರೊಂದಿಗೆ ಸಹಕರಿಸಲು ಕೋರಿದೆ.
3) ಜಂಟಿ ನಿರ್ದೇಶಕರು, ಕೃಷಿ / ತೋಟಗಾರಿಕೆ / ರೇಷ್ಮೆ ಇಲಾಖೆ, ಕಲಬುರಗಿ ಜಿಲ್ಲೆ – ಇವರಿಗೆ ಕಳುಹಿಸುತ್ತಾ ಸಭೆಯನ್ನು ನಡೆಸಲು ಸೂಕ್ತ ವ್ಯವಸ್ಥೆ ಮಾಡಿಸಲು ಹಾಗೂ ಕ್ಷೇತ್ರ ಭೇಟಿಯಲ್ಲಿ ಅಗತ್ಯ ಮಾಹಿತಿಯೊಂದಿಗೆ ಭಾಗವಹಿಸಲು ಕೋರಿದೆ.

BR 10/10/19

**ಪ್ರತಿಯನ್ನು ಮಾಹಿತಿಗಾಗಿ :**

1. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು ಆಪ್ತ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ವಿಧಾನಸೌಧ.
3. ಮಾನ್ಯ ಮುಖ್ಯ ಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ.
4. ಮಾನ್ಯ ಉಪ ಮುಖ್ಯ ಮಂತ್ರಿಗಳು ಹಾಗೂ ಮಾನ್ಯ ಕೃಷಿ ಸಚಿವರು ಹಾಗೂ ಮಾನ್ಯ ತೋಟಗಾರಿಕೆ & ರೇಷ್ಮೆ ಸಚಿವರ ಆಪ್ತ ಕಾರ್ಯದರ್ಶಿಗಳು;
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಿ.ಆ.ಸು.ಇ. (ಆಡಳಿತ ಸುಧಾರಣೆ) ಇವರ ಆಪ್ತ ಕಾರ್ಯದರ್ಶಿಗಳು

**ಡಾ: ಜಿ. ಕಲ್ಪನ,** ಭಾ.ಆ.ಸೇ.,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಕರ್ನಾಟಕ ಸರ್ಕಾರದ ಸಚಿವಾಲಯ
ದೂರವಾಣಿ : ಕಛೇರಿ: 22255827
22032589
ಫ್ಯಾಕ್ಸ್ : 080-22252499
ಇಮೇಲ್: prs-yesd@karnataka.gov.in
ysdsec@gmail.com
2ನೇ ಮಹಡಿ, 2ನೇ ಹಂತ
ಬಹುಮಹಡಿಗಳ ಕಟ್ಟಡ, ಬೆಂಗಳೂರು-560001

ಸಂಖ್ಯೆ: ಯುಸಕ್ರೀ 60 ಅಮುಕಾ 2019 ದಿನಾಂಕ:26-09-2019

ಯು.ಸ.ಕ್ರೀ. ಇಲಾಖೆ ಸಂಖ್ಯೆ: 7541611 ದಿನಾಂಕ: 26/9/19

## ಟಿಪ್ಪಣಿ

ವಿಷಯ: ಮೈಸೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ಮೈಸೂರು ಜಿಲ್ಲೆಗೆ ಪ್ರವಾಸ ಕೈಗೊಂಡಿರುವ ಬಗ್ಗೆ ವಿವರ.

*****

| ಕ್ರ.ಸಂ. | ಅಂಶಗಳು | ಕಾರ್ಯದರ್ಶಿಗಳ ಷರಾ |
|---|---|---|
| 1 | ಜಿಲ್ಲೆಯ ಹೆಸರು | ಮೈಸೂರು |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ಹೆಸರು | ಡಾ: ಜಿ.ಕಲ್ಪನ |
| 3 | ಭೇಟಿಯಾದ/ ಪ್ರವಾಸದ ದಿನಾಂಕ: | 29-08-2019, 06-09-2019, 07-09-2019, 12-09-2019, 13-09-2019 ಮತ್ತು 20-09-2019 |
| 4 | ಮುಖ್ಯವಾಗಿ ಗಮನಿಸಿದ ಅಂಶಗಳು ಹಾಗೂ ಸಲಹೆಗಳು | ಮುಂದಿನ ಕಂಡಿಕೆಗಳಲ್ಲಿ ವಿವರಿಸಲಾಗಿದೆ. |

ಜಿಲ್ಲೆಯ ಅಭಿವೃದ್ಧಿ ಹಾಗೂ ಯೋಜನಾ ಕಾರ್ಯಕ್ರಮಗಳ ಪರಿಶೀಲನೆಗಾಗಿ ದಿನಾಂಕ: 29-08-2019ರಂದು ಮಾನ್ಯ ವಸತಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಮೈಸೂರು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ತಾಲ್ಲೂಕು, ಜಿಲ್ಲೆ, ವಿಭಾಗ ಮತ್ತು ರಾಜ್ಯ ಮಟ್ಟದ ದೇಸರಾ ಕ್ರೀಡಾಕೂಟದ ಸಂಘಟನೆ ಕುರಿತು ಸುದೀರ್ಘವಾಗಿ ಚರ್ಚಿಸಲಾಯಿತು.

ದಿನಾಂಕ:06-09-2019ರಂದು ಮಾನ್ಯ ವಸತಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ದಸರಾ ಸಿ.ಎಂ.ಕಪ್ ಕ್ರೀಡಾಕೂಟ ಆಯೋಜನೆ ಹಾಗೂ ಮಾನ್ಯತೆ ನೀಡುವ ಕುರಿತು ಚರ್ಚಿಸಲಾಯಿತು.

1/10/19

ದಿನಾಂಕ:07-09-2019 ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಮಾನ್ಯ ವಸತಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಕಬಿನಿ ಜಲಾಶಯಕ್ಕೆ ಬಾಗಿನ ಅರ್ಪಿಸುವ ಕಾರ್ಯಕ್ರಮದಲ್ಲಿ ಭಾಗವಹಿಸಲಾಯಿತು.

...2

ದಿನಾಂಕ:12-09-2019ರಂದು ಮಾನ್ಯ ವಸತಿ ಸಚಿವರು ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಕಛೇರಿಯಲ್ಲಿ ಆಯೋಜಿಸಲಾದ ದಸರಾ-2019 ಸಿದ್ಧತೆ ಕುರಿತಂತೆ ಮೈಸೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಪ್ರಾದೇಶಿಕ ಆಯುಕ್ತರು, ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಮೈಸೂರು ನಗರ ಪೊಲೀಸ್ ವರಿಷ್ಠಾಧಿಕಾರಿಗಳು, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಮಹಾನಗರ ಪಾಲಿಕೆ ಆಯುಕ್ತರು, ಮುಡಾ ಆಯುಕ್ತರು ಹಾಗೂ ಇತರೇ ಪ್ರಮುಖ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಭಾಗವಹಿಸಲಾಯಿತು.

ತದನಂತರ 2019ನೇ ಸಾಲಿನ ದಸರಾ ಕ್ರೀಡಾಕೂಟಕ್ಕೆ ಮಾನ್ಯತೆ ನೀಡುವ ಕುರಿತು ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಂಟಿ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಅಬಕಾರಿ ಉಪ ಆಯುಕ್ತರು, ಮೈಸೂರು ಜಿಲ್ಲೆ, ಕ್ರೆಡಿಟ್-ಐ ಸಂಸ್ಥೆಯ ಮುಖ್ಯಸ್ಥರು, ಮೈಸೂರು, ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮೈಸೂರು ಜಿಲ್ಲೆ, ಹಾಗೂ ಸಲಹೆಗಾರರು, ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ ಇವರುಗಳೊಂದಿಗೆ ದಿನಾಂಕ: 12-09-2019 ಅಪರಾಹ್ನದಂದು ಸುದೀರ್ಘ ಸಭೆ ನಡೆಸಲಾಯಿತು.

ದಿನಾಂಕ:13-09-2019ರಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ಮೈಸೂರು ಜಿಲ್ಲೆಯಲ್ಲಿ ದಸರಾ ಕ್ರೀಡಾ ಉಪಸಮಿತಿ ಸದಸ್ಯರಾದ ಅಬಕಾರಿ ಉಪ ಆಯುಕ್ತರು, ಮೈಸೂರು, ಉಪ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು, ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮೈಸೂರು ಜಿಲ್ಲೆ ಮತ್ತು ಸಂಬಂಧಿಸಿದ ತಾಂತ್ರಿಕ ಸಿಬ್ಬಂದಿಗಳೊಂದಿಗೆ ಮೈಸೂರಿನಲ್ಲಿರುವ 1) ಚಾಮುಂಡಿ ವಿಹಾರ ಕ್ರೀಡಾಂಗಣದ - ಹಾಕಿ ಅಂಕಣ, ಒಳಾಂಗಣ ಕ್ರೀಡಾಂಗಣ ಮತ್ತು ಅಥ್ಲೆಟಿಕ್ ಸಿಂಥೆಟಿಕ್ ಅಂಕಣ 2) ಸೇಂಟ್ ಫಿಲೋಮಿನ ಕಾಲೇಜಿನ ಒಳಾಂಗಣ ಕ್ರೀಡಾಂಗಣದಲ್ಲಿನ ಫೆನ್ಸಿಂಗ್ ಅಂಕಣ ಮತ್ತು ಫುಟ್‌ಬಾಲ್ ಕ್ರೀಡಾಂಗಣ 3) ಕುಪ್ಪಣ್ಣ ಪಾರ್ಕ್ ಮತ್ತು ಡಾ: ವಿಷ್ಣುವರ್ದನ್ ಉದ್ಯಾನವನದಲ್ಲಿ ಸಾಹಸ ಕ್ರೀಡೆಗಳ ಪ್ರದರ್ಶನ ಕುರಿತು ಹೆಚ್ಚಿನ ಆದ್ಯತೆ ನೀಡಿ ಪ್ರವಾಸಿಗರನ್ನು ಮತ್ತಷ್ಟು ಉತ್ತಮ ಸೌಲಭ್ಯಗಳೊಂದಿಗೆ ಆಕರ್ಷಿಸುವಂತೆ ಸಲಹೆ ನೀಡಲಾಯಿತು. 4) ಮೈಸೂರು ವಿಶ್ವವಿದ್ಯಾನಿಲಯದ ಸ್ಪೋರ್ಟ್ಸ್ ಪೆವಿಲಿಯನಲ್ಲಿ ಫೆನ್ಸಿಂಗ್ ಕ್ರೀಡೆ ಆಯೋಜನೆ ಕುರಿತು ಡಾ:ಪಿ.ಕೃಷ್ಣಯ್ಯ ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ ಇವರೊಂದಿಗೆ ಚರ್ಚಿಸಲಾಯಿತು ಹಾಗೂ ವಾಲಿಬಾಲ್ ಮೈದಾನದ ಪರಿಶೀಲನೆ ಮಾಡಲಾಯಿತು ಮತ್ತು ಸದರಿ ಸ್ಥಳ ಹಾಗೂ ಕ್ರೀಡೆಗಳ ಉತ್ತಮ ಪಡಿಸುವ ನಿಟ್ಟಿನಲ್ಲಿ ಸಲಹೆಗಳನ್ನು ನೀಡಲಾಯಿತು. 5) ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಡೈಮೆಂಡ್ ಜುಬ್ಲಿ ಸ್ಪೋರ್ಟ್ಸ್ ಇಲ್ಲಿನ ಬಾಸ್ಕೆಟ್‌ಬಾಲ್ ಒಳಾಂಗಣ ಕ್ರೀಡಾಂಗಣ ಮತ್ತು ಹೊರಾಂಗಣ ಕ್ರೀಡಾಂಗಣದ ಸೌಲಭ್ಯಗಳ ಪರಿವೀಕ್ಷಣೆ ನಡೆಸಲಾಯಿತು ಹಾಗೂ ಸದರಿ ಇನ್‌ಸ್ಟಿಟ್ಯೂಟ್‌ನಲ್ಲಿರುವ ಸೌಲಭ್ಯಗಳನ್ನು ದಸರಾ ಕ್ರೀಡಾಕೂಟದ ಸ್ಪರ್ಧೆಗಳಿಗೆ ಉಪಯೋಗಿಸಿಕೊಳ್ಳುವಂತೆ ಇಲಾಖಾ ಅಧಿಕಾರಿಗಳಿಗೆ ತಿಳಿಸಲಾಯಿತು. 6) ಮೈಸೂರಿನ ಜೆ.ಪಿ.ನಗರದ ಪುಟ್ಟರಾಜ ಗವಾಯಿ ಕ್ರೀಡಾಂಗಣಕ್ಕೆ ಭೇಟಿ ನೀಡಿ ಈಜುಕೊಳ ಮತ್ತು ಬಾಸ್ಕೆಟ್‌ಬಾಲ್ ಅಂಕಣ ಮತ್ತು ಹ್ಯಾಂಡ್‌ಬಾಲ್ ಅಂಕಣಗಳನ್ನು ಪರಿವೀಕ್ಷಿಸಲಾಯಿತು.

ದಿನಾಂಕ:20-09-2019ರಂದು ಮಾನ್ಯ ವಸತಿ ಸಚಿವರು ಮತ್ತು ಮೈಸೂರು ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಮಾನ್ಯ ಸಂಸದರು, ಮೈಸೂರು ಕ್ಷೇತ್ರ, ಮಾನ್ಯ ಶಾಸಕರು, ಚಾಮರಾಜ ಮತಕ್ಷೇತ್ರ, ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ ಮತ್ತು ಕಾರ್ಯದರ್ಶಿ, ಕುಸ್ತಿ ಉಪ ಸಮಿತಿ, ಇವರೊಂದಿಗೆ 'ರಾಜ್ಯ ದಸರಾ ಕ್ರೀಡಾಕೂಟ ಮತ್ತು ಸಾಹಸ ಕ್ರೀಡೋತ್ಸವಕ್ಕೆ ಸಂಬಂಧಿಸಿದಂತೆ ವೆಬ್‌ಸೈಟ್ ಅನಾವರಣ ಮತ್ತು ಪೋಸ್ಟರ್‌ಗಳ ಬಿಡುಗಡೆ ಸಂಬಂಧದ ಪತ್ರಿಕಾಗೋಷ್ಠಿಯಲ್ಲಿ' ಭಾಗವಹಿಸಲಾಯಿತು.

...3

ತದನಂತರ, ದಿನಾಂಕ:20-09-2019ರಂದು ಅಪರಾಹ್ನ ಮಾನ್ಯ ವಸತಿ ಸಚಿವರು ಮತ್ತು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಮಾನ್ಯ ಸಂಸದರು, ಮೈಸೂರು, ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಪೊಲೀಸ್ ಅಧೀಕ್ಷಕರು, ಮೈಸೂರು ಜಿಲ್ಲೆ ಮತ್ತು ಜಂಟಿ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಇವರುಗಳೊಂದಿಗೆ ಮೈಸೂರು ಅರಮನೆ ಮಂಡಳಿಯಲ್ಲಿ ದಸರಾ ಸಿದ್ಧತೆ ಕುರಿತು ನಡೆದ ಸಭೆಯಲ್ಲಿ ಭಾಗವಹಿಸಲಾಯಿತು.

ಅವಗಾಹನೆಗಾಗಿ ಸಲ್ಲಿಸಿದೆ.

Kalpana.G

(ಡಾ. ಜಿ. ಕಲ್ಪನ)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಸರ್ಕಾರದ ಮುಖ್ಯ ಕಾರ್ಯದರ್ಶಿ,
ವಿಧಾನಸೌಧ,
ಬೆಂಗಳೂರು.
ಪ್ರತಿ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ(ಆಡಳಿತ ಸುಧಾರಣೆ), ಸಿ.ಆ.ಸು.ಇಲಾಖೆ, ಬೆಂಗಳೂರು.

**ಶ್ರೀಮತಿ ಉಮಾ ಮಹಾದೇವನ್, ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ಹಾಗೂ ಕೋಲಾರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ದಿನಾಂಕ : 26.09.2019 ರಂದು ಕೋಲಾರ ಜಿಲ್ಲೆಗೆ ಕ್ಷೇತ್ರ ಪ್ರವಾಸ ಮಾಡಿದ ಬಗ್ಗೆ ವರದಿ.**

**25ನೇ ಸೆಪ್ಟೆಂಬರ್ 2019:** ಜಿಲ್ಲಾಧಿಕಾರಿ, ಕೋಲಾರ ಜಿಲ್ಲೆ ಇವರೊಂದಿಗೆ ಕೋಲಾರ ಜಿಲ್ಲೆಯ ರಸ್ತೆಯ ಕುರಿತು ಚರ್ಚೆ (ಸ್ಥಳ: ಬೆಂಗಳೂರು ಕಛೇರಿ, ಬಹುಮಹಡಿ ಕಟ್ಟಡ)

**26ನೇ ಸೆಪ್ಟೆಂಬರ್ 2019:** ಕೋಲಾರಕ್ಕೆ ಭೇಟಿ

ಕೋಲಾರ ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಉಪ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ್, ಕೋಲಾರ ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳು,ತಾಲ್ಲೂಕು ಪಂಚಾಯತಿ, ಮಾಲೂರುರವರು ಹಾಗೂ ಇತರೆ ಎಲ್ಲಾ ತಾಲ್ಲೂಕು ಮಟ್ಟದ ಇಲಾಖಾ ಮುಖ್ಯಸ್ಥರೊಂದಿಗೆ ಮಾಲೂರು ತಾಲ್ಲೂಕು ಕ್ಷೇತ್ರ ಪ್ರವಾಸ

(i) ಚಿಕ್ಕತಿರುಪತಿಯಲ್ಲಿ ನಿರ್ಮಾಣಗೊಳ್ಳುತ್ತಿರುವ ಸಮುದಾಯ ಶೌಚಾಲಯದ ಪರಿಶೀಲನೆ

(ii) ಚಿಕ್ಕತಿರುಪತಿಯಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಕ್ಕೆ ಬೇಟಿ.

(iii) ಅಂಗನವಾಡಿ ಮತ್ತು ಶಾಲೆಗೆ ಭೇಟಿ

(iv) ಚಿಕ್ಕತಿರುಪತಿ ಗ್ರಾಮ ಪಂಚಾಯತಿಗೆ ಭೇಟಿ.

(v) ದೊಡ್ಡಕಡತೂರು ಗ್ರಾಮದ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಮತ್ತು ಐ.ಸಿ.ಡಿ.ಎಸ್. ಸಂಯೋಜಿತ ಕಾಮಗಾರಿ ವೀಕ್ಷಣೆ.

(vi) ಚಿಕ್ಕಕಡತೂರು ಗ್ರಾಮದ ಕಲ್ಯಾಣಿ ಪುನ:ಶ್ಚೇತನ ಕಾಮಗಾರಿ ವೀಕ್ಷಣೆ.

(vii) ನರೇಗಾ ಯೋಜನೆಯಡಿಯಲ್ಲಿ ಸಾಮಾಜಿಕ ಅರಣ್ಯ ಇಲಾಖೆರವರು ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಪ್ರದೇಶ, ನರಸಾಪುರ ಇಲ್ಲಿ ಬೆಳೆಸಿರುವ 25,000 ಹೆಚ್ಚು ಗಿಡಗಳ ಪರಿಶೀಲನೆ

26/9/19.

(ಉಮಾ ಮಹಾದೇವನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಹಾಗೂ ಕೋಲಾರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ.

**ಶ್ರೀ ಎಸ್.ಆರ್. ಉಮಾಶಂಕರ್, ಭಾ.ಆ.ಸೇ. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬೆಂಗಳೂರು ಹಾಗೂ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ದಾವಣಗೆರೆ ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ, ಬರ ನಿರ್ವಹಣೆ ಮತ್ತು ಪ್ರಗತಿ ಪರಿಶೀಲನೆ ಕುರಿತು ದಿ:12.9.2019ರಂದು ಜಿಲ್ಲಾಡಳಿತ ಭವನ, ದಾವಣಗೆರೆ ಇಲ್ಲಿ ಜರುಗಿದ ಸಭೆಯ ನಡಾವಳಿ.**

ಸಭೆಯಲ್ಲಿ ಉಪಸ್ಥಿತರು: ಜಿಲ್ಲಾಧಿಕಾರಿಗಳು ದಾವಣಗೆರೆ ಜಿಲ್ಲೆ, ಅಪರ ಜಿಲ್ಲಾಧಿಕಾರಿಗಳು ದಾವಣಗೆರೆ ಜಿಲ್ಲೆ, ಹಾಗೂ ದಾವಣಗೆರೆ ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತು ಜಿಲ್ಲೆಯ ಎಲ್ಲಾ ತಹಶೀಲ್ದಾರರು.

ಮಾನ್ಯ ಅಪರ ಜಿಲ್ಲಾಧಿಕಾರಿ, ದಾವಣಗೆರೆ ಜಿಲ್ಲೆ ಇವರು ಸಭೆಗೆ ಆಗಮಿಸಿದ ಎಲ್ಲಾ ಅಧಿಕಾರಿಗಳನ್ನು ಸಭೆಯ ಪ್ರಾರಂಭದಲ್ಲಿ ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

**ಕೃಷಿ ಇಲಾಖೆ:**

ದಾವಣಗೆರೆ ಜಿಲ್ಲೆಯಲ್ಲಿ 2019-20ನೇ ಸಾಲಿನಲ್ಲಿ ಜುಲೈ 31 ರವರೆಗೆ ಸರಾಸರಿ ಮಳೆ 313 ಮಿ.ಮಿ. ಇದ್ದು, ವಾಸ್ತವಿಕವಾಗಿ 205 ಮಿಮಿ ಮಳೆಯಾಗಿರುತ್ತದೆ. ಒಟ್ಟಾರೆ ಶೇ.34 ರಷ್ಟು ಮಳೆ ಕಡಿಮೆ ಆಗಿರುತ್ತದೆ. ದಾವಣಗೆರೆ ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನಲ್ಲಿ ಒಟ್ಟು 243238 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಗುರಿ ಹಮ್ಮಿಕೊಂಡಿದ್ದು, ಇದರಲ್ಲಿ 132127 ಹೆಕ್ಟೇರ್ ಪ್ರದೇಶದಲ್ಲಿ ಶೇ.54 ರಷ್ಟು ಬಿತ್ತನೆಯಾಗಿರುತ್ತದೆ. ಮುಂಗಾರು ಹಂಗಾಮಿನಲ್ಲಿ ಬೀಜಗಳ ಪೂರೈಕೆ ಹಾಗೂ ಇತರೆ ಹೂಡುವಳಿ ಯೋಜನೆಯಡಿಯಲ್ಲಿ ರಿಯಾಯತಿ ದರದಲ್ಲಿ ವಿವಿಧ ಬೆಳೆಗಳ ಹಾಗೂ ವಿವಿಧ ತಳಿಗಳ ಬಿತ್ತನೆ ಬೀಜಗಳ ಹಾಗೂ ವಿವಿಧ ತಳಿಗಳ ಬಿತ್ತನೆ 20 ರೈತ ಸಂಪರ್ಕ ಕೇಂದ್ರಗಳು ಹಾಗೂ 17 ಹೆಚ್ಚುವರಿ ಬೀಜ ವಿತರಣಾ ಕೇಂದ್ರಗಳ ಮುಖಾಂತರ ವಿತರಣೆ ಮಾಡಲಾಗಿದೆ. ಜಿಲ್ಲೆಯಲ್ಲಿ 2019-20ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಒಟ್ಟು 134724 ಮೆಟ್ರಿಕ್ ಟನ್ ರಸಗೊಬ್ಬರ ಬೇಡಿಕೆ ಇದ್ದು, ಜುಲೈ ಅಂತ್ಯದೊಳಗೆ 32326 ಮೆ.ಟನ್ ಇದ್ದು ಕಾಪು ದಾಸ್ತಾನು ಸೇರಿ ಒಟ್ಟು 38983 ಮೆ.ಟನ್ ರಸಗೊಬ್ಬರ ದಾಸ್ತಾನು ಲಭ್ಯವಿರುತ್ತದೆ. ಯಾವುದೇ ರಸಗೊಬ್ಬರ ಕೊರತೆ ಇರುವುದಿಲ್ಲ.

2019-20ನೇ ಸಾಲಿನಲ್ಲಿ ದ್ವಿದಳ ಧಾನ್ಯಗಳು, ತೃಣಧಾನ್ಯಗಳು ಉತ್ಪಾದನೆ ಹೆಚ್ಚು ಮಾಡಲು ಪ್ರಾಧಾನ್ಯತೆ ನೀಡಲಾಗಿದೆ. ಕೃಷಿ ಭಾಗ್ಯ ಯೋಜನೆಯಡಿ 1450 ಫಲಾನುಭವಿಗಳ ಗುರಿ ಇದುವರೆವಿಗೂ 449 ಕೃಷಿ ಹೊಂಡ ನಿರ್ಮಿಸಲಾಗಿದೆ. 499 ಫಲಾನುಭವಿಗಳಿಗೆ ಕೃಷಿ ಹೊಂಡ, ಡೀಸೆಲ್ ಪಂಪ್‌ಸೆಟ್, ತುಂತುರು ನೀರಾವರಿ ಉಪಕರಣಗಳನ್ನು ಪ.ಜಾ/ ಪ.ಪಂ ವರ್ಗದವರಿಗೆ ಶೇ.90 ರಷ್ಟು ಹಾಗೂ ಸಾಮಾನ್ಯ ವರ್ಗದವರಿಗೆ ಶೇ.80 ರಿಯಾಯತಿ ದರದಲ್ಲಿ ಒಟ್ಟು ರೂ.338.74 ಲಕ್ಷ ಸಹಾಯಧನವನ್ನು ಭರಿಸಲಾಗಿದೆ.

ದಾವಣಗೆರೆ ಜಿಲ್ಲೆಯಲ್ಲಿ 2019-20ನೇ ಸಾಲಿನಲ್ಲಿ ಒಟ್ಟು 08 ರೈತರ ಆತ್ಮಹತ್ಯೆ ಪ್ರಕರಣಗಳು ವರದಿಯಾಗಿದ್ದು, 7 ಪ್ರಕರಣಗಳು ತಿರಸ್ಕೃತವಾಗಿದ್ದು, 1 ಬಾಕಿ ಇದ್ದು ಈ ಕುರಿತು ಸೂಕ್ತ ದಾಖಲೆ ಸಂಗ್ರಹಿಸಲಾಗುತ್ತಿದೆ. ಜಿಲ್ಲೆಯಲ್ಲಿ ಹೊನ್ನಾಳಿ ತಾಲ್ಲೂಕಿನಲ್ಲಿ 54 ಹೆಕ್ಟೇರ್‌ನಲ್ಲಿ ಮೆಕ್ಕೆಜೋಳ, ಹರಿಹರ ತಾಲ್ಲೂಕಿನಲ್ಲಿ 10 ಹೆಕ್ಟೇರ್‌ನಲ್ಲಿ ಮೆಕ್ಕೆಜೋಳ ಮತ್ತು 180 ಹೆಕ್ಟೇರ್‌ನಲ್ಲಿ ಭತ್ತ ಹಾನಿಯಾಗಿರುತ್ತದೆಂದು ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ದಾವಣಗೆರೆ ಇವರು ತಿಳಿಸಿದರು.

**(ಕ್ರಮ: ಜಂಟಿ ಕೃಷಿ ನಿರ್ದೇಶಕರು, ದಾವಣಗೆರೆ)**

**ಸಾಮಾಜಿಕ ಭದ್ರತಾ ಯೋಜನೆ :** ಸಾಮಾಜಿಕ ಭದ್ರತಾ ಯೋಜನೆಯಡಿಯಲ್ಲಿ ಖಜಾನೆ-2 ವ್ಯಾಪ್ತಿಗೆ ಬರುವ ಫಲಾನುಭವಿಗಳ ಪಿಂಚಣಿ ನೀಡುವಲ್ಲಿ ತಾಂತ್ರಿಕ ತೊಂದರೆಗಳಿಂದಾಗಿ ವೇತನ ಸಂದಾಯ ತಡವಾಗುತ್ತಿದ್ದು, ಈ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮವಹಿಸಲು ಎಲ್ಲಾ ತಹಶೀಲ್ದಾರರಿಗೆ ಸೂಚಿಸಲಾಯಿತು.

ಸಾಮಾಜಿಕ ಭದ್ರತಾ ಪಿಂಚಣಿಯನ್ನು ಅರ್ಹರಿಗೆ ಮಂಜೂರು ಮಾಡಲು ಮನೆ ಮನೆಗೆ ಭೇಟಿ ನೀಡಿ ಅರ್ಹರನ್ನು ಗುರುತಿಸಿ ಭದ್ರತಾ ಪಿಂಚಣಿ ಮಂಜೂರು ಮಾಡಲು ಅನುಬಂಧವನ್ನು ತಯಾರಿಸಿ ಗ್ರಾಮವಾರು, ಹೋಬಳಿವಾರು ಹಾಗೂ ತಾಲ್ಲೂಕುವಾರು ಮಾಹಿತಿಯನ್ನು ಎಲ್ಲಾ ತಹಶೀಲ್ದಾರರಿಗೆ ತಿಳಿಸಲಾಗಿದ್ದು, ಸದರಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಲಾಯಿತು. ರಾಷ್ಟ್ರೀಯ ಕುಟುಂಬ ನೆರವು ಯೋಜನೆ ಮತ್ತು ಅಂತ್ಯಸಂಸ್ಕಾರ ಯೋಜನೆಗಳಿಗೆ ಸಂಬಂಧಿಸಿದಂತೆ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಗೆ ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ ಎಂದು ಸಭೆಯಲ್ಲಿ ತಿಳಿಸಲಾಯಿತು.

**(ಕ್ರಮ: ಸಹಾಯಕ ನಿರ್ದೇಶಕರು, ಸಾ.ಭ.ಯೋ & ತಹಶೀಲ್ದಾರರು)**

**ಆಹಾರ ಇಲಾಖೆ:**

ದಾವಣಗೆರೆ ಜಿಲ್ಲೆಯಲ್ಲಿ 25792 ಅಂತ್ಯೋದಯ, 354438 ಆದ್ಯತಾ (ಬಿಪಿಎಲ್) ಮತ್ತು 8811 ಎಪಿಎಲ್ ಸೇರಿ ಒಟ್ಟು 389041 ಪಡಿತರ ಚೀಟಿಗಳಿರುತ್ತವೆ. ಜಿಲ್ಲೆಯಲ್ಲಿನ ಎಲ್ಲಾ ಪಡಿತರ ಚೀಟಿಗಳಿಗೆ ಆಧಾರ್ ಜೋಡಣೆಯಾಗಿರುತ್ತದೆಂದು, ಮುಖ್ಯಮಂತ್ರಿ ಅನಿಲ ಭಾಗ್ಯ ಯೋಜನೆಯಡಿಯಲ್ಲಿ 629 ಫಲಾನುಭವಿಗಳಿಗೆ ಅಡುಗೆ ಅನಿಲ ಸಂಪರ್ಕ ಒದಗಿಸಲು ಗುರಿ ನಿಗದಿಪಡಿಸಲಾಗಿದ್ದು, ಎಲ್ಲಾ 629 ಫಲಾನುಭವಿಗಳಿಗೆ ಅಡುಗೆ ಅನಿಲ ಸಂಪರ್ಕ ಒದಗಿಸಲಾಗಿದ್ದು, ಶೇ.100 ರಷ್ಟು ಗುರಿ ಸಾಧಿಸಲಾಗಿರುತ್ತದೆಂದು ಉಪನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ದಾವಣಗೆರೆ ಇವರು ಸಭೆಗೆ ವಿವರಿಸಿದರು.

**(ಕ್ರಮ: ಉಪನಿದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ದಾವಣಗೆರೆ)**

**ಸರ್ವೇ ಇಲಾಖೆ:**

ದಾವಣಗೆರೆ ಜಿಲ್ಲೆಯಲ್ಲಿ ಒಟ್ಟು 8026 ಪೋಡಿ ಪ್ರಕರಣಗಳು ಇದ್ದು, ಒಟ್ಟು ಸರ್ಕಾರಿ ಭೂಮಾಪಕರ ಸಂಖ್ಯೆ 96 ಇರುತ್ತದೆಂದು, ಆಗಸ್ಟ್ 2019 ಅಂತ್ಯಕ್ಕೆ 2520 ಪೋಡಿ ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದ್ದು, ಸರಾಸರಿ ಶೇ.26.25 ಇರುತ್ತದೆಂದು ಉಪನಿರ್ದೇಶಕರು, ಸರ್ವೇ ಇಲಾಖೆ ಇವರು ಸಭೆಗೆ ತಿಳಿಸಿದರು. ಇನ್ನು ಹೆಚ್ಚಿನ ಪ್ರಗತಿ ಸಾಧಿಸಲು ಸಭಾಧ್ಯಕ್ಷರು ಸೂಚಿಸಿದರು.

**(ಕ್ರಮ: ಉಪನಿರ್ದೇಶಕರು, ಸರ್ವೇ ಇಲಾಖೆ, ದಾವಣಗೆರೆ)**

**ತೋಟಗಾರಿಕೆ ಇಲಾಖೆ :**

ದಾವಣಗೆರೆ ಜಿಲ್ಲೆ ಹೊನ್ನಾಳಿ ತಾಲ್ಲೂಕಿನಲ್ಲಿ 2 ಹೆಕ್ಟೇರ್ ಅಡಿಕೆ ಬೆಳೆ ನಾಶವಾಗಿದೆಯೆಂದು, ಹರಿಹರ ತಾಲ್ಲೂಕಿನಲ್ಲಿ ಯಾವುದೇ ತೋಟಗಾರಿಕೆ ಬೆಳೆ ಹಾನಿಯಾಗಿರುವುದಿಲ್ಲವೆಂದು ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ, ದಾವಣಗೆರೆ ಇವರು ಸಭೆಗೆ ತಿಳಿಸಿದರು.

**(ಕ್ರಮ: ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ, ದಾವಣಗೆರೆ)**

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ:-**

ಇಲಾಖೆ ಪ್ರಗತಿ ಪರಿಶೀಲಿಸಿದ ಸಭಾಧ್ಯಕ್ಷರು ಸಾಂಕ್ರಾಮಿಕ ರೋಗಗಳ ಬಗ್ಗೆ ಸಾರ್ವಜನಿಕರಿಗೆ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸುವಂತೆ ಮಾರ್ಗದರ್ಶನ ನೀಡಲು ಸಭಾಧ್ಯಕ್ಷರು ಸೂಚಿಸಿದರು. ಮಳೆ ಹೆಚ್ಚಾಗಿ ಬಿದ್ದಿರುವುದರಿಂದ ಹಾಗೂ ಜಿಲ್ಲೆಯಲ್ಲಿ ಡೆಂಗ್ಯೂ ಜ್ವರದ ಹಾವಳಿ ಇರುವುದರಿಂದ ರೋಗ ನಿಯಂತ್ರಣ ಹಾಗೂ ರೋಗ ಬರದಂತೆ ಕೈಗೊಳ್ಳಬಹುದಾದ ಮುಂಜಾಗರೂಕ ಕ್ರಮಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಲು ಕ್ರಮ ವಹಿಸಬೇಕು. ಈ ಬಗ್ಗೆ ಗ್ರಾಮ ಪಂಚಾಯಿತಿಗಳ ವತಿಯಿಂದ ಸ್ವಚ್ಛತೆ ಬಗ್ಗೆ ಹೆಚ್ಚಿನ ಪ್ರಚಾರ ಕೈಗೊಳ್ಳಬೇಕು, ಕೊಳಚೆ ಉಂಟಾಗದಂತೆ ಹಾಗೂ ಇತರೆ ತ್ಯಾಜ್ಯ ವಸ್ತುಗಳನ್ನು ಕ್ರಮವಾಗಿ ವಿಲೇ ಮಾಡುವ ಬಗ್ಗೆ

ಇಲಾಖೆ ವತಿಯಿಂದ ಗ್ರಾಮ ಪಂಚಾಯಿತಿಗಳಿಗೆ ಅಗತ್ಯ ಮಾರ್ಗದರ್ಶನ ನೀಡಲು ಸಭಾಧ್ಯಕ್ಷರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರಿಗೆ ಸೂಚಿಸಿದರು.

ಹೊನ್ನಾಳಿ ತಾಲ್ಲೂಕಿನಲ್ಲಿ ವೈರಲ್ ಜ್ವರದ ಹಾವಳಿ ಬಗ್ಗೆ ದಿನಪತ್ರಿಕೆಗಳಲ್ಲಿ ವರದಿ ಪ್ರಕಟವಾಗಿದ್ದು, ಕೂಡಲೇ ಸ್ಥಳ ಪರಿಶೀಲನೆ ನಡೆಸಿ ಸೂಕ್ತ ಮುಂಜಾಗರೂಕ ಹಾಗೂ ಪರಿಹಾರ ಕ್ರಮಗಳನ್ನು ಕೈಗೊಳ್ಳಲು ಸಭಾಧ್ಯಕ್ಷರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರಿಗೆ ಸೂಚಿಸಿದರು.

ಗ್ರಾಮ ಪಂಚಾಯಿತಿ ವತಿಯಿಂದ ಒಂದು ತಂಡ ರಚನೆ ಮಾಡಿ ಗ್ರಾಮದ ಸ್ವಚ್ಛತೆ ಬಗ್ಗೆ ಅರಿವು ಮೂಡಿಸುವುದರ ಜೊತೆಗೆ ಆರೋಗ್ಯ ಇಲಾಖೆ ಸಹಕಾರದೊಂದಿಗೆ ಸೊಳ್ಳೆಗಳ ನಿಯಂತ್ರಣಕ್ಕೆ ಅಗತ್ಯ ಕ್ರಮ ವಹಿಸಲು ಹಾಗೂ ಸ್ವಚ್ಛತಾ ಆಂದೋಲನ ನಡೆಯುತ್ತಿದ್ದು, ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಗ್ರಾಮ ಪಂಚಾಯಿತಿಗಳಿಗೆ ನಿರ್ದೇಶನ ನೀಡಲು ಎಲ್ಲಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸಭಾಧ್ಯಕ್ಷರು ಸೂಚಿಸಿದರು.

**(ಕ್ರಮ: 1. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ದಾವಣಗೆರೆ 2. ಜಿಲ್ಲೆಯ ಎಲ್ಲಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು)**

**ಸಮಾಜ ಕಲ್ಯಾಣ ಇಲಾಖೆ:**

ಜಿಲ್ಲೆಯಲ್ಲಿ ವಿಶೇಷ ಘಟಕ/ಗಿರಿಜನ ಉಪಯೋಜನೆ (ಎಸ್.ಸಿ.ಪಿ/ಟಿ.ಎಸ್.ಪಿ) ಕಾಮಗಾರಿಗಳ ಅನುಷ್ಠಾನ ಹಿಂದಿನ ಸಾಲಿನಲ್ಲಿ ಉತ್ತಮವಾಗಿ ಮಾಡಲಾಗಿದ್ದು, ಈ ಸಾಲಿನಲ್ಲಿ ಇನ್ನೂ ಉತ್ತಮ ಸಾಧನೆ ಮಾಡಲು ಅನುಕೂಲವಾಗುವಂತೆ ಎಲ್ಲಾ ಅನುಷ್ಠಾನ ಇಲಾಖೆಗಳಲ್ಲಿ ವಿಶೇಷ ಘಟಕ/ಗಿರಿಜನ ಉಪಯೋಜನೆ (ಎಸ್.ಸಿ.ಪಿ/ಟಿ.ಎಸ್.ಪಿ) ಕಾಮಗಾರಿಗಳ ಕ್ರಿಯಾ ಯೋಜನೆಗಳಿಗೆ ಕೂಡಲೇ ಅನುಮೋದನೆ ಪಡೆದು ಕಾಮಗಾರಿಗಳನ್ನು ನಿಗಧಿತ ಅವಧಿಯಲ್ಲಿ ಅನುಷ್ಠಾನಗೊಳಿಸುವ ಬಗ್ಗೆ ಪಾಲನಾ ಕ್ರಮಗಳನ್ನು ಅನುಸರಿಸಲು ಉಪ ನಿರ್ದೇಶಕರು, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಇವರಿಗೆ ಸಭಾಧ್ಯಕ್ಷರು ಸೂಚಿಸಿದರು.

ಜಿಲ್ಲೆಯಲ್ಲಿನ ಹಾಸ್ಟೆಲ್‌ಗಳ ಸುಧಾರಣೆ ಕಡೆಗೆ ಗಮನ ಹರಿಸುವುದು ಸೂಕ್ತವಾಗಿದ್ದು, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ತಮ್ಮ ಇಲಾಖೆಯ ಕೆಲಸದ ನಿಮಿತ್ತ ಪ್ರವಾಸ ಮಾಡುವ ಸಮಯದಲ್ಲಿ ಆ ಭಾಗದಲ್ಲಿ ಬರುವ ಹಾಸ್ಟೆಲ್‌ಗಳಿಗೆ ಭೇಟಿ ನೀಡಿ ಪರಿಶೀಲಿಸುವುದು ಹಾಗೂ ಹಾಸ್ಟೆಲ್‌ನಲ್ಲಿ ಕಂಡು ಬರುವ ನ್ಯೂನ್ಯತೆಗಳನ್ನು ಇಲಾಖೆ ಅಧಿಕಾರಿಗಳ ಗಮನಕ್ಕೆ ತರುವ ಬಗ್ಗೆ ಕ್ರಮ ವಹಿಸಬೇಕು. ಪ್ರತಿಯೊಬ್ಬ ಅಧಿಕಾರಿ ತಮ್ಮ ಪ್ರವಾಸ ಕಾಲದಲ್ಲಿ ಪ್ರತಿ ತಿಂಗಳು ಕನಿಷ್ಟ 10 ಹಾಸ್ಟೆಲ್‌ಗಳಿಗೆ ಭೇಟಿ ನೀಡಿ ಪರಿಶೀಲಿಸಲು ಸಭಾಧ್ಯಕ್ಷರು ಸೂಚಿಸಿದರು.

**(ಕ್ರಮ:1. ಉಪ ನಿರ್ದೇಶಕರು, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ. 2. ಜಿಲ್ಲೆಯ ಎಲ್ಲಾ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು)**

**ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ:**

ಗ್ರಾಮಸ್ಥರ ಆರೋಗ್ಯ ಸುಧಾರಣೆಗೆ ಶುದ್ಧ ಕುಡಿಯುವ ನೀರು ಅತ್ಯಾವಶ್ಯಕವಾಗಿದ್ದು, ಹರಿಹರ ತಾಲ್ಲೂಕು ಉಕ್ಕಡಗಾತ್ರಿ ಗ್ರಾಮದ ಅಕ್ಕ ಪಕ್ಕದ ಹಳ್ಳಿಗಳಲ್ಲಿ ಶುದ್ಧ ಕುಡಿಯುವ ನೀರು ಲಭ್ಯವಾಗದ್ದರಿಂದ ಉಕ್ಕಡಗಾತ್ರಿ ದೇವಸ್ಥಾನ ಸಮಿತಿಯವರನ್ನು ಸಂಪರ್ಕಿಸಿ ಅಕ್ಕ ಪಕ್ಕದ ಹಳ್ಳಿಗಳಿಗೆ ಸಾಧ್ಯವಾದಷ್ಟು ಶುದ್ಧ ಕುಡಿಯುವ ನೀರನ್ನು ಒದಗಿಸಲು ದೇವಸ್ಥಾನದ ವತಿಯಿಂದ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪನೆಗೆ ಕೋರಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಸಭಾಧ್ಯಕ್ಷರ ಗಮನಕ್ಕೆ ತಂದರು. ಇದು ಉತ್ತಮ ಕ್ರಮವಾಗಿದ್ದು, ಜಿಲ್ಲೆಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳ ಸ್ಥಾಪನೆ ಅಗತ್ಯ ಇರುವ ಗ್ರಾಮಗಳಲ್ಲಿ ಶುದ್ಧ

ಕುಡಿಯುವ ನೀರಿನ ಘಟಕಗಳ ಸ್ಥಾಪನೆಗಾಗಿ ಸಮೀಪದ ಪ್ರಸಿದ್ಧ ದೊಡ್ಡ ದೊಡ್ಡ ದೇವಸ್ಥಾನಗಳ ಮುಖಂಡರನ್ನು ಸಂಪರ್ಕಿಸಿ ದೇವಸ್ಥಾನದ ವತಿಯಿಂದ ಅಥವಾ ದಾನಿಗಳಿಂದ ಶುದ್ಧ ಕುಡಿಯುವ ನೀರಿನ ಘಟಕಗಳ ಸ್ಥಾಪನೆಗೆ ಅವರುಗಳ ಮನವೊಲಿಸಲು ಕ್ರಮ ವಹಿಸುವಂತೆ ಎಲ್ಲಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸಭಾಧ್ಯಕ್ಷರು ಸೂಚಿಸಿದರು.

**(ಕ್ರಮ: ಜಿಲ್ಲೆಯ ಎಲ್ಲಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು)**

**ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ:**

ಯೋಜನೆಯ ಪ್ರಗತಿ ಪರಿಶೀಲನೆ ನಡೆಸಿದ ಸಭಾಧ್ಯಕ್ಷರು, ಮುಖ್ಯ ಮಂತ್ರಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಯೋಜನೆ ಅಡಿ ಕೂಲಿಕಾರರಿಗೆ ಸಕಾಲದಲ್ಲಿ ಕೂಲಿ ಪಾವತಿಸಲು ನಿರ್ದೇಶನ ನೀಡಿರುವುದರಿಂದ ವಿಳಂಬಕ್ಕೆ ಅವಕಾಶವಿಲ್ಲದಂತೆ ಕೂಲಿ ಪಾವತಿಸಲು ಕ್ರಮ ವಹಿಸಬೇಕು. ಯೋಜನೆ ಅಡಿ ಶಾಲಾ ಕಾಂಪೌಂಡ್, ಶೌಚಾಲಯ, ಅಂತರ್ಜಲ ಹೆಚ್ಚಳಕ್ಕಾಗಿ ಇಂಗು ಗುಂಡಿಗಳ ನಿರ್ಮಾಣ ಮುಂತಾದ ಕಾಮಗಾರಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಕೈಗೊಳ್ಳಲು ಸಭಾಧ್ಯಕ್ಷರು ಎಲ್ಲಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಿದರು.

2013-14ನೇ ಸಾಲಿನ ಅಂಗನವಾಡಿ ಶೌಚಾಲಯ ಕಾಮಗಾರಿಗಳು ಇನ್ನೂ ಮುಕ್ತಾಯ ಹಂತದಲ್ಲಿ ಇದ್ದು, ಈಗಾಗಲೇ ವಿಳಂಬವಾಗಿರುವುದರಿಂದ, ಇನ್ನು 10 ದಿನಗಳ ಒಳಗಾಗಿ ಪೂರ್ಣ ಮಾಡಲು ಎಲ್ಲಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಯವರು ಸೂಚಿಸಿದರು.

**(ಕ್ರಮ: ಜಿಲ್ಲೆಯ ಎಲ್ಲಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು)**

**ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ:**

ಇಲಾಖೆ ಪ್ರಗತಿ ಪರಿಶೀಲಿಸಿದ ಸಭಾಧ್ಯಕ್ಷರು ಅಪೌಷ್ಟಿಕ ಮಕ್ಕಳಲ್ಲಿ ಪೌಷ್ಟಿಕತೆ ಹೆಚ್ಚಿಸುವ ಮೂಲಕ ಅವರ ಆರೋಗ್ಯ ಸುಧಾರಣೆಗೆ ಕ್ರಮ ವಹಿಸಬೇಕು. ಇದಕ್ಕಾಗಿ ಶಿಕ್ಷಣ ಮತ್ತು ಆರೋಗ್ಯ ಇಲಾಖೆಗಳ ಸಹಕಾರ ಪಡೆದು ಮಕ್ಕಳ ಗುರುತಿಸುವಿಕೆ ಮತ್ತು ಸೂಕ್ತ ವೈದ್ಯಕೀಯ ನೆರವು ಮುಂತಾದ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಕ್ರಮ ವಹಿಸಲು ಉಪ ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ದಾವಣಗೆರೆ ಇವರಿಗೆ ಸಭಾಧ್ಯಕ್ಷರು ಸೂಚಿಸಿದರು.

**(ಕ್ರಮ: ಉಪ ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ದಾವಣಗೆರೆ)**

**ದಾವಣಗೆರೆ ಮಹಾನಗರ ಪಾಲಿಕೆ:**

ನಗರ ಪ್ರದೇಶಗಳಲ್ಲಿ ಕಸ ಸಂಗ್ರಹಣೆಗಾಗಿ ಪ್ರತಿ ಮನೆ ಮನೆಗೆ ಸಂಚರಿಸುವ ಕಸ ಸಂಗ್ರಹಣಾ ವಾಹನಗಳ ಮೂಲಕ ಪರಿಸರ ಸ್ವಚ್ಚತೆ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವ ಭಿತ್ತಿ ಪತ್ರ ಹಾಗೂ ಇತರೆ ಮಾಧ್ಯಮದ ಮೂಲಕ ಹೆಚ್ಚಿನ ಪ್ರಚಾರ ಮಾಡಲು ಸಭಾಧ್ಯಕ್ಷರು ಸೂಚಿಸಿದರು.

**ಶಿಕ್ಷಣ ಇಲಾಖೆ:**

ಲಿಂಕ್‌ಡಾಕ್ಯೂಮೆಂಟ್‌ನಲ್ಲಿ ಶಿಕ್ಷಣ ಇಲಾಖೆ ಸೇರ್ಪಡೆ ಮತ್ತು ಮಾರ್ಪಾಡು ಲೆಕ್ಕ ಶೀರ್ಷಿಕೆ ಅಡಿ ಶಾಲೆಗಳ ದುರಸ್ಥಿಗಾಗಿ ಲಭ್ಯ ಇರುವ ಅನುದಾನದಲ್ಲಿ ಕಡಿಮೆ ಮೊತ್ತದ ಸಣ್ಣ ಸಣ್ಣ ಕಾಮಗಾರಿಗಳಾಗಿರುವುದರಿಂದ ಕಾಮಗಾರಿಗಳನ್ನು ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆ ವತಿಯಿಂದ ತ್ವರಿತವಾಗಿ ಅನುಷ್ಠಾನಗೊಳಿಸಲು ಅವಕಾಶವಾಗದೇ ವಿಳಂಬವಾಗುವುದರಿಂದ ಶಾಲಾ ದುರಸ್ಥಿಗೆ ನಿಗದಿಪಡಿಸಲಾಗಿರುವ ಅನುದಾನವನ್ನು ಆಯಾ ಶಾಲಾ ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಿದಲ್ಲಿ ಕಾಮಗಾರಿ

ತ್ವರಿತವಾಗಿ ಆಗಬಹುದು ಎನ್ನುವ ನಿರೀಕ್ಷೆಯಲ್ಲಿ ಗ್ರಾಮ ಪಂಚಾಯಿತಿಗಳಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ ಪರಿಶೀಲನೆ ನಡೆಸಲಾಗುವುದು ಎಂದು ಸಭಾಧ್ಯಕ್ಷರು ಸಭೆಯಲ್ಲಿ ತಿಳಿಸಿದರು.

**ನಗರಾಭಿವೃದ್ಧಿ ಕೋಶ :**

ಜಿಲ್ಲಾ ನಗರಾಭಿವೃದ್ಧಿ ಕೋಶದಲ್ಲಿ ಸರ್ಕಾರದ ವಿವಿಧ ಯೋಜನೆಗಳ ಅಡಿಯಲ್ಲಿ ಬಿಡುಗಡೆಯಾದ ಅನುದಾನದ ವಿವರ ಮತ್ತು ಯೋಜನಾವಾರು ಖರ್ಚಾದ ಅನುದಾನದ ವಿವರ ಮತ್ತು ಪ್ರಗತಿಯ ವಿವರವನ್ನು ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ, ದಾವಣಗೆರೆ ಇವರು ಸಭೆಗೆ ತಿಳಿಸಿದರು.

ಉಪವಿಭಾಗಾಧಿಕಾರಿ, ದಾವಣಗೆರೆ ಇವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.



(ಎಸ್.ಆರ್. ಉಮಾಶಂಕರ್, ಭಾ.ಆ.ಸೇ..)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ)
ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

ಮಾನ್ಯ ಎಸ್.ಆರ್.ಉಮಾಶಂಕರ್ ಭಾ.ಆ.ಸೇ., ಅಧ್ಯಕ್ಷರು ದಾವಣಗೆರೆ ಸ್ಮಾರ್ಟ್ ಸಿಟಿ ಲಿಮಿಟೆಡ್ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮತ್ತು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ), ಕರ್ನಾಟಕ ಸರ್ಕಾರ ಇವರು ಮತ್ತು ಮಾನ್ಯ ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ, ದಾವಣಗೆರೆ ರವರೊಂದಿಗೆ ದಿನಾಂಕ: 12.09.2019 ರಂದು ದಾವಣಗೆರೆ ಸ್ಮಾರ್ಟ್ ಸಿಟಿ ಯೋಜನೆಯ ಕಾಮಗಾರಿ ವೀಕ್ಷಣೆ ಕೈಗೊಂಡ ವಿವರಗಳು.

ಕಾಮಗಾರಿ ವೀಕ್ಷಣೆ :-

1. ಕಾಮಗಾರಿ ಹೆಸರು :- ಎಸ್‌ಪಿಎಸ್ ನಗರ ಮಳೆ ನೀರು ಚರಂಡಿಯ ಆಧುನೀಕರಣ ಕಾಮಗಾರಿ.

ಕಾಮಗಾರಿ ವೀಕ್ಷಣೆಯ ಛಾಯ ಚಿತ್ರಗಳು :-




2. ಕಾಮಗಾರಿ ಹೆಸರು :- ಕೊಂಡಜ್ಜಿ ರಸ್ತೆ ಮಳೆ ನೀರು ಚರಂಡಿಯ (ಆ1, ಆ10,ಆ2,ಆ3,ಆ5 & ಆ6) ಆಧುನೀಕರಣ ಕಾಮಗಾರಿ.



3. ಉದ್ದೇಶಿಸಿರುವ ಕಾಮಗಾರಿ ಹೆಸರು :- ಕ್ರೀಡಾಂಗಣ ಅಭಿವೃದ್ಧಿ, ಕ್ರೀಡಾಂಗಣ ಸ್ಥಳ ಪರಿಶೀಲನೆಯನ್ನು ಮಾನ್ಯರು ಕೈಗೊಂಡ ಸಂದರ್ಭದಲ್ಲಿ ಅಲ್ಲಿನ ಜನ ಪ್ರತಿನಿಧಿಗಳು ಮಾನ್ಯರೊಂದಿಗೆ ಸಂವಾದ ನಡೆಸಿದ ಛಾಯಾಚಿತ್ರ.



(ಎಸ್.ಆರ್. ಉಮಾಶಂಕರ್, ಭಾ.ಆ.ಸೇ.)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ)
ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ
ಮತ್ತು ಅಧ್ಯಕ್ಷರು, ದಾವಣಗೆರೆ ಸ್ಮಾರ್ಟ್ ಸಿಟಿ ಲಿಮಿಟೆಡ್